ಸಂಪುಟ: 13 Volume | ಸಂಚಿಕೆ: 308 Issue | ಪುಟಗಳು 08 Pages | ಮಂಗಳವಾರ 27 ಜನವರಿ 2026 | ₹6 | PRGINO.120927 (RNINO: KARKAN/2011/48371) | BDR/054/2026-2027 | www.mallammanudi.in | mallammanudi@gmail.com | 9448604450

ಬೀದರ | ಕಲ್ಬುರ್ಗಿ | ಯಾದಗಿರಿ | ರಾಯಚೂರು | ಕೊಪ್ಪಳ | ಬಳ್ಳಾರಿ | ಬಾಗಲಕೋಟೆ | ವಿಜಯನಗರ & ವಿಜಯಪುರ ಜಿಲ್ಲೆಗಳಲ್ಲಿ ಏಕಕಾಲಕ್ಕೆ ಪ್ರಕಟ

# ಮಲ್ಲಮ್ಮ ನುಡಿ

MN ಸತ್ಯಮೇವ ಜಯತೆ
ಕನ್ನಡ ಕಿರಣ
Mallammanudi Regional News Paper
ಪ್ರಾದೇಶಿಕ ಕನ್ನಡ ದೈನಿಕ
ಸಂಪಾದಕರು: ರಮೇಶ ರೆಡ್ಡಿ

**ಬೆಳಗು**

ನಮ್ಮಲ್ಲಿ ಮಗೆ ಶ್ರದ್ಧೆಯಿರಲಿ, ಮಹತ್ತರ ಶ್ರದ್ಧೆಯೇ ಮಹಾಕಾರ್ಯಗಳ ಉಗಮಸ್ಥಾನ.
–ಸ್ವಾಮಿ ವಿವೇಕಾನಂದ

## ಗಣರಾಜ್ಯೋತ್ಸವ ಸಂದೇಶ

• ಮಲ್ಲಮ್ಮ ನುಡಿ ವಾರ್ತೆ ಶಿಕಾರಿಪುರ

ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಸ್ವಕ್ಷೇತ್ರ ಶಿಕಾರಿಪುರದಲ್ಲಿ ನಡೆದ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ಪಾಲ್ಗೊಂಡು ಧ್ವಜಾರೋಹಣ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಗೌರವ ವಂದನೆ ಸ್ವೀಕರಿಸಿ ಆಕರ್ಷಕ ಪಥಸಂಚಲನ ವೀಕ್ಷಿಸಿ, ನಂತರ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಗಣರಾಜ್ಯೋತ್ಸವದ ಸಂದೇಶ ನೀಡಿದರು. ತಹಶೀಲ್ದಾರ್ ಶ್ರೀಮತಿ ಮಂಜುಳಾ ಭಜಂತ್ರಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ನಾಗರಾಜ್, ಡಿ.ವೈ.ಎಸ್.ಪಿ ಕೇಶವ್, ಪುರಸಭೆಯ ಮುಖ್ಯಾಧಿಕಾರಿ ಭರತ್, ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಮಧುಕೇಶ್ ಮತ್ತಿತರ ಪ್ರಮುಖರು ಉಪಸ್ಥಿತರಿದ್ದರು.





ಭಾರತದ ಏಕತೆಯ ದಿನವಾದ ಗಣರಾಜ್ಯೋತ್ಸವದಂದು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಅವರುಇ ನವದೆಹಲಿಯ ನಿವಾಸದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದ ಬಳಿಕ ಸೈನಿಕರ ಜೊತೆಗಿನ ಅವಿಸ್ಮರಣೀಯ ಕ್ಷಣ.

## ಹೊಸ ಕಾಯ್ದೆ ಅನುಷ್ಠಾನ ಅಸಾಧ್ಯ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಕೇಂದ್ರದ ಜಿರಾಮ್‌ಜಿ ಹೊಸ ಕಾಯಿದೆ ಜಾರಿ ಅಸಾಧ್ಯ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಸ್ಪಷ್ಟಪಡಿಸಿದ್ದಾರೆ.

ಕೆಪಿಸಿಸಿ ಕಚೇರಿ ಬಳಿ ಮಾಧ್ಯಮಗಳಿಗೆ ಪ್ರತಿಕ್ರಿಯೆ ನೀಡಿ, ಮನರೇಗಾ ಉಳಿಸುವ ಸಲುವಾಗಿ ನಾಳೆ ರಾಜಭವನ ಚಲೋ ನಡೆಸಲಾಗುವುದು. ಪ್ರತಿ ತಾಲೂಕಿನಲ್ಲೂ ಕನಿಷ್ಠ ಐದು ಕಿಲೋಮೀಟರ್ ಪಾದಯಾತ್ರೆ ನಡೆಸಲಾಗುವುದು. 20 ವರ್ಷಗಳ ಹಿಂದೆ ಸೋನಿಯಾಗಾಂಧಿ ಅವರ ನಾಯಕತ್ವದಲ್ಲಿ ಮನಮೋಹನ್ ಸಿಂಗ್ ಅವರ ಸರ್ಕಾರ ಜಾರಿಗೆ ತಂದಿದ್ದ ಸಾಂವಿಧಾನಿಕ ಹಕ್ಕಾಗಿ ಬಂದಿರುವ ಮನರೇಗಾವನ್ನು ನಾಶ ಮಾಡಲು



ಹೊರಟಿರುವುದು ನಮಗೆಲ್ಲಾ ಆಶ್ಚರ್ಯ ಉಂಟು ಮಾಡಿದೆ. ಮಹಾತ್ಮಗಾಂಧಿ ಅವರ ಹೆಸರಿನಲ್ಲಿ ಪ್ರಾರಂಭವಾದ ಯೋಜನೆ ಗ್ರಾಮೀಣ ಭಾಗದ ಜನರ ಉದ್ಯೋಗದ ಹಕ್ಕಿಗೆ ಖಾತ್ರಿ ನೀಡಿತ್ತು. ಆದರೆ ಈ ಹಕ್ಕು ಈಗ ಮೊಟಕಾಗಿದೆ. ಆದಕಾರಣ ಇಡೀ ದೇಶದ ಉದ್ದಗಲಕ್ಕೂ ಈ ಬಗ್ಗೆ ಹೋರಾಟ ರೂಪಿಸಲಾಗಿದೆ ಎಂದಿದ್ದಾರೆ.

# ಪರಾಕ್ರಮ ಚಿತ್ರಣ, ವೈಭವ ಅನಾವರಣ

## ಅದ್ಧೂರಿಯಾಗಿ ನೆರವೇರಿದ ಭಾರತ ದೇಶದ 77ನೇ ಗಣರಾಜ್ಯೋತ್ಸವ | ಶತ್ರು ದೇಶಕ್ಕೆ ವೀರತ್ವದ ಸಂದೇಶ

• ಮಲ್ಲಮ್ಮ ನುಡಿ ವಾರ್ತೆ ನವದೆಹಲಿ

ಭಾರತ ದೇಶದ 77 ನೇ ಗಣರಾಜ್ಯೋತ್ಸವವು ಅದ್ದೂರಿಯಾಗಿ ನೆರವೇರಿತು. ಆಪರೇಷನ್ ಸಿಂಧೂರ್ ಸಮಯದಲ್ಲಿ ಬಳಸಲಾದ ಮಾರಕ ಆಯುಧ ವ್ಯವಸ್ಥೆಗಳನ್ನು ಒಳಗೊಂಡ ತನ್ನ ಮಿಲಿಟರಿ ಪರಾಕ್ರಮದ ಭವ್ಯ ಪ್ರದರ್ಶನದೊಂದಿಗೆ ನೆರವೇರಿತು. ಕ್ಷಿಪಣಿಗಳು, ಯುದ್ಧ ವಿಮಾನಗಳು, ಹೊಸದಾಗಿ ನಿರ್ಮಿಸಲಾದ ಘಟಕಗಳು ಪ್ರೇಕ್ಷಕರ ಗಮನ ಸೆಳೆದವು. ಪ್ರಮುಖ ಶಸ್ತ್ರಾಸ್ತ್ರ ವ್ಯವಸ್ಥೆಗಳಲ್ಲಿ ಬ್ರಹ್ಮೋಸ್ ಮತ್ತು ಆಕಾಶ್ ಶಸ್ತ್ರಾಸ್ತ್ರ ವ್ಯವಸ್ಥೆಗಳು, ರಾಕೆಟ್ ಲಾಂಚರ್ ಸೂರ್ಯಸ, ಮುಖ್ಯ ಯುದ್ಧ ಟ್ಯಾಂಕ್ ಅರ್ಜುನ್ ಮತ್ತು ಸ್ಥಳೀಯವಾಗಿ ನಿರ್ಮಿಸಲಾದ ಮಿಲಿಟರಿ ವೇದಿಕೆಗಳು ಮತ್ತು ಹಾರ್ಡ್‌ವೇರ್ ಸೇರಿದ್ದವು.

**ವಂದೇ ಮಾತರಂ ಝಲಕು:** ಯುರೋಪಿಯನ್ ಕೌನ್ಸಿಲ್ ಅಧ್ಯಕ್ಷೆ ಆಂಟೋನಿಯೊ ಕೋಸ್ಟಾ, ಯುರೋಪಿಯನ್ ಆಯೋಗದ ಅಧ್ಯಕ್ಷೆ ಉರ್ಸುಲಾ ವಾನ್ ಡೆರ್ ಲೇಯೆನ್ ಅವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡಿದ್ದರು. ರಾಷ್ಟ್ರರಾಜಧಾನಿಯ ಕರ್ತವ್ಯ ಪಾತ್‌ನಲ್ಲಿ ನಡೆದ ಕಾರ್ಯಕ್ರಮದ ಪ್ರಮುಖ ವಿಷಯ 150 ವರ್ಷ ಪೂರೈಸಿದ ವಂದೇ ಮಾತರಂ ಮೇಲೆ ಕೇಂದ್ರಿಕೃತವಾಗಿತ್ತು.

**ಗಣ್ಯಾತಿ ಗಣ್ಯರು:** ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗೌರವ ವಂದನೆ ಸ್ವೀಕರಿಸುವ ಮೂಲಕ ಮೆರವಣಿಗೆ ಪ್ರಾರಂಭವಾಯಿತು, ನಂತರ ಅವರು, ಕೋಸ್ಟಾ ಮತ್ತು ವಾನ್ ಡೆರ್ ಲೇಯೆನ್, ಭಾರತೀಯ ಅಧ್ಯಕ್ಷರ ಅಂಗರಕ್ಷಕ–ರಿಂದ ಸುತ್ತುವರೆದರು, ಸಾಂಪ್ರದಾಯಿಕ ಬಗ್ಗಿಯಲ್ಲಿ ಕರ್ತವ್ಯ ಪಥ್‌ಗೆ ಬಂದರು. ಪ್ರಧಾನಿ ನರೇಂದ್ರ ಮೋದಿ, ರಕ್ಷಣಾ ಸಚಿವ ರಾಜನಾಥ್ ಸಿಂಗ್, ಇತರ ಹಲವಾರು ಕೇಂದ್ರ ಸಚಿವರು, ದೇಶದ ಉನ್ನತ ಮಿಲಿಟರಿ ಅಧಿಕಾರಿಗಳು, ವಿದೇಶಿ ರಾಜತಾಂತ್ರಿಕರು ಮತ್ತು ಹಿರಿಯ ಅಧಿಕಾರಿಗಳು ಪ್ರೇಕ್ಷಕರಾಗಿದ್ದು ವಿಶೇಷ.



### ಪರೇಡ್‌ನ ಪ್ರಮುಖ ಆಕರ್ಷಣೆ

ಪರೇಡ್ ಕಮಾಂಡರ್ ಲೆಫ್ಟಿನೆಂಟ್ ಜನರಲ್ ಭವ್ನಿಶ್ ಕುಮಾರ್ ಅವರು ದೆಹಲಿ ಪ್ರದೇಶದ ಜನರಲ್ ಆಫೀಸರ್ ಕಮಾಂಡಿಂಗ್, ಎರಡನೇ ತಲೆಮಾರಿನ ಅಧಿಕಾರಿ.ಮೇ ಆರಂಭದಲ್ಲಿ ಆಪರೇಷನ್ ಸಿಂದೂರ್ ಸಮಯದಲ್ಲಿ ಭಾರತೀಯ ಸೇನೆ ನಿಯೋಜಿಸಿದ ಪ್ರಮುಖ ಶಸ್ತ್ರಾಸ್ತ್ರ ವ್ಯವಸ್ಥೆಗಳ ಪ್ರತಿಕೃತಿಗಳನ್ನು ಪ್ರದರ್ಶಿಸುವ ತ್ರಿ–ಸೇನಾ ಟ್ಯಾಬ್ಲೋ ಪ್ರಮುಖ ಆಕರ್ಷಣೆಯಾಗಿತ್ತು.

### ವೈವಿಧ್ಯತೆಯಲ್ಲಿ ಏಕತೆ

ವಿವಿದತಾ ಮೇ ಏಕತಾ (ವೈವಿಧ್ಯತೆಯಲ್ಲಿ ಏಕತೆ) ಎಂಬ ವಿಷಯದ ಮೇಲೆ 100 ಕಲಾವಿದರು ಮೆರವಣಿಗೆಯನ್ನು ಘೋಷಿಸಿದರು, ಇದು ರಾಷ್ಟ್ರದ ಏಕತೆ ಮತ್ತು ಶ್ರೀಮಂತ ಸಾಂಸ್ಕೃತಿಕ ವೈವಿಧ್ಯತೆಯನ್ನು ಪ್ರದರ್ಶಿಸುವ ಸಂಗೀತ ವಾದ್ಯಗಳ ಭವ್ಯ ಪ್ರಸ್ತುತಿಯನ್ನು ಒಳಗೊಂಡಿತ್ತು.ನಂತರ ಅಧ್ಯಕ್ಷ ಮುರ್ಮು ಗೌರವ ವಂದನೆ ಸ್ವೀಕರಿಸುವ ಮೂಲಕ ಮೆರವಣಿಗೆ ಪ್ರಾರಂಭವಾಯಿತು.

### ಮೊದಲ ಬಾರಿಗೆ ಪ್ರದರ್ಶನ

ಬ್ರಹ್ಮೋಸ್ ಮತ್ತು ಎಸ್–400 ಕ್ಷಿಪಣಿಗಳಂತಹ ಶಸ್ತ್ರಾಸ್ತ್ರ ವ್ಯವಸ್ಥೆಗಳ ಬಳಕೆಯೊಂದಿಗೆ ಆಪರೇಷನ್ ಸಿಂದೂರ್ ನಡೆಸುವಿಕೆಯನ್ನು ಚಿತ್ರಿಸುವ ಗಾಜಿನ ಹೊದಿಕೆಯ ಸಂಯೋಜಿತ ಕಾರ್ಯಾಚರಣಾ ಕೇಂದ್ರವು ಕರ್ತವ್ಯ ಪಥದಲ್ಲಿ ಉರುಳಿತು. ಮೊದಲ ಬಾರಿಗೆ, ಮೆರವಣಿಗೆಯು ಭಾರತೀಯ ಸೇನೆಯ ಹಂತ ಹಂತದ ಬ್ಯಾಟಲ್ ಅರೇಫಾರ್ಮ್ಯಾಟ್ ಅನ್ನು ಪ್ರದರ್ಶಿಸಿತು.

### ಹುತಾತ್ಮರಿಗೆ ಪ್ರಧಾನಿ ಗೌರವ

ಗಣರಾ ಜ್ಯೋತ್ಸವದ ಸಂದರ್ಭದಲ್ಲಿ ರಕ್ಷಣಾ ಸಿಬ್ಬಂದಿ ಮುಖ್ಯಸ್ಥರು, ಮೂರು ಸೇನಾ ಮುಖ್ಯಸ್ಥರ ನೇತೃತ್ವದಲ್ಲಿ ಇಲ್ಲಿನ ರಾಷ್ಟ್ರೀಯ ಯುದ್ಧ ಸಾರಕದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹುತಾತ್ಮ ಸೈನಿಕರಿಗೆ ಗೌರವ ಸಲ್ಲಿಸಿದರು. ಪ್ರಧಾನಿಯವರು ಸಾರಕಕ್ಕೆ ಪುಷ್ಪಗುಚ್ಛ ಇಡುವ ಮೂಲಕ ರಾಷ್ಟ್ರಕ್ಕೆ ಗೌರವ ಸಲ್ಲಿಸಿದರು. ಮೋದಿ ಅವರನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರು ರಾಷ್ಟ್ರೀಯ ಯುದ್ಧ ಸ್ಮಾರಕದಲ್ಲಿ ಬರಮಾಡಿಕೊಂಡರು. ಸಮವಸ್ತ್ರದಲ್ಲಿದ್ದ ಅಧಿಕಾರಿಗಳು ವಂದನೆ ಸಲ್ಲಿಸಿದರು.

### ಗಣರಾಜ್ಯೋತ್ಸವ ಶುಭ ಮುರ್ಮು

ರಾಷ್ಟ್ರಪತಿ ದ್ರೌಪದಿ ಮುರ್ಮು, ಪಿಎಂ ನರೇಂದ್ರ ಮೋದಿ ಮತ್ತಿತರ ಗಣ್ಯರು ನಾಡಿನ ಜನರಿಗೆ 77ನೇ ಗಣರಾಜ್ಯೋತ್ಸವದ ಶುಭಾಷಯ ಕೋರಿದ್ದಾರೆ. ಸ್ವಾತಂತ್ರ್ಯ, ಸಂವಿಧಾನ ಮತ್ತು ಪ್ರಜಾಪ್ರಭುತ್ವ ಮೌಲ್ಯ ಬಲಪಡಿಸೋಣ ಎಂದು ಅವರು ಇದೇ ಸಂದರ್ಭದಲ್ಲಿ ಸಂದೇಶ ನೀಡಿದ್ದಾರೆ. ಕೇಂದ್ರ ಸಚಿವ ಅಮಿತ್ ಶಾ, ನಿತಿನ್ ನಬಿನ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಹುಲ್‌ಗಾಂಧಿ ನಾಡಿನ ಜನರಿಗೆ ಶುಭ ಕೋರಿದ್ದಾರೆ.

## ಊಹಾಪೋಹಗಳಿಗೆ ಗೌರ್ನರ್ ತೆರೆ

**ಬೆಂಗಳೂರು:** ರಾಜ್ಯದಲ್ಲಿ 77ನೇ ಗಣರಾಜ್ಯೋತ್ಸವದ ಸಂಭ್ರಮ ಜೋರಾಗಿದ್ದು, ಬೆಂಗಳೂರಿನ ಮಾಣಿಕ್ ಷಾ ಪರೇಡ್ ಮೈದಾನದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಧ್ವಜಾರೋಹಣ ನೆರವೇರಿಸಿದ್ದಾರೆ. ಈ ವೇಳೆ ರಾಜ್ಯದ ಜನತೆಯನ್ನುದ್ದೇಶಿಸಿ ಮಾತನಾಡಿರುವ ರಾಜ್ಯಪಾಲರು, ರಾಜ್ಯ ಸರ್ಕಾರ ಸಿದ್ದಪಡಿಸಿಕೊಟ್ಟ ಭಾಷಣವನ್ನು ಓದಿದ್ದಾರೆ. ಈ ಮೂಲಕ ಸರ್ಕಾರ ಹಾಗೂ ರಾಜ್ಯಪಾಲರ ಎಂಬ ಊಹಾಪೋಹಗಳಿಗೆ ತೆರೆ ಎಳೆದಿದ್ದಾರೆ.

ಜನತೆಯನ್ನುದ್ದೇಶಿಸಿ ಮಾತನಾಡಿದ ರಾಜ್ಯಪಾಲರು, 77ನೇ ಗಣರಾಜ್ಯೋತ್ಸವದ ಈ ವಿಶೇಷ ಸಂದರ್ಭದಲ್ಲಿ ಕರ್ನಾಟಕದ ಜನತೆಗೆ ನನ್ನ ಹೃತ್ಪೂರ್ವಕ ಶುಭಾಶಯಗಳನ್ನು ಕೋರುತ್ತೇನೆ. ಜನವರಿ 26ನೇ ತಾರೀಖು ಭಾರತದ ಚರಿತ್ರೆಯಲ್ಲಿ ಒಂದು ಅತ್ಯಂತ ನಿರ್ಣಾಯಕ ದಿನ. ಇದು ಸಾವಿರಾರು ವರ್ಷಗಳಿಂದ ರೂಪುಗೊಂಡಿದ್ದ ರಾಜಪ್ರಭುತ್ವ ಹಾಗೂ 17ನೇ ಶತಮಾನದಿಂದ ಅಸ್ತಿತ್ವಕ್ಕೆ ಬಂದಿದ್ದ ವಸಾಹತುಶಾಹಿ ಆಡಳಿತವನ್ನು ಕೊನೆಗೊಳಿಸಿ ಜನಪ್ರಭುತ್ವವನ್ನು ಪ್ರತಿಷ್ಠಾಪಿಸಿಕೊಂಡ ದಿನ. ತಾರತಮ್ಯವನ್ನು ಆಧರಿಸಿದ್ದ ವಸಾಹತುಶಾಹಿಯನ್ನು ಹಾಗೂ ಪುರಾತನ ಕಾನೂನುಗಳನ್ನು ಕಿತ್ತೆಸೆದು ಸಾಮಾಜಿಕ, ಆರ್ಥಿಕ, ರಾಜಕೀಯ ನ್ಯಾಯದ ವಿಚಾರದಲ್ಲಿ ಎಲ್ಲರೂ ಸಮಾನರು ಎನ್ನುವ ನವ ಭಾರತದ ಪರಿಕಲ್ಪನೆಯ ಸಂವಿಧಾನವನ್ನು ಜಾರಿಗೊಳಿಸಿದ ದಿನ. ಗಣತಂತ್ರ ವ್ಯವಸ್ಥೆಯನ್ನು



ರೂಪುಗೊಳಿಸಿಕೊಳ್ಳುವುದಕ್ಕಾಗಿ ಅಸಂಖ್ಯಾತ ಜನರು ತ್ಯಾಗ–ಬಲಿದಾನಗಳನ್ನು ಮಾಡಿದ್ದಾರೆ. ಅವರೆಲ್ಲರನ್ನೂ ಈ ಅಮೃತ ಗಳಿಗೆಯಲ್ಲಿ ಗೌರವಪೂರ್ವಕವಾಗಿ ಸ್ಮರಿಸೋಣ ಎಂದು ಹೇಳಿದ್ದಾರೆ.

## ನ್ಯಾಯಾಂಗಕ್ಕೆ ಮತ್ತೊಂದು ಮಹತ್ವದ ಹೆಜ್ಜೆ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಜಿಲ್ಲಾ ನ್ಯಾಯಾಲಯದಲ್ಲಿ ನೂತನವಾಗಿ ಅಳವಡಿಸಲಾದ ಲಿಫ್ಟ್ ಸೌಲಭ್ಯಕ್ಕೆ ಜಿಲ್ಲಾ ಉಸ್ತುವಾರಿ ಸಚಿವರಾದ ಶ್ರೀ ಈಶ್ವರ ಖಂಡ್ರೆ ಅವರು ಉಚ್ಚ ನ್ಯಾಯಾಲಯದ ನ್ಯಾಯಮೂರ್ತಿ ಹಂಚಾಟೆ ಸಂಜೀವಕುಮಾರ ಅವರ ಜೊತೆಗೂಡಿ ಚಾಲನೆ ನೀಡಿದ್ದಾರೆ. 25 ಲಕ್ಷ ರೂ. ಗಳನ್ನು ಸಚಿವ ಈಶ್ವರ ಖಂಡ್ರೆ ಅವರ ಅನುದಾನದಡಿ ಅಳವಡಿಸಲಾದ ಈ ಲಿಫ್ಟ್, ನ್ಯಾಯಾಲಯಕ್ಕೆ ಬರುವ ವೃದ್ಧರು, ದಿವ್ಯಾಂಗರು, ಮಹಿಳೆಯರು ಹಾಗೂ ಸಾಮಾನ್ಯ ನಾಗರಿಕರಿಗೆ ದೊಡ್ಡ ಅನುಕೂಲವನ್ನು ಕಲ್ಪಿಸಲಿದೆ. ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಬೀದರ್




ಜಿಲ್ಲಾ ವಕೀಲರ ಸಂಘವು ವ್ಯಕ್ತಪಡಿಸಿದ್ದ ಬೇಡಿಕೆಗೆ ಸ್ಪಂದಿಸಿ, ಲಿಫ್ಟ್ ಸೌಲಭ್ಯ ಮಾಡಿಸಿ ಕೊಡುತ್ತೇನೆ ಎಂಬ ಭರವಸೆಯನ್ನು ನೀಡಿದ್ದ ಸಂಸದರಾದ ಶ್ರೀ ಸಾಗರ ಖಂಡ್ರೆ ಅವರ ಮಾತು ಇಂದು ಸಾಕಾರಗೊಂಡಿದೆ.

# ಕತ್ತಲ ಬದುಕಿಗೆ ಬೆಳಕಾದ ರಮೇಶ್ ರೆಡ್ಡಿಗೆ ಪ್ರಶಸ್ತಿಯ ಗರಿ

• ಮಲ್ಲಮ್ಮ ನುಡಿ ವಾರ್ತೆ ಬೀದರ್

ಪತ್ರಿಕೋದ್ಯಮ ಹಾಗೂ ಮುದ್ರಣ ಕ್ಷೇತ್ರಕ್ಕೆ ಮಲ್ಲಮ್ಮ ನುಡಿ ಪತ್ರಿಕೆಯ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಂಪಾದಕ ರಮೇಶ ರೆಡ್ಡಿ ಅವರು ಸಲ್ಲಿಸಿದ ಪ್ರಾಮಾಣಿಕ ಸೇವೆಯನ್ನು ಪರಿಗಣಿಸಿರುವ ರಾಜ್ಯ ಸರ್ಕಾರ ಪ್ರತಿಷ್ಠಿತ ಗಣರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದೆ. ಇದ–ರಿಂದ ನನಗೆ ಮತ್ತಷ್ಟು ಬಲಬಂದಂತಾಗಿದ್ದು, ಬಾಧ್ಯತೆ ಹೆಚ್ಚಿಸಿದೆ ಎಂದು ರಮೇಶ್ ರೆಡ್ಡಿ ಅವರು ವರದಿಗಾರರ ಬಳಿ ಸಂತಸ ಹಂಚಿಕೊಂಡಿದ್ದಾರೆ.

ಕತ್ತಲ ಬದುಕಿಗೆ ಬೆಳಕಿಟ್ಟಹಾಗೆ ಥಟ್ಟನೆ ನಗುತ್ತಲೇ ಎದುರಾಳಿಗಳ ಮನ ಗೆಲ್ಲುವ ಕೌಶಲ ಕರಗತ ಮಾಡಿಕೊಂಡಿರುವ ರಮೇಶ್ ರೆಡ್ಡಿ, ಎರಡು ದಶಕಗಳಿಂದೀಚೆಗೂ, ಮೂಲತಃ ಕೃಷಿಕರ ಮನೆತನದವರಾದ ಇವರು ತಮ್ಮ ವಿದ್ಯಾಭ್ಯಾಸದ ಬಳಿಕ ಆಯ್ಕೆ ಮಾಡಿಕೊಂಡಿದ್ದು ಪತ್ರಿಕಾ ಕ್ಷೇತ್ರ. ಬಳಿಕ ವರದಿಗಾರರಾಗಿ, ಉಪ ಸಂಪಾದಕರಾಗಿ ಬಳಿಕ ಸಂಪಾದಕರಾಗಿ ಈ ಪ್ರತಿಷ್ಠಿತ ಪ್ರಶಸ್ತಿ ಪಡೆಯುವ ಹಂತದವರೆಗೆ ಬೆಳೆದ ಪರಿಯೇ ಅಚ್ಚರಿ, ಅದ್ಭುತ. ಮೂರ್ತಿ ಚಿಕ್ಕದಾದರೂ, ಕೀರ್ತಿ ದೊಡ್ಡದು ಎನ್ನುವ ಗಾದೆ ನೆನಪಿಸುವ ರಮೇಶ್‌ರೆಡ್ಡಿ ಮಾತೇ ಖಡಕ್




ರೊಟ್ಟಿ..! ಮಾತಲ್ಲಿ ಗಡಸುತನ ಇದ್ದರೂ ಹೃದಯದಲ್ಲಿ ವಾತ್ಸಲ್ಯದ ನದಿ ಇರಿಸಿಕೊಂಡದ್ದು ಇವರ ವೈಶಿಷ್ಟ್ಯಗಳಲ್ಲಿ ಒಂದು. ಎಡಗೈಗೆ ಕೊಟ್ಟದ್ದು ಬಲಗೈಗೆ ಗೊತ್ತಾಗಬಾರದು ತತ್ವವನ್ನು ಅಕ್ಷರಶಃ ಪಾಲಿಸಿಕೊಂಡು ಬಂದಿರುವ ಇವರ ಬಳಿ ನೋವು ತೋಡಿಕೊಂಡವರಿಗೆ, ಸಂತ್ರಸ್ತರಿಗೆ, ಅಭಾಗ್ಯರಿಗೆ ಅದೆಷ್ಟೋ ಸಹಾಯ ಸಹಕಾರ ನೀಡಿದ್ದನ್ನು ಅವರು ಅಪ್ಪಿತಪ್ಪಿಯೂ ಹೇಳುವುದಿಲ್ಲ. ವರದಿಗಾರರು ಕಂಡರಂತೂ ಅವರಿಗೆ ಎಲ್ಲಿಲ್ಲದ ಪ್ರೀತಿ.

### ಗ್ರಾಮೀಣ ಬಡವರ ಮಕ್ಕಳು ತಾರೆಯಂತೆ ಬೆಳಗಬೇಕು

ನಾಡಿನಲ್ಲಿ ಅದ್ಭುತ ಪ್ರತಿಭೆಗಳಿವೆ. ಅವರಿಗೂ ಅವಕಾಶ ಸಿಗಬೇಕು. ಬಡವರ ಮಕ್ಕಳು ತಾರೆಗಳಂತೆ ಬೆಳಗಬೇಕು. ಗ್ರಾಮೀಣ ಪ್ರತಿಭೆಗಳು ರಾಜಧಾನಿಯಲ್ಲಿ ಧ್ವನಿಯೆತ್ತಿ ಮಾತನಾಡಬೇಕು ಎನ್ನುವ ಉದಾತ್ತ ಆಶಯ ಇರಿಸಿಕೊಂಡು ಮಲ್ಲಮ್ಮ ನುಡಿಯನ್ನು ಪ್ರದೇಶಿಕವಾಗಿ, ರಾಜ್ಯಮಟ್ಟದ ಪತ್ರಿಕೆಯಾಗಿ ರೂಪಿಸುತ್ತಿರುವುದು ಅವರ ಮಹತ್ವ ಕಾಂಕ್ಷಯೆ ಕಾರ್ಯಕ್ಷಮತೆ ಸಾಕ್ಷಿ. ಈ ಎಲ್ಲಾ ಹಿನ್ನೆಲೆಯನ್ನು ಗಮನಿಸಿರುವ ರಾಜ್ಯ ಸರ್ಕಾರ ಅವರಿಗೆ ಪ್ರತಿಷ್ಠಿತ ಪ್ರಶಸ್ತಿ ಘೋಷಿಸಿದೆ. ಮಲ್ಲಮ್ಮ ನುಡಿ ಪತ್ರಿಕಾ ಬಳಗವು ಅವರಿಗೆ ಹಾರ್ದಿಕ ಅಭಿನಂದನೆ ಸಲ್ಲಿಸುತ್ತದೆ.

### ವಿವಿಧ ಗಣ್ಯರಿಗೂ ಗಣರಾಜೋತ್ಸವ ಪ್ರಶಸ್ತಿ

ಗಣರಾಜೋತ್ಸವ ದಿನಾಚರಣೆದಂದು ವಿವಿಧ ಕ್ಷೇತ್ರಗಳಾದ ಸಾಹಿತ್ಯ, ಕಲೆ, ಸಮಾಜಿಕ, ಶಿಕ್ಷಣ ಕ್ರೀಡೆ, ಕೃಷಿ, ಪತ್ರಿಕಾ ಮಾಧ್ಯಮ, ಕೈಗಾರಿಕೆ, ಆರೋಗ್ಯ, ಮಹಿಳಾ ಸಾಧಕಿಯರು, ವಿಶೇಷ ಚೈತನ್ಯರಲ್ಲಿ ಸಾಧನೆ ಮಾಡಿರುವ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿದವರಿಗೆ ಈ ಕೆಳಕಂಡಂತೆ ಗೌರವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿ ಶಿಬಿಲ್ ಸೈಲಿನ್ಸ್ ಕಣ್ಣಿನ ಆಸ್ಪತ್ರೆ, ವಿಶೇಷಚೇತನ ಕ್ಷೇತ್ರದಲ್ಲಿ ಸಂಗಮೇಶ ತಂದೆ ಶರಣಪ್ಪಾ ಭಾವಿದೊಡ್ಡಿ, ಎಲೆಕ್ಟ್ರಾನಿಕ್ ಮೀಡಿಯಾ ಕ್ಷೇತ್ರದಲ್ಲಿ ಶಿವಾನಂದ ತಂದೆ ಮಲ್ಲಪ್ಪ ಅಮರಗೋಳ, ಪತ್ರಿಕಾ (ಮುದ್ರಣ) ಕ್ಷೇತ್ರದಲ್ಲಿ ರಮೇಶ ರೆಡ್ಡಿ ತಂದೆ ಬಸವರೆಡ್ಡಿ, ಯೋಗಾ ಕ್ರೀಡಾ ಕ್ಷೇತ್ರದಲ್ಲಿ ಶ್ರದ್ಧಾ ತಂದೆ ಶರಣಬಸಪ್ಪ ಎಸ್.ಪಾಟೀಲ್, ಜಾನಪದ ಭೂತೇರ ನೃತ್ಯ ಕ್ಷೇತ್ರದಲ್ಲಿ ಭಾರತ ತಂದೆ ಮಾರುತಿ, ಸಾಹಿತ್ಯ ಕ್ಷೇತ್ರದಲ್ಲಿ ಓಂಕಾರ ತಂದೆ ಬಸವರಾಜ ಉಪ್ಪೆ, ಕೈಗಾರಿಕೆ ಕ್ಷೇತ್ರದಲ್ಲಿ ಸಂತೋಷಕುಮಾರ ತಂದೆ ರಾಜಕುಮಾರ ಲದ್ದೆ, ಪತ್ರಿಕಾ ಮಾಧ್ಯಮ ಕ್ಷೇತ್ರದಲ್ಲಿ ದಿ.ನಾಗಶೆಟ್ಟಿ ಧರಂಪೂರೆ, ಜೂನಿಯರ್ ಮಿಸ್ ಇಂಡಿಯಾ 2ನೇ ರನ್ನರಪ್ ಆದ ಪೂರ್ವಿ ತಂದೆ ಸಂಜಯಕುಮಾರ ಬಿರಾದರ್ ಅವರು ಪ್ರಸ್ತಿಗೆ ಆಯ್ಕೆಯಾಗಿ ಎಂದು ಜಿಲ್ಲಾಧಿಕಾರಿ ಶಿಲ್ಪಾ ಶರ್ಮಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅದ್ದೂರಿಯಾಗಿ ಜರುಗಿದ 77ನೇ ಗಣರಾಜ್ಯೋತ್ಸವ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ತಾಲೂಕಿನ ನಿರ್ಣಾ ಗ್ರಾಮ ಪಂಚಾಯತ್ ವತಿಯಿಂದ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಗಣರಾಜ್ಯೋತ್ಸವ ಸಡಗರದಿಂದ ಆಚರಿಸಲಾಯಿತು. ಬೆಳಿಗ್ಗೆ ಗ್ರಾಮ ಪಂಚಾಯತ್ ಕಚೇರಿಯಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷೆ ಗೀತಾ ಎಂ. ಜೋಗಣಿ ಧ್ವಜಾರೋಹಣ ನೆರವೇರಿಸಿದರು. ಆ ನಂತರ ಶಾಲಾ ಆವರಣದಲ್ಲಿ ನಡೆದ ಬೃಹತ್ ಸಂಸ್ಕೃತಿ ಕಾರ್ಯಕ್ರಮ ಉದ್ದೇಶಿಸಿ ಪಿಕೆಪಿಎಸ್ ಅಧ್ಯಕ್ಷ ಜಗನ್ನಾಥರೆಡ್ಡಿ ಏಖೇಳ್ಳಿ ಮಾತನಾಡಿ, ಭಾರತವು ಇಂದು ತನ್ನ 77ನೇ ಗಣರಾಜ್ಯೋತ್ಸವವನ್ನು ಅತ್ಯಂತ ಸಡಗರ ಮತ್ತು ದೇಶ ಭಕ್ತಿಯಿಂದ ಆಚರಿಸುತ್ತಿದೆ. 1950 ಜ.26ರಂದು ಭಾರತದ ಸಂವಿಧಾನವು ಜಾರಿಗೆ ಬಂದು, ನಮ್ಮ ದೇಶವು ಸಾರ್ವಭೌಮ, ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ ಹೊರಹೊಮ್ಮಿದೆ. ಬ್ರಿಟಿಷರ ಆಡಳಿತದಿಂದ ಮುಕ್ತಿ ಹೊಂದಿದ ನಂತರ, ಜಗತ್ತಿನ ಅತಿ–ದೊಡ್ಡ ಲಿಖಿತ ಸಂವಿಧಾನವನ್ನು ಅಳವಡಿಸಿಕೊಂಡ ಭಾರತ, ಇಂದು ಜಾಗತಿಕ ಮಟ್ಟದಲ್ಲಿ ಬಲಿಷ್ಠ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಗುರುತಿಸಿಕೊಂಡಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದಲ್ಲಿ ರಚಿತವಾದ ಸಂವಿಧಾನವು ಪ್ರತಿಯೊಬ್ಬ ನಾಗರಿಕನಿಗೂ ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯವನ್ನು ಒದಗಿಸಿದೆ ಎಂದರು. ಗ್ರಾಮ ಪಂಚಾಯತ್ ಸದಸ್ಯ ಲಕ್ಷ್ಮಣ ಸಾತನೂರ್ ಮಾತನಾಡಿ, ನಿರ್ಣಾ ಗ್ರಾಮದಲ್ಲಿ ಪರಂಪರೆಯಂತೆ ಈ ವರ್ಷವೂ ಕೂಡ ಗ್ರಾಮ ಪಂಚಾಯತ್ ವತಿಯಿಂದ ಅದ್ದೂರಿಯಾಗಿ ಗಣರಾಜ್ಯೋತ್ಸವ ಆಚರಿಸುತ್ತಿರುವುದು ಸಂತೋಷ ತಂದಿದೆ. ವಿದ್ಯಾರ್ಥಿಗಳಲ್ಲಿ ದೇಶ ಭಕ್ತಿ, ಭಾವನೆ ಒಡಮೂಡಿಸಲು ಈ ಸಂಸ್ಕೃತಿ ಕಾರ್ಯಕ್ರಮಗಳು ಸಹಾಯವಾಗಿವೆ ಎಂದರು. ವಿದ್ಯಾರ್ಥಿಗಳು ದೇಶ ಭಕ್ತರ ವೇಷ ಧರಿಸಿ ಸಾರ್ವಜನಿಕರ ಮೆಚ್ಚುಗೆ ಪಡೆದರು. ಗ್ರಾಮ ಪಂಚಾಯತ್ ಅಧ್ಯಕ್ಷೆ ಗೀತಾ ಎಂ. ಜೋಗಣಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಶಿಕ್ಷಕ ಕುಪೇಂದ್ರ ನಿರೂಪಿಸಿದರು. ಗ್ರಾಮ ಪಂಚಾಯತ್ ಉಪಾಧ್ಯಕ್ಷ ಸಂಜೀವ ಕಿರಣ ಸ್ವಾಗತಿಸಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಬಸವರಾಜ ಗುಗ್ಗರಿ ಕೊನೆಯಲ್ಲಿ ವಂದಿಸಿದರು. ಈ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಸದಸ್ಯರಾದ ಬಾಬು ಉಪಾರ, ಮಹಮ್ಮದ್ ಮಸ್ತಾನ ಸಾಬ್, ಗೋಪಾಲಕೃಷ್ಣ ಜೋಗಣಿ, ಸತೀಶ ತೆಳಮನಿ, ನಾನಗಾಥ ಕಲಹೋಲ, ಬಾಬು ಅಳ್ಳಿಗಿಡಾ, ಪ್ರಾಂಶುಪಾಲ ಶಿವರಾಜ ಬಿರಾದಾರ್, ಮುಖ್ಯ ಶಿಕ್ಷಕ ವಿಷ್ಣುವರ್ಧನ್, ಸರುಬಾಯಿ ಪವರ್, ಶ್ರೀನಿವಾಸ ಫತ್ತರ, ಅನೀಲ ರೆಡ್ಡಿ, ಪ್ರಭು ಕುಂಬಾರ್, ಸೇರಿದಂತೆ ಗ್ರಾಮಸ್ಥರು, ಶಾಲಾ ಮಕ್ಕಳು ಉಪಸ್ಥಿತರಿದ್ದರು.

# ಪಟ್ಟಣದ ಸಮಗ್ರ ಅಭಿವೃದ್ಧಿಗೆ ಶ್ರಮಿಸುವೆ: ಡಾ. ಸಿದ್ದು ಪಾಟೀಲ್

• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**



ಸರ್ವರಿಗೂ ಸಮಬಾಳು–ಸಮಪಾಲು ಎನ್ನುವ ನಿಟ್ಟಿನಲ್ಲಿ ಡಾ.ಬಾಬಾ ಸಾಹೇಬ ಅಂಬೇಡ್ಕರ್ ಅವರು ನೀಡಿರುವ ಸಂವಿಧಾನದ ಆಶಯದಂತೆ ತಾಲೂಕಿನ ಸಮಗ್ರ ಅಭಿವೃದ್ಧಿಗಾಗಿ ಶ್ರಮಿಸೋಣ ಎಂದು ಶಾಸಕ ಡಾ. ಸಿದ್ದು ಪಾಟೀಲ್ ಹೇಳಿದರು. ತಾಲೂಕು ಆಡಳಿತದಿಂದ ಹಮ್ಮಿಕೊಂಡಿರುವ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಭಾರತ ರತ್ನ ಡಾ.ಅಂಬೇಡ್ಕರ್ ಅವರು, ನಮ್ಮ ದೇಶಕ್ಕೆ ಪವಿತ್ರವಾದ ಸಂವಿಧಾನವನ್ನು ನೀಡಿದ್ದಾರೆ. ಜೊತೆ–ಗೆ ಹಕ್ಕು ಮತ್ತು ಕರ್ತವ್ಯಗಳನ್ನು ಅಳವಡಿಸಿದ್ದಾರೆ. ಅವುಗಳನ್ನು ಚಾಚು ತಪ್ಪದೆ ಪಾಲಿಸಿಕೊಂಡು ಹೊಗುವ ಜವಾಬ್ದಾರಿಗಳನ್ನು ಸಹ ನಮಗೆ ನೀಡಿದ್ದಾರೆ. ಆ ನಿಟ್ಟಿನಲ್ಲಿ ಸಾಂವಿಧಾನಿಕ ಹುದ್ದೆಯಲ್ಲಿರುವ ಪ್ರತಿಯೊಬ್ಬರು ಸಮಾನತೆ, ಸಹಕಾರ, ಭ್ರಾತೃತ್ವ, ಭಾವೈಕ್ಯತೆ, ಸಮಾನತೆಯಿಂದ ನಡೆಯುವುದು ಅತ್ಯಂತ ಪ್ರಮುಖವಾಗಿದೆ ಎಂದರು. ಚಿಟಗುಪ್ಪ ಪಟ್ಟಣ ನಿಜಾಮ ಆಡಳಿತದಲ್ಲಿ ಜಿಲ್ಲಾ ಕೇಂದ್ರವಾಗಿದು, ಚಿಟಗುಪ್ಪ ಪಟ್ಟಣದ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇನೆ ಎಂದರು. ಈಗಾಗಲೇ ಮಿನಿ ವಿಧಾನ ಸೌಧ, 30 ಹಾಸಿಗೆ ಹೆಚ್ಚಿಸಿ 50 ಹಾಸಿಗೆಯುಳ್ಳ ಆಸ್ಪತ್ರೆ ಕಾಮಗಾರಿ ಪ್ರಾರಂಭವಾಗಿದೆ. ಕ್ರೀಡಾಂಗಣ, ತಾಲೂಕ ಪಂಚಾಯತ್ ಕಚೇರಿ ನಿರ್ಮಾಣ ಕಾರ್ಯಗಳು ಶೀಘ್ರದಲ್ಲೇ ಪ್ರಾರಂಭವಾಗಲಿವೆ ಎಂದರು. ತಹಶೀಲ್ದಾರ್ ಮಂಜುನಾಥ್ ಪಂಚಾಳ ಧ್ವಜಾರೋಹಣ ನೆರವೇರಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ಹಣಮಂತ ಗೌಡಗಾಂವಕರ್ ವಿಶೇಷ ಉಪನ್ಯಾಸ ನೀಡಿದರು. ಈ ಸಂದರ್ಭದಲ್ಲಿ ತಾಲೂಕ ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಲಕ್ಷ್ಮಿ ಬಿರಾದಾರ್, ಮುಖ್ಯಾಧಿಕಾರಿ ಸತೀಶ ಗುಡ್ಡೆ, ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಶ್ರೀಕಾಂತ ರಾಠೋಡ, ಆಡಳಿತ ವೈದ್ಯಾಧಿಕಾರಿ ಡಾ. ವಿಜಯ ಹಿರಸ್ಕರ್, ಮಲ್ಲಿಕಾರ್ಜುನ ಪಾಟೀಲ್, ರಾಶೀದ್ ಪಟೇಲ್, ಸೂರ್ಯಕಾಂತ ಮಠಪತಿ, ಅಹ್ಮದ್ ಪಾಷಾ ಸೇರಿದಂತೆ ಪುರಸಭೆ ಸದಸ್ಯರು, ಪ್ರಮುಖರು ಹಾಗೂ ಪುರಸಭೆ, ಕಂದಾಯ ಇಲಾಖೆ ಸಿಬ್ಬಂದಿ ವರ್ಗದವರು, ಶಾಲಾ ಮಕ್ಕಳು ಉಪಸ್ಥಿತರಿದ್ದರು.

# ವಿದ್ಯಾರ್ಥಿಗಳಿಗೆ ಪ್ಯಾಡ್ ನೋಟ್ ಬುಕ್ ಪೆನ್ ವಿತರಣೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಭಾರತದ 77ನೇ ಗಣರಾಜ್ಯೋತ್ಸವದ ಅಂಗವಾಗಿ, ಬೀದರ ದಕ್ಷಿಣ ಕ್ಷೇತ್ರದ ಸಂಗೋಳಗಿ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ 1ನೇ ತರಗತಿಯಿಂದ 7ನೇ ತರಗತಿಯ ಬಡ ವಿದ್ಯಾರ್ಥಿಗಳಿಗೆ ಕನ್ನಡ ಸೇನೆ ಕರ್ನಾಟಕ ಗ್ರಾಮ ಘಟಕ ವತಿಯಿಂದ ಪ್ಯಾಡ್ ನೋಟ್ ಬುಕ್, ಪೆನ್ ವಿತರಿಸಲಾಯಿತು,

ಜಿಲ್ಲಾಧ್ಯಕ್ಷರಾದ ಸುಭಾಷ್ ಕೆನಡೆ ಮಾತನಾಡಿ, ಬಡ ವಿದ್ಯಾರ್ಥಿಗಳಿಗೆ ಅನುಕೂಲ ವಾಗುವಂತೆ ನಮ್ಮ ಕನ್ನಡ ಸೇನೆ ಕರ್ನಾಟಕದ ಸಂಗೋಳಗಿ ಗ್ರಾಮ ಘಟಕದ ಅಧ್ಯಕ್ಷರಾದ ಲಕ್ಷ್ಮಣ ಅಲ್ಲೂರೆ ಅವರ ನೇತೃತ್ವದ ತಂಡದಿಂದ 77ನೇ ಗಣರಾಜ್ಯೋತ್ಸವ ನಿಮಿತ್ಯವಾಗಿ ಇಂದು ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗುವಂತೆ ಪ್ಯಾಡ ಪೆನ್ ನೋಟ್‌ಬುಕ್‌ಗಳನ್ನು ಉಚಿತವಾಗಿ ವಿತರಿಸುವುದು ಮತ್ತು ಅವರ ಅಧ್ಯಯನದಲ್ಲಿ ಉತ್ತೇಜನೆ ನೀಡುವುದು ಎಲ್ಲಾ ವಿದ್ಯಾರ್ಥಿಗಳು ಒಳ್ಳೆಯ ಶಿಕ್ಷಣವನ್ನು ಪಡೆದು ಉನ್ನತವಾದ ಹುದ್ದೆಗೆ ಸೇರಬೇಕು ಎಂದು ತಿಳಿಸಿದ್ದಾರೆ,

ಇದೇ ಸಂದರ್ಭದಲ್ಲಿ ಅಶೋಕ ಪಾಟೀಲ , ಭೀಮಣ್ಣಾ ಗುತ್ತಿ, ಚಂದ್ರಶೇಖರ ಪೊಲೀಸ್ ಪಾಟೀಲ ಗ್ರಾಮ ಘಟಕ ಅಧ್ಯಕ್ಷರಾದ ಲಕ್ಷ್ಮಣ ಅಲ್ಲೂರೆ, ನಾಗಶೆಟ್ಟಿ ಸಜ್ಜನಶೆಟ್ಟಿ, ವಿಜಯಕುಮಾರ ಮಂಡಗಿ, ಸಿದ್ದಪ್ಪಾ ಕಟಗಿ, ಕಲ್ಲಪ್ಪಾ ತುಪ್ಪದ, ನಂದುಕುಮಾರ ಮಂಡಗಿ, ಸಂತೋಷ ಪಾಟೀಲ್, ಮಹೆಬೂಬ್ ಸಾಬ್ ಬೊಂಬುಳಗಿ, ಆನಂದ ಹುಲಾಜಿ, ಬಸವರಾಜ ಮುಸ್ತರಿ, ಅಶೋಕ್ ಬಯ್ಯ, ದಿಲೀಪ್ ಗುತ್ತಿ, ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಗುರುಗಳಾದ ಅನ್ನಪೂರ್ಣ ಸುರೇಶ್ ಕಾಳೇಕರ್. ಪ್ರಶಾಂತ್ ಡ್ಯಾಡೇ ,ಜ್ಯೋತಿ, ಸಂಧ್ಯಾರಾಣಿ ಸಹ ಶಿಕ್ಷಕಿಯರು, ಉಷಾ ಸಹ ಶಿಕ್ಷಕಿಯರು, ರೇಣುಕಾ ಅತಿಥಿ ಶಿಕ್ಷಕಿಯರು ಭಾಗವಹಿಸಿದರು,

# ಸ, ಹಿ, ಪ್ರಾ, ಶಾಲೆ 77ನೇ ಗಣರಾಜ್ಯೋತ್ಸವ ಆಚರಣೆ



• **ಮಲ್ಲಮ್ಮ ನುಡಿ ವಾರ್ತೆ ಬೀದರ:**

ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಸಂಗೋಳಗಿಯಲ್ಲಿ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಮುಖ್ಯ ಗುರುಗಳಾದ ಅನ್ನಪೂರ್ಣ ಅವರು ರಾಷ್ಟ್ರ ಧ್ವಜ ಹಾರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು,

ಗಣರಾಜ್ಯೋತ್ಸವದ ಬಗ್ಗೆ ಭಾಷಣವನ್ನು ಶಾಲಾ ವಿದ್ಯಾರ್ಥಿಯಾದ ಗಾಯತ್ರಿ ಕವಿರಾಜ್ ,ಸ್ನೇಹಾ ದಯಾನಂದ ಮಕ್ಕಳಿಂದ ನೆರವೇರಿಸಲಾಯಿತು,

1ರಿಂದ 7ನೇ ತರಗತಿ ವಿದ್ಯಾರ್ಥಿಗಳಿಂದ ಚನ್ನಪ್ಪಾ ಚನ್ನೇಗೌಡ, 4ನೇ ತರಗತಿ ವಿದ್ಯಾರ್ಥಿಗಳಿಂದ ಸಂದೇಶ ಆತೇ ಹೈ, ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು, ಇಂಡಿಯಾ ವಾಲೆ , ಝೂನ್ಸಿಕಿ ರಾಣಿ ಲಕ್ಷ್ಮೀಬಾಯಿ, ಮೇರಾ ಬಂಗ್ಲಾ ಮೇರಾ ಗಾಡಿ , ಸೌಗಂಧ ಮೂಜೆ ಮಿಟ್ಟಿ ಕೀ , ಆಪರೇಶನ್ ಸಿಂಧೂರ, ಏ ಮೇರಾ ಇಂಡಿಯಾ ನೃತ್ಯ, ಮೂಲಕ ವಿದ್ಯಾರ್ಥಿಗಳಿಂದ ಸಂಗೀತ ನೃತ್ಯ ಕಾರ್ಯಕ್ರಮ ನಡೆಯಿತು,

ಇದೇ ಸಂದರ್ಭದಲ್ಲಿ ಶ್ರೀಮತಿ ಅನ್ನಪೂರ್ಣ ಬಾಯಿ ಮುಖ ಗುರುಗಳು, ಸುರೇಶ್ ಕಾಳೇಕರ್ ದೈಹಿಕ ಶಿಕ್ಷಣದ ಶಿಕ್ಷಕರು, ಪ್ರಶಾಂತ್ ಡ್ಯಾಡೇ ಸಹ ಶಿಕ್ಷಕರು ,ಶ್ರೀಮತಿ ಜ್ಯೋತಿ ಸಹ ಶಿಕ್ಷಕಿಯರು, ಸಂಧ್ಯಾರಾಣಿ ಸಹ ಶಿಕ್ಷಕಿಯರು.ಉಷಾ ಸಹ ಶಿಕ್ಷಕಿಯರು,ಕುಮಾರಿ ರೇಣುಕಾ ಅತಿಥಿ ಶಿಕ್ಷಕಿಯರು, ಹಾಗೂ ಗ್ರಾಮದ ಮುಖಂಡರಾದ ಅಶೋಕ್ ಪಾಟೀಲ್, ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶಾಂತವೀರ ಹಜ್ಜರಗಿ, ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಪೂಜಾಶ್ರೀ ಬಿರಾದಾರ,ಪಿಕೆಪಿಎಸ್ ಸಂಗೋಳಗಿ ಅಧ್ಯಕ್ಷರಾದ ಶಿವಕುಮಾರ ಹಿಂದಾ, ಪಿಕೆಪಿಎಸ್ ಸದಸ್ಯರಾದ ಭೀಮಣ್ಣಾ ಗುತ್ತಿ, ಅನೇಕ ಗ್ರಾಮಸ್ಥರು ಹಾಗೂ ಕನ್ನಡ ಸೇನೆ ಕರ್ನಾಟಕ ಬೀದರ ಜಿಲ್ಲಾಧ್ಯಕ್ಷರಾದ ಸುಭಾಷ್ ಕೆನಡೆ, ಕನ್ನಡ ಸೇನೆ ಕರ್ನಾಟಕದ ಗ್ರಾಮ ಘಟಕದ ಅಧ್ಯಕ್ಷರಾಗಿ ಲಕ್ಷ್ಮಣ ಅಲ್ಲೂರೆ ಅನೇಕ ಸದಸ್ಯರು ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗವಹಿಸಿದರು,



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ತಾಲೂಕಿನ ಕಲವಾಡಿ ಗ್ರಾಮದ ಮಹಾತ್ಮಾಗಾಂಧಿ ಪ್ರೌಢಶಾಲೆಯಲ್ಲಿ 77ನೇ ಗಣರಾಜ್ಯೋತ್ಸವ ನಿಮಿತ್ಯ ಸಂಸ್ಥೆಯ ಅಧ್ಯಕ್ಷೆ ಮೋಜಾಬಾಯಿ ಕಲವಾಡಿಕರ್ ಧ್ವಜಾರೋಹಣ ನೆರವೇರಿಸಿದರು. ನಿವೃತ್ತ ಮುಖ್ಯಶಿಕ್ಷಕ ಜಯರಾಜ ದಾಬಶೆಟ್ಟಿ, ಮುಖ್ಯಶಿಕ್ಷಕ ಶಿವಕುಮಾರ ವಾಡಿಕರ, ಆನಂದ ಖಂಡಗೊಂಡ, ವಿಜಯ್ ಗುತ್ತೆದಾರ, ಪ್ರಕಾಶ ಬಿರಾದಾರ, ಭರತ ಸಿದ್ದಾ ಮತ್ತಿತರರು ಇದ್ದರು.

# ಸಮಾಜದ ಉನ್ನತಿಗೆ ಮಠಗಳ ಕೊಡುಗೆ ಅಪಾರ



**ಭಾತಂಬ್ರಾ ಗ್ರಾಮದಲ್ಲಿ ಡಾ.ಗುರುಬಸವ ದೇಶಿಕರ ಪಟ್ಟಾಭಿಷೇಕ ಮಹೋತ್ಸವ ಸಂಭ್ರಮ ॥ ಸಾರೋಟಿಯಲ್ಲಿ ನೂತನ ಶ್ರೀಗಳ ಮೆರವಣಿಗೆ**

## ನೂತನ ಶ್ರೀಗಳಿಗೆ ಸಹಕಾರ ನೀಡಿ

**ಈ ಭಾಗದಲ್ಲಿ ಭಕ್ತರ ಸಹಕಾರದಿಂದ ಮಠದ ಪರಂಪರೆಯನ್ನು ಉಳಿಸಿ ಬೆಳೆಸುವ ಕೆಲಸ ಮಾಡಿದ್ದೇನೆ ಎಂದು ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ಹೇಳಿದರು. ಕಳೆದ ಐದು ದಶಕಗಳಿಂದ ಮಠದ ಪೀಠಾಧಿಪತಿಯಾಗಿ ಸಮಾಜದಲ್ಲಿ ಒಂದಿಷ್ಟು ಒಳ್ಳೆಯ ಕೆಲಸ ಮಾಡಿದ್ದೇನೆ. ಮಠದ ಪ್ರಗತಿಯಲ್ಲಿ ಭಕ್ತ ವಲಯದ ಸಹಕಾರ ದೊಡ್ಡದಿದೆ. ನನಗೆ ತೋರಿದ ಪ್ರೀತಿ, ವಿಶ್ವಾಸದಂತೆ ನೂತನ ಪೂಜ್ಯರಿಗೂ ಭಕ್ತರು ಸಲಹೆ, ಸಹಕಾರ ನೀಡಿ ಮಠದ ಮತ್ತಷ್ಟು ಸಾಮಾಜಿಕ ಕಾರ್ಯಗಳಿಗೆ ಶಕ್ತಿ ತುಂಬಬೇಕು ಎಂದು ತಿಳಿಸಿದರು.**

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಮಠಗಳು ಕೇವಲ ಧಾರ್ಮಿಕ ಕೇಂದ್ರಗಳಲ್ಲದೇ, ದಾಸೋಹ, ಶಿಕ್ಷಣ, ಅಧ್ಯಾತ್ಮ, ಸಾಮಾಜಿಕ ಸೇವೆಗಳ ಮೂಲಕ ಸಮಾಜದ ಉನ್ನತಿಗೆ ಅಪಾರ ಕೊಡುಗೆ ನೀಡುತ್ತಿವೆ ಎಂದು ಶಿವಮೊಗ್ಗ ಬೆಕ್ಕಿನಕಲ್ಮಠ ಮುರುಘರಾಜೇಂದ್ರ ಮಹಾಸಂಸ್ಥಾನ ಮಠ ಆನಂದಪುರದ ಜಗದ್ಗುರು ಡಾ.ಮಲ್ಲಿಕಾರ್ಜುನ ಮುರುಘರಾಜೇಂದ್ರ ಸ್ವಾಮೀಜಿ ಹೇಳಿದರು. ತಾಲೂಕಿನ ಭಾತಂಬ್ರಾ ಗ್ರಾಮದ ಜಗದ್ಗುರು ನಿರಂಜನ ಸಂಸ್ಥಾನ ಮಠದಲ್ಲಿ ಡಾ.ಗುರುಬಸವದೇಶಿಕರ ಪಟ್ಟಾಭಿಷೇಕ ನಿಮಿತ್ತ ಭಾನುವಾರ ಆಯೋಜಿಸಿದ್ದ ಶೂನ್ಯತತ್ವ ಪೀಠಾರೋಹಣ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು. ಮಠಗಳು ದೀಪದಂತೆ ತನ್ನನ್ನು ತಾನು ಸುಟ್ಟುಕೊಂಡು ಬೆಳಕನ್ನು ನೀಡುತ್ತಿವೆ. ಸೇವೆ ಹಾಗೂ ತ್ಯಾಗದ ಸಂಗಮ ಸ್ವಾಮೀಜಿ ಆಗಿರುತ್ತಾರೆ. ಅವರಿಗೆ ಸಮಾಜವೇ ತಾಯಿ, ತಂದೆ, ಬಂಧುಗಳಾಗಿರುತ್ತಾರೆ. ಸ್ವಹಿತ ಕಡೆಗಣಿಸಿ ಸಮಾಜದ ಕಲ್ಯಾಣಕ್ಕಾಗಿ ಪರಿಶ್ರಮಿಸುತ್ತಾರೆ ಎಂದರು. ಗಡಿಭಾಗದಲ್ಲಿ ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ಅವರು ಕಳೆದ ಐದು ದಶಕಗಳಿಂದ ಶೈಕ್ಷಣಿಕ, ಸಾಮಾಜಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದಾರೆ. ಅವರ ಸೇವಾ ಕೈಂಕರ್ಯದಿಂದಾಗಿಯೇ ಈ ಭಾಗದಲ್ಲಿ ಅಪಾರ ಭಕ್ತ ಸಮೂಹ ಸಂಪಾದಿಸಿದ್ದಾರೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಹಿರಿಯ ಪೂಜ್ಯರ ಮಾರ್ಗದರ್ಶನದಲ್ಲಿ ನೂತನ ಪೂಜ್ಯರು ಒಳ್ಳೆಯ ಕಾರ್ಯ ಮಾಡಿ ಶ್ರೀಮಠದ ಹೆಸರನ್ನು ಉತ್ತುಂಗ–ಕ್ಕೆ ಕೊಂಡೊಯ್ಯುವ ಪ್ರಯತ್ನ ಮಾಡಲಿ ಎಂದು ಹಾರೈಸಿದರು. ಗೂಗ್ಗೆಹಳ್ಳಿ ಪಂಚಮಠ ಸಂಸ್ಥಾನದ ಸಂಗಮೇಶ್ವರ ಶಿವಾಚಾರ್ಯ, ಜಯಶಾಂತಲಿಂಗ ಸ್ವಾಮೀಜಿ, ಸಿದ್ಧಲಿಂಗ ಸ್ವಾಮೀಜಿ, ಡಾ.ಬಸವಲಿಂಗ ಅವಧೂತರು ಸೇರಿದಂತೆ ಹಲವು ಪೂಜ್ಯರು ಭಾಗವಹಿಸಿದ್ದರು. ಮಾಜಿ ಶಾಸಕ ಪ್ರಕಾಶ ಖಂಡ್ರೆ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಸಾಹಿತಿ ಸಿದ್ದಣ್ಣ ಲಂಗೋಟಿ ಅನುಭಾವ ನೀಡಿದರು. ಈ ಸಂದರ್ಭದಲ್ಲಿ ಕೇಂದ್ರದ ಮಾಜಿ ಸಚಿವ ಭಗವಂತ ಖೂಬಾ, ನಾರಂಜಾ ಸಹಕಾರ ಸಕ್ಕರೆ ಕಾರ್ಖಾನೆ ಮಾಜಿ ಅಧ್ಯಕ್ಷ ಡಿ.ಕೆ.ಸಿದ್ರಾಮ, ವೀರಣ್ಣ ಕಾರಬಾರಿ, ಹಂಸಕವಿ ಸೇರಿದಂತೆ ಹಲವರು ಇದ್ದರು. ದೀಪಕ ಠಮಕೆ ನಿರೂಪಿಸಿದರು.

**ಮಠದ ಪರಂಪರೆ ಉಳಿಸುವೆ**

ಪಟ್ಟಾಧಿಕಾರ ಸ್ವೀಕರಿಸಿ ನೂತನ ಡಾ.ಗುರುಬಸವ ಪೂಜ್ಯರು ಮಾತನಾಡಿ, ನಿಮ್ಮಗಳ ಮುಡಿಗೆ ಹೂ ತಾರೆನಲ್ಲದೇ, ಹುಲ್ಲು ತಾರೆನು ಎಂದು ವಚನವಿತ್ತರು. ಅತಿ ದೊಡ್ಡ ಜವಾಬ್ದಾರಿ ನನ್ನ ಮೇಲಿದೆ ಎಂಬುದರ ಅರಿವು ನನಗಿದೆ. ನನ್ನ ಮೇಲೆ ಇಟ್ಟಿರುವ ನಂಬಿಕೆ ಮತ್ತು ಭರವಸೆಗಳಿಗೆ ನಾನು ಮೋಸ ಮಾಡುವುದಿಲ್ಲ ಮಠದ ಜವಾಬ್ದಾರಿಯನ್ನು ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ನೀಡಿದ್ದು, ಅವರ ಮಾರ್ಗದರ್ಶನದಲ್ಲೇ ನಡೆದು ಮಠದ ಪರಂಪರೆಯನ್ನು ಉಳಿಸುವ ಪ್ರಯತ್ನ ಮಾಡುತ್ತೇನೆ ಎಂದು ತಿಳಿಸಿದರು.

**ಡಾ.ಗುರುಬಸವ ದೇಶಿಕರಿಗೆ ಪಟ್ಟಾಭಿಷೇಕ**

ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ, ಇಳಕಲ್ ಚಿತ್ತರಗಿ ವಿಜಯ ಮಹಾಂತೇಶ್ವರ ಮಠದ ಗುರುಮಹಾಂತ ಸವಾಮೀಜಿ, ಗುಗ್ಗೆಹಳ್ಳಿ ಪಂಚಮಠ ಸಂಸ್ಥಾನದ ಸಂಗಮೇಶ್ವರ ಶಿವಾಚಾರ್ಯ, ಹುಲಸೂರು ಗುರುಬಸವೇಶ್ವರ ಸಂಸ್ಥಾನ ಮಠದ ಶಿವಾನಂದ ಸ್ವಾಮೀಜಿ, ಹುಕ್ಕೇರಿ ಮಠದ ಸದಾಶಿವ ಸ್ವಾಮೀಜಿ, ಮುರುಗೋಡ ಮಠದ ನೀಲಕಂಠ ಸ್ವಾಮೀಜಿ, ತಾಂಬಾಳ ಮಠದ ಮುಘೇಂದ್ರ ಸ್ವಾಮೀಜಿ ಮತ್ತು ಮಾತೆ ಬಸವಾಂಜಲಿ ತಾಯಿ ಅವರ ಸಾನ್ನಿಧ್ಯದಲ್ಲಿ ನೂತನ ವಟು ಡಾ.ಗುರುಬಸವ ದೇಶಿಕರ ಪಟ್ಟಾಧಿಕಾರ ಕಾರ್ಯಕ್ರಮ ಸಂಭ್ರಮದಿಂದ ಜರುಗಿತು. ಇದ–ಕ್ಕೆ ನಾಡಿನ ಶರಣ ಪರಂಪರೆಯ ಹಲವು ಪ್ರಮುಖ ಮಠಗಳ ಸ್ವಾಮೀಜಿಗಳು ಸಾಕ್ಷಿಯಾದರು. ಗದಗ ಜಿಲ್ಲೆಯ ರೋಣ ತಾಲೂಕಿನ ಕೃಷ್ಣಪುರ ಮೂಲದ ಶರಣಯ್ಯ ಚನ್ನಬಸಮ್ಮ ದಂಪತಿಯ ಜೆಷ್ಠ ಪುತ್ರ ಡಾ.ಗುರುಬಸವ ದೇಶಿಕರು ಅವರನ್ನು ರಥ ಸಪ್ತಮಿ ಬ್ರಾಹ್ಮಿ ಮೂಹೂರ್ತದಲ್ಲಿ ಜಗದ್ಗುರು ನಿರಂಜನ ಸಂಸ್ಥಾನ ಮಠದ ಜಗದ್ಗುರು ಶಿವಯೋಗೀಶ್ವರ ಸ್ವಾಮೀಜಿ ಅವರು ಗುರುಬಸವ ದೇಶಿಕರನ್ನು ಕಿರಿಯ ಶ್ರೀಗಳನ್ನಾಗಿ ವಿಧ್ಯುಕ್ತವಾಗಿ ಸ್ವೀಕರಿಸಿದರು. ಪಟ್ಟಕ್ಕೇರಿದ ನೂತನ ಡಾ.ಗುರುಬಸವ ದೇಶಿಕರನ್ನು ಜಗದ್ಗುರು ಗುರುಬಸವ ಮಹಾಸ್ವಾಮೀಜಿ ಎಂದು ನಾಮಕರಣ ಮಾಡಲಾಯಿತು. ಅವರಿಗೆ ಭಕ್ತರ ಸಮ್ಮುಖದಲ್ಲಿ ದಿವ್ಯಸ್ನಾನ, ಭಸ್ಮರುದ್ರಾಕ್ಷಧಾರಣೆ, ಲಿಂಗಾಂಗಾನುಸಂಧಾನ, ಮಂತ್ರೋಪದೇಶ ಸೇರಿ ವಿವಿಧ ವಿಧಿ ವಿಧಾನಗಳು ನಡೆದವು. ವಿವಿಧ ಮಠಗಳ ಮಠಾಧೀಶರು, ಮುಖಂಡರು ಸಮಾರಂಭದಲ್ಲಿ ಭಾಗಿಯಾದರು. ಸಾವಿರಾರೂ ಭಕ್ತರು ಅವಿಸ್ಮರಣೀಯ ಸಮಾರಂಭಕ್ಕೆ ಸಾಕ್ಷಿಯಾದರು.

**ಸಾರೋಟಿಯಲ್ಲಿ ಮೆರವಣಿಗೆ**

ಜಗದ್ಗುರು ನಿರಂಜನ ಸಂಸ್ಥಾನ ಮಠದ ನೂತನ ಪೀಠಾಧಿಪತಿ ಗುರುಬಸವ ಮಹಾಸ್ವಾಮೀಜಿ ಅವರ ಮೆರವಣಿಗೆ ಗ್ರಾಮದಲ್ಲಿ ವೈಭವದಿಂದ ನೆರವೇರಿತು. ಜಗದ್ಗುರು ನಿರಂಜನ ಸಂಸ್ಥಾನ ಮಠದಿಂದ ಅಲಂಕೃತ ಸಾರೋಟಿಯಲ್ಲಿ ಆರಂಭಗೊಂಡ ಪೂಜ್ಯರ ಮೆರವಣಿಗೆ ಗ್ರಾಮದ ಪ್ರಮುಖ ರಸ್ತೆ, ಬೀದಿಗಳಲ್ಲಿ ಸಂಚರಿಸಿತು. ಭಕ್ತರು ಧಾರ್ಮಿಕ ಗೀತೆಗಳಿಗೆ ಹೆಜ್ಜೆ ಹಾಕಿ ಮೆರವಣಿಗೆ ಕಳೆ ಹೆಚ್ಚಿಸಿದರು. ಕರ್ನಾಟಕ, ಮಹಾರಾಷ್ಟ್ರ, ತೆಲಂಗಾಣ ರಾಜ್ಯದ ಸಾವಿರಾರೂ ಭಕ್ತರು ಭಾಗವಹಿಸಿ ಪಟ್ಟಾಭಿಷೇಕ ಕಾರ್ಯಕ್ರಮದ ವೈಭವದಿಂದ ಕಣ್ತುಂಬಿಕೊಂಡರು.

# 77ನೇ ಗಣರಾಜ್ಯೋತ್ಸವ ಪ್ರಯುಕ್ತ ಧ್ವಜಾರೋಹಣ



• **ಮಲ್ಲಮ್ಮ ನುಡಿ ವಾರ್ತೆ ಚಿಟಗುಪ್ಪ:**

ಪಟ್ಟಣದ ಪುರಸಭೆ ವ್ಯಾಪ್ತಿಯ 23ನೇ ವಾರ್ಡಿನ ಫಾತಿಮಾಪುರನಲ್ಲಿ 77ನೇ ಗಣರಾಜ್ಯೋತ್ಸವದ ಅಂಗವಾಗಿ ಕಾಂಗ್ರೆಸ್ ಹಿರಿಯ ಮುಖಂಡರಾದ ಅಶೋಕ ಸ್ವಾಮಿ ಬಿರಾದಾರ್ ಅವರು ಧ್ವಜಾರೋಹಣ ನೆರವೇರಿಸಿದರು. ಈ ಸಂದರ್ಭದಲ್ಲಿ ಪಿಕೆಪಿಎಸ್ ಮಾಜಿ ಅಧ್ಯಕ್ಷರು ಹಾಲಿ ನಿರ್ದೇಶಕರಾದ ಮಹಾರುದ್ರಯ್ಯ ಸ್ವಾಮಿ ಬಿರಾದಾರ್, ಗೋರಖನಾಥ ಸೀತಾಳಗೇರಾ, ಅಂಬಣ್ಣ ಸಿಂಧನಕೇರಾ, ಶಕೀಲ್ ಅಲ್ಲೂರ್, ವೆಂಕಟ ಪೂಜಾರಿ, ಕರೇಪ್ಪ ಸ್ವಾಮಿ, ವಿಜಯಕುಮಾರ್ ಸ್ವಾಮಿ, ರವಿ ಖೇಳಗಿ, ಜಗನಾಥ ಗೋಣಗಿ, ಸೂರ್ಯಕಾಂತ ಸಂಗೋಳಗಿ, ರಾಜರೆಡ್ಡಿ ಮುಡಬಿ, ರವೀಂದ್ರರೆಡ್ಡಿ ರಾಂಪುರ, ಅಂಬರೀಶ್ ಪಾಟೀಲ್, ಶಾಮರಾವ ನರನಾಳ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ರಾಷ್ಟ್ರೀಯ ಹಬ್ಬಗಳು ಮನೆ ಮನೆಗಳಲ್ಲಿ ಆಚರಿಸಿ



• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

ಗಣರಾಜ್ಯೋತ್ಸವ ಮತ್ತು ಸ್ವಾತಂತ್ರ್ಯೋತ್ಸವದಂತಹ ರಾಷ್ಟ್ರೀಯ ಹಬ್ಬಗಳನ್ನು ಕೇವಲ ಶಾಲೆ ಮತ್ತು ಸರಕಾರಿ ಕಾಲೇಜುಗಳಿಗೆ ಸೀಮಿತವಾಗಿರದೆ ಮನೆ ಮನೆಗಳಲ್ಲಿ ಆಚರಿಸುವಂತೆ ಆಗಬೇಕು ಎಂದು ಬಸವಕಲ್ಯಾಣ ಅನುಭವ ಮಂಟಪದ ಅಧ್ಯಕ್ಷ ನಾಡೋಜ ಡಾ.ಬಸವಲಿಂಗ ಪಟ್ಟದ್ದೇವರು ಹೇಳಿದರು.

ಪಟ್ಟಣದ ಗುರುಪ್ರಸಾದ ಪ್ರಾಥಮಿಕ ಮತ್ತು ಪ್ರೌಢ ಶಾಲೆಯಲ್ಲಿ ಸೋಮವಾರ ನಡೆದ 77ನೆಯ ಗಣರಾಜ್ಯೋತ್ಸವ ಸಮಾರಂಭದ ದಿವ್ಯ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ನಾವು ಮಾಡುವ ಪ್ರತಿಯೊಂದು ಕಾರ್ಯವು ಪ್ರಾಮಾಣಿಕವಾಗಿ ಮಾಡಿದಾಗ ಅದು ನಿಜವಾಗಿ ದೇಶ ಭಕ್ತಿಯಾಗುತ್ತದೆ. ದೇಶ ಸ್ವಾತಂತ್ರ ವಾದ ನಂತರ ಡಾ.ಬಾಬಾಸಾಹೇಬ ಅಂಬೇಡ್ಕರ್ ಅವರ ಅವಿರತ ಪರಿಶ್ರಮದಿಂದ ಅತ್ಯಂತ ಶ್ರೇಷ್ಠವಾದ ಸಂವಿಧಾನ ರೂಪುಗೊಂಡಿದೆ. ಸಂವಿಧಾನದ ಆಶಯಗಳನ್ನು ಈಡೇರಿಸುವ ಜವಾಬ್ದಾರಿ ಪ್ರತಿಯೊಬ್ಬ ಭಾರತೀಯರ ಕರ್ತವ್ಯವಾಗಿದೆ.

ದೇಶಕ್ಕಾಗಿ ಸಾವಿರಾರು ಯುವಕರು ಮತ್ತು ಮಹಿಳೆಯರು, ಹಿರಿಯರು ಪ್ರಾಣ ತ್ಯಾಗ ಮಾಡಿದ್ದಾರೆ. ಅವರ ತ್ಯಾಗ–ಬಲಿದಾನದಿಂದ ದೊರೆತ ಸ್ವಾತಂತ್ರ ವನ್ನು ರಕ್ಷಣೆಯಾಗಬೇಕಾದರೆ ನಾವು ಸಂವಿಧಾನದ ಆಶಯಗಳನ್ನು ಅರ್ಥಮಾಡಿಕೊಳ್ಳಬೇಕು. ಆ ದಿಶೆಯಲ್ಲಿ ನಮ್ಮ ನಡೆ ಸಾಗಬೇಕು. ಇತ್ತಿಚಿನ ದಿನಮಾನಗಳಲ್ಲಿ ಮಕ್ಕಳು ಓದುವುದು ಕಡಿಮೆಯಾಗುತ್ತಿದೆ. ಶಾಲಾಪಠ್ಯದ ಜೊತೆಗೆ ಇತರೆ ಮೌಲಿಕ ಕೃತಿಗಳು ಓದಿದರೆ ಜ್ಞಾನದ ವಿಸ್ತಾರ ಹೆಚ್ಚಾಗುತ್ತದೆ. ನಮಗೆ ಬದುಕುವ ಕಲೆ ದೊರೆಯುತ್ತದೆ. ಆ ದಿಶೆಯಲ್ಲಿ ಮಕ್ಕಳು ಹೆಚ್ಚು ಹೆಚ್ಚು ಪುಸ್ತಕಗಳು ಓದಬೇಕು. ಅಕ್ಷರ ಸಂಸ್ಕೃತಿ ಬೆಳೆಸಿಕೊಳ್ಳಬೇಕು ಎಂದು ಆಶೀರ್ವಚನ ನೀಡಿದರು. ನಿವೃತ್ತ ಪ್ರಾಧ್ಯಾಪಕ ಚಂದ್ರಶೇಖರ ಬಿರಾದಾರ್ ಮಾತನಾಡಿದರು. ಗುರುಪ್ರಸಾದ್. ಸಿ. ಬಿರಾದಾರ ಉಪಸ್ಥಿತರಿದ್ದರು.

ಸನ್ಮಾನ :

ಇದೇವೇಳೆ ಗುರುಪ್ರಸಾದ ಶಾಲೆಯಲ್ಲಿ ಕಲಿತು ಉನ್ನತ ಸಾಧನೆ ಮಾಡಿರುವ ಡಾ.ಚನ್ನಬಸವ ಧನರಾಜ ಬಂಬುಳಗೆ, ಸಂಗಮೇಶ ಜಲ್ದೆ ಮತ್ತು ಪುಟ್ಟರಾಣಿ ಶಿವಕುಮಾರ ಮೇತ್ರೆ ಅವರನ್ನು ಪೂಜ್ಯರು ಸನ್ಮಾನಿಸಿ, ಆಶೀರ್ವದಿಸಿದರು. ಡಾ.ಭವಾನಿ ದತ್ತುಕುಮಾರ ಖಂಡ್ರೆ ಬಸವಗುರುಪೂಜೆ ನೆರವೇರಿಸಿದರು. ಹಿರೇಮಠ ಸಂಸ್ಥಾನ ವಿದ್ಯಾಪೀಠ ಟ್ರಸ್ಟ್ ಕಾರ್ಯಾಲಯದ ಸಿಬ್ಬಂದಿಗಳಾದ ಸಂಗಮೇಶ ಬಿರಾದಾರ, ಶರಣು ತೆಲಗಾಣೆ, ಶಿವಪುತ್ರ ದಾಬಶೆಟ್ಟಿ ಇದ್ದರು. ಮುಖ್ಯಗುರು ಬಾಬು ಬೆಲ್ದಾಳ ಪ್ರಾಸ್ತಾವಿಕವಾಗಿ ಮಾತನಾಡಿದರು. ಸವಿತಾ ಭೂರೆ ಸ್ವಾಗತಿಸಿದರು. ಸಿದ್ರಾಮ ರಾಜಾಪುರೆ ನಿರೂಪಿಸಿ, ವಂದಿಸಿದರು.



• **ಮಲ್ಲಮ್ಮ ನುಡಿ ವಾರ್ತೆ ಬೀದರ:**

77ನೇ ಕರ್ನಾಟಕ ರಾಜ್ಯೋತ್ಸವ ನಿಮಿತ್ಯಾ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯ ಒಂದನೇ ತರಗತಿಯಿಂದ ಏಳನೇ ತರಗತಿಯ ವಿದ್ಯಾರ್ಥಿಗಳಿಗೆ ನೋಟ್ ಬುಕ್ ಪೆನ್ ವಿಠಲ ಹತ್ತಿ ಅವರು ವಿತರಿಸಿದರು, ಇದೆ ಸಂದರ್ಭದಲ್ಲಿ ಅನ್ನಪೂರ್ಣ ಮುಖ ಗುರುಗಳು. ಸುರೇಶ್ ಕಾಳೇಕರ್, ಪ್ರಶಾಂತ್ ಡ್ಯಾಡೇ, ಜ್ಯೋತಿ ಸಂಧ್ಯಾರಾಣಿ ಸಹ ಶಿಕ್ಷಕಿಯರು, ಉಷಾ, ಕುಮಾರಿ ರೇಣುಕಾ ಅತಿಥಿ ಶಿಕ್ಷಕಿಯರು ಭಾಗವಹಿಸಿದರು,

# ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಉಚಿತ ಡಯಾಲಿಸಿಸ್ ಸೆಂಟರ್ ಉದ್ಘಾಟನೆ



• **ಮಲ್ಲಮ್ಮ ನುಡಿ ವಾತೆ,ಕುಕನೂರ :**

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ನೂತನವಾಗಿ ಅಳವಡಿಸಿದ ಡಯಾಲಿಸಿಸ್ ಕೇಂದ್ರವನ್ನು ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರ ಹಾಗೂ ಯಲಬುರ್ಗಾ ವಿಧಾನಸಭಾ ಕ್ಷೇತ್ರದ ಶಾಸಕ ಬಸವರಾಜ ರಾಯರೆಡ್ಡಿ ಅವರಿಂದ ಉದ್ಘಾಟಿಸಲಾಯಿತು. ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಡಯಾಲಿಸಿಸ್ ಸೆಂಟರ್ ಉದ್ಘಾಟಿಸಿದ ನಂತರ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಬಸವರಾಜ ರಾಯರೆಡ್ಡಿ ವರದಿಗಾರರನ್ನು ಉದ್ದೇಶಿಸಿ ಮಾತನಾಡುತ್ತ ಕ್ಷೇತ್ರದ ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿರುವ ಜನತೆ ಡಯಾಲಿಸಿಸ್ ಗಾಗಿ ಬೇರೆ ಕಡೆಗಳಲ್ಲಿ ಹೋಗುವ ಅನಿವಾರ್ಯತೆ ಎದುರಾಗಿದ್ದು ಇದೀಗ ರಾಜ್ಯ ಸರ್ಕಾರ ಹಾಗೂ ಖಾಸಗಿಯವರ ಸಹಭಾಗಿತ್ವದಲ್ಲಿ ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಸುಮಾರು 42 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಎರಡು ಡಯಾಲಿಸಿಸ್ ಮಷಿನ್ ಪ್ರಾರಂಭಗೊಂಡಿದ್ದು ಮೂತ್ರಪಿಂಡ ರೋಗಿಗಳು ಬೇರೆ ಕಡೆ ಹೋಗುವ ಅನಿವಾರ್ಯತೆ ತಪ್ಪಿದಂತಾಗಿದೆ. ಇದರ ಸದುಪಯೋಗವನ್ನು ಅವಶ್ಯಕತೆ ಇದ್ದವರು ಮಾಡಿಕೊಳ್ಳಬೇಕೆಂದು ತಿಳಿಸಿದರು. ಸರಕಾರಿ ಆಸ್ಪತ್ರೆಗಳಲ್ಲಿ ಸಮಸ್ಯೆಗಳು ಸಾಮಾನ್ಯವಾಗಿದ್ದು ವೈದ್ಯಾಧಿಕಾರಿಗಳು ಸೇವಾ ಮನೋಭಾವನೆ ಹೊಂದಿದಾಗ ಮಾತ್ರ ಸರ್ಕಾರದ ಆರೋಗ್ಯ ಇಲಾಖೆಯ ಯೋಜನೆಗಳು ಸಾಕಾರಗೊಳ್ಳುತ್ತವೆ ಆದರೆ ವೈದ್ಯರಾಗಿ ಪ್ರಮಾಣ ಪತ್ರ ಸ್ವೀಕರಿಸುವವರು ಗ್ರಾಮೀಣ ಪ್ರದೇಶದ ಜನತೆಯ ಸೇವೆಗೆ ಹಿಂದಿಟು ಹಾಕುತ್ತಿರುವುದು ವಿಪರ್ಯಾಸವಾಗಿದ್ದು ಅವರು ಗ್ರಾಮೀಣ ಜನತೆಯ ಸೇವೆಗೆ ಮಾತ್ರ ಸರ್ಕಾರದ ಯೋಜನೆಗಳು ಜನರಿಗೆ ಸಂಪೂರ್ಣವಾಗಿ ತಲುಪಿ ಸಾಕಾರಗೊಳ್ಳುತ್ತವೆ ಎಂದರು. ಕುಕನೂರು ಭಾಗದಲ್ಲಿ ತಾಲೂಕ ಆಡಳಿತ ಸೌದದ ಅವಶ್ಯಕತೆ ಇದ್ದು ಇದಕ್ಕೆ ಅಡ್ಡಿಯಾಗಿದ್ದ ಕಾನೂನು ತೊಡಕು ನಿವಾರಣೆಯಾಗುವ ಎಲ್ಲಾ ಮುನ್ಸೂಚನೆಗಳು ಮೂರು ತಿಂಗಳಲ್ಲಿ ಎಲ್ಲಾ ಸಮಸ್ಯೆ ನಿವಾರಣೆಯಾಗಿ ಆಡಳಿತ ಸೌದೊಂದಿಗೆ ತಾಲೂಕ ಕ್ರೀಡಾಂಗಣದ ಕಟ್ಟಡ ಕಾಮಗಾರಿ ಪ್ರಾರಂಭಗೊಳ್ಳಲಿದೆ ಎಂದು ಹೇಳಿದರು. ಸಮುದಾಯ ಆರೋಗ್ಯ ಕೇಂದ್ರದ ಆಡಳಿತ ವೈದ್ಯಾಧಿಕಾರಿ ರಾಮಕೃಷ್ಣರೆಡ್ಡಿ ಮಾತನಾಡುತ್ತಾ ಆರೋಗ್ಯ ಕೇಂದ್ರದಲ್ಲಿ ನಾಳೆಯಿಂದ ಎರಡು ಡಯಾಲಿಸಿಸ್ ಸಾಧನೆಗಳು ಕಾರ್ಯ ಆರಂಭ ಮಾಡಲಿದ್ದು ಈಗಾಗಲೇ ತಾಲೂಕಿನಲ್ಲಿ ಆರು ಜನ ಮೂತ್ರಪಿಂಡ ತೊಂದರೆ ಅನುಭವಿಸುವವರನ್ನು ಗುರುತಿಸಿ ಅವರಿಗೆ ಚಿಕಿತ್ಸೆಯನ್ನು ಪ್ರಾರಂಭಿಸಲಾಗುವುದು. ಈ ಸೌಲಭ್ಯದಿಂದ ಪ್ರತಿದಿನ ಆರು ಜನರಿಗೆ ಉಚಿತವಾಗಿ ಸೇವೆ ಲಭ್ಯವಾಗಲಿದ್ದು ಇದಕ್ಕೆ ಸಂಬಂಧಪಟ್ಟಂತೆ ತಂತ್ರಜ್ಞರು, ಸ್ಟಾಫ್ನರ್ಸ್ ಹಾಗೂ ಇನ್ನಿತರ ಸಿಬ್ಬಂದಿಗಳ ಲಭ್ಯತೆಯನ್ನು ಸಹ ಈಗಾಗಲೇ ಮಾಡಲಾಗಿದ್ದು ಭವಿಷ್ಯದಲ್ಲಿ ಜನರಿಗೆ ಇದು ತುಂಬಾ ಅನುಕೂಲಕರವಾಗಲಿದೆ ಎಂದು ಹೇಳಿದರು. ತಹಸಿಲ್ದಾರ ಬಸವರಾಜ ಬೆಣ್ಣೆ ಶಿರೂರು, ತಾ.ಪಂ ಇ ಓ ಸಂತೋಷ್ ಬಿರಾದರ ಪಾಟೀಲ, ಪ್ರಮುಖರಾದ ಯಂಕಣ್ಣ ಯರಾಶಿ, ಕಾಸಿಂಸಾಬ್ ತಳಕಲ್, ಹನುಮಂತ ಗೌಡಚಂಡೂರ, ಕರಿಬಸಪ್ಪನಿಡಗುಂದಿ, ಸತ್ಯನಾರಾಯಣಪ್ಪ ಹರಪನಹಳ್ಳಿ, ಹಂಪಯ್ಯ ಹಿರೇಮಠ, ಸಂಗಮೇಶ ಗುತ್ತಿ, ಡಾ. ಶಿವನಗೌಡ ದಾನರೆಡ್ಡಿ, ಸಮುದಾಯ ಆರೋಗ್ಯ ಕೇಂದ್ರದ ವೈದ್ಯರು ಹಾಗೂ ಸಿಬ್ಬಂದಿಗಳು ಮತ್ತು ಸಾರ್ವಜನಿಕರು ಪಾಲ್ಗೊಂಡಿದ್ದರು.

# ಪುರಸಭೆಯಲ್ಲಿ 77ನೇ ಗಣರಾಜ್ಯೋತ್ಸವ ಆಚರಣೆ



- **ಮಲ್ಲಮ್ಮ ನುಡಿ ವಾರ್ತೆ,ಚಿಟಗುಪ್ಪ:**

ಪಟ್ಟಣದ ಪುರಸಭೆ ಕಛೇರಿಯಲ್ಲಿ "ಡಾ. ಬಿ. ಆರ್. ಅಂಬೇಡ್ಕರ ಮತ್ತು ಮಹಾತ್ಮ ಗಾಂಧಿ" ರವರ ಭಾವಚಿತ್ರಕ್ಕೆ ಮುಖ್ಯಾಧಿಕಾರಿ ಸತೀಶ ಗುಡ್ಡೆ ಪೂಜೆ ಸಲ್ಲಿಸಿ, ಧ್ವಜಾರೋಹಣ ನೆರವೇರಿಸಿದ್ದರು. ಈ ಸಂದರ್ಭದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ದಿಲೀಪಕುಮಾರ ಬಗ್ಗಲಕರ, ಮಾಜಿ ಉಪಾಧ್ಯಕ್ಷ ನಸೀರ ಖಾನ, ಮಾಜಿ ಸದಸ್ಯರಾದ ಮಲ್ಲಿಕಾರ್ಜುನ ಪಾಟೀಲ, ವಿಶಾಲ ಬೊರಳೆ, ಮಹ್ಮದ ನಸೀರ ಹಕೀಂ, ಪಾರ್ವತಿ ರಮೇಶ ಪ್ರಮುಖರಾದ ಅಶೋಕ ಸ್ವಾಮಿ, ಕಲ್ಯಾಣರಾವ ಜಾಜಾ, ಶಾಮರಾವ ಭೂತಾಳೆ, ಶರಣು ಗಡಮಿ, ಭಾಸ್ಕರ, ಮಹ್ಮದ ಶರೀಫ್, ಆಕಾಶ ಡಾಂಗೆ, ಸಿಬ್ಬಂದಿಗಳಾದ ವಿಜಯಕುಮಾರ, ವಿಜಯದೀಪ, ವಾಣಿ, ರವಿಕುಮಾರ ಸ್ವಾಮಿ, ಚಿದಾನಂದ ಪತ್ರಿ, ಸಂತೋಷ ಬಿರಾದರ, ವೈಶಾಲಿ, ಶಿವಕುಮಾರ ಸ್ವಾಮಿ, ರಾಜಕುಮಾರ ಗುತ್ತೆದಾರ್, ಸರೋಜನಿ, ಕವಿತಾ, ಆನಂದ, ಸೂರ್ಯಕಾಂತ ಕುಲಕರ್ಣಿ, ಸಂತೋಷ ಹಳ್ಳಿಖೇಡ್, ಸಚಿನ, ನಥಾನಿಯೇಲ್, ಮಲ್ಲಮ್ಮ, ಅಶ್ವಿನಿ ಚವ್ಹಾಣ, ಮಂಜುಳಾ, ಪ್ರಿಯಾ, ಐಶ್ವರ್ಯ, ಪಂಚಾಶೀಲ, ಮಾಲಾಶ್ರೀ, ಜಯಶ್ರೀ, ಇಲಾಹಿ, ಬಕ್ಕಪ್ಪಾ, ಭೀಮಶಾ, ರಾಜೇಶ ತೆಲಂಗ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ಶಹಪುರ ಗ್ರಾಮದಲ್ಲಿ ಕೋತಿ ಹಿಡಿದ ಅರಣ್ಯ ಇಲಾಖೆ



- **ಮಲ್ಲಮ್ಮ ನುಡಿ ವಾರ್ತೆ,ಕೊಪ್ಪಳ:**

ಜಿಲ್ಲೆಯ ಶಹಪುರ ಗ್ರಾಮದಲ್ಲಿ ಈ ಹಿಂದೆ ಇದ್ದ ಕೋತಿಗಳ ಹಾವಳಿ ಮತ್ತೆ ಕಳೆದ ಮೂರ್ನಾಲ್ಕು ತಿಂಗಳಿಂದ ಗ್ರಾಮಸ್ಥರಿಗೆ ತಲೆನೋವಾಗಿ ಪರಿಣಮಿಸಿದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯಿಂದ ಕೋತಿ ಹಿಡಿದು ಕಾಡಿಗೆ ಬಿಡಲಾಗಿದೆ.

ಶಹಪುರ ಗ್ರಾಮದ ಸುತ್ತ ಮುತ್ತಲೂ ಹಸಿರು ಗದ್ದೆ, ರಾಷ್ಟ್ರೀಯ ಹೆದ್ದಾರಿ, ಹಳ್ಳ, ಕೆರೆ ಬಯಲು, ಮಟ್ಟಿ, ಸಣ್ಣ ಪುಟ್ಟ ಝುರಿಗಳು, ತೋಟಗಳು, ಸಿಹಿ ನೀರಿನ ಹಳ್ಳ, ತರಕಾರಿ ಬೆಳೆಯುವ ಹೊಲಗಳು ಇರುವುದರಿಂದ ಕೋತಿಗೆ ಎಲೆ, ಹಣ್ಣು, ಸವತೆಕಾಯಿ ಸೇವನೆಗೆ ಸಹಕಾರಿಯಾಗಿವೆ. ಗ್ರಾಮದಲ್ಲಿ ತೆಂಗಿನ ಮರಗಳು ಮತ್ತು ಬೆಟ್ಟದ ಹುಣಿಸೆ ಹಣ್ಣಿನ ಗಿಡಗಳು ಇವೆ. ಜೊತೆಗೆ ಮನೆಯ ಬೆಳಕಿಂಡಿಯಿಂದ ಅಡುಗೆ ಮನೆಗೆ ನುಗ್ಗಿ ರೊಟ್ಟಿ, ಅನ್ನ, ಹಣ್ಣು, ಹಂಪಲುಗಳನ್ನು ಎತ್ತಿಕೊಂಡು ಹೋಗುವ ಮೂಲಕ ಕೋತಿ ಚೇಷ್ಟೆ ಮಾಡುತ್ತಿವೆ.

ಈ ಕಾರಣದಿಂದ ಕಳೆದ ಮೂರ್ನಾಲ್ಕು ತಿಂಗಳಲ್ಲಿ ಗ್ರಾಮದೊಳಗೆ ಕೋತಿಗಳು ನೆಲೆ ನಿಂತಿದ್ದು, ಇಷ್ಟಾಗಿದ್ದರೆ ಸಾಕಾಗಿತ್ತೇನೋ...! ಟ್ರಾಕ್ಟರ್ ಸವಾರಿ ಮಾಡುವ ಚಾಲಕರ ಮೇಲೆ ದಾಳಿ ನಡೆಸುವ ಕೋತಿಯಿಂದ ಚಾಲಕರು ಭಯಗೊಂಡಿದ್ದಾರೆ. ಗ್ರಾಮದ ಮಕ್ಕಳು ಮತ್ತು ಮಹಿಳೆಯರ ಮೇಲೆ ಏರಿ ಹೋಗುವುದರಿಂದ ಆತಂಕವನ್ನು ಸೃಷ್ಟಿಸಿದೆ. ಈ ಹಿನ್ನೆಲೆಯಲ್ಲಿ ಪರಿಸರ ಪ್ರೇಮಿ ವೀರಣ್ಣ ಕೋಮಲಾಪುರ ಇವರು ಗ್ರಾಮ ಪಂಚಾಯಿತಿ ಸದಸ್ಯರಾದ ಹಾಲಪ್ಪ ತೋಟದ, ಹನುಮಂತ ಗೊಲ್ಲರ, ನಿಂಗಪ್ಪ ನಾಗಲಾಪುರ, ನಾಗರಾಜ ದೊಡ್ಡಮನೆ, ಗ್ರಾಮದ ಹಿರಿಯರಾದ ಬಸವರಾಜಸ್ವಾಮಿ ಹಿರೇಮಠ, ಶರಣಪ್ಪ ಕುಟುಗನಹಳ್ಳಿ ಸೇರಿದಂತೆ ಗ್ರಾಮದ ಯುವ ಧುರೀಣರಾದ ನಿಂಗಪ್ಪ ನಾಗಲಾಪುರ, ಬಸವರಾಜ ಹೊನ್ನುಂಚಿ ಇವರೊಂದಿಗೆ ಚರ್ಚಿಸಿ ಅರಣ್ಯ ಇಲಾಖೆಗೆ ಮಾಹಿತಿ ನೀಡಿದ್ದಾರೆ.

ಅರಣ್ಯ ಇಲಾಖೆಯ ಸಿಬ್ಬಂದಿಯವರು ಗ್ರಾಮಕ್ಕೆ ಆಗಮಿಸಿ ಕೋತಿ ಸಂಚರಿಸುವ ಸ್ಥಳದಲ್ಲಿ ಬೋನು ಇಟ್ಟು, ಕೋತಿಯನ್ನು ಹಿಡಿಯುವಲ್ಲಿ ಯಶಸ್ವಿಯಾಗಿದ್ದಾರೆ. ಗ್ರಾಮಸ್ಥರು ಇದೀಗ ನಿರಾಳರಾಗಿದ್ದು, ಬೇವಿನಹಳ್ಳಿ ಗ್ರಾಮ ಪಂಚಾಯಿತಿ ಅಧಿಕಾರಿಗಳಿಗೆ ಮತ್ತು ಪುರ ಪ್ರಮುಖರಿಗೆ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

# "ಅಕ್ಕ ಪಡೆ" ವಾಹನಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ಚಾಲನೆ

- **ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:**



ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ಸೋಮವಾರ ಡಿ.ಎ.ಆರ್. ಪೊಲೀಸ್ ಪರೇಡ್ ಮೈದಾನದಲ್ಲಿ ಮಹಿಳೆಯರು ಮತ್ತು ಮಕ್ಕಳಿಗೆ ಸಕಾಲಿಕ ಸಹಾಯ ಹಸ್ತ ಚಾಚುವ "ಅಕ್ಕ ಪಡೆ" ವಾಹನಕ್ಕೆ ಚಾಲನೆ ನೀಡಿದರು.ಸಂಕಷ್ಟದಲ್ಲಿರುವ ದುರ್ಬಲ, ಮಹಿಳೆಯರು ಮತ್ತು ಮಕ್ಕಳಿಗೆ ತಕ್ಷಣದ ರಕ್ಷಣೆ ಜೊತೆಗೆ ದೌರ್ಜನ್ಯ, ಹಿಂಸೆ, ನಿರ್ಲಕ್ಷ್ಯ ಅಥವಾ ಶೋಷಣೆ ಎದುರಿಸುತ್ತಿರುವ ಮಹಿಳೆಯರು ಮತ್ತು ಮಕ್ಕಳಿಗೆ ಸಕಾಲಿಕ ಸಹಾಯ ಹಸ್ತ ಚಾಚಲು ಪ್ರಸಕ್ತ 2025-26ನೇ ಸಾಲಿನ ರಾಜ್ಯಮಟ್ಟದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಪೊಲೀಸ್ ಇಲಾಖಾ ಸಹಯೋಗದೊಂದಿಗೆ "ಅಕ್ಕಪಡೆ" ಕಾರ್ಯಕ್ರಮ ಜಾರಿಗೊಳಿಸಿದೆ. ಅದರಂತೆ ಕಲಬುರಗಿಯಲ್ಲಿಯೂ ಇಂದಿಲ್ಲಿ ಚಾಲನೆ ನೀಡಲಾಗಿದೆ. 4 ಮಹಿಳಾ ಗೃಹ ರಕ್ಷಕರು ಹಾಗೂ ಪೊಲೀಸ್ ಸಿಬ್ಬಂದಿ ಒಳಗೊಂಡ "ಅಕ್ಕ ಪಡೆ" ವಾಹನ ಪ್ರತಿದಿನ ಬೆಳಿಗ್ಗೆ 8 ಗಂಟೆಯಿಂದ ರಾತ್ರಿ 8 ವರೆಗೆ ಸಂಚರಿಸಿ ಮಹಿಳೆಯರ ರಕ್ಷಣೆ ಮಾಡಲಿದೆ.

ಕರ್ನಾಟಕ ರೇಷ್ಮೆ ಉದ್ದಿಮೆಗಳ ನಿಗಮದ ನಿಯಮಿತದ ಅಧ್ಯಕ್ಷೆ ಹಾಗೂ ಉತ್ತರ ಶಾಸಕಿ ಕನೀಜ್ ಫಾತೀಮಾ, ಕಲಬುರಗಿ ದಕ್ಷಿಣ ಶಾಸಕ ಅಲ್ಲಮಪ್ರಭು ಪಾಟೀಲ, ವಿಧಾನ ಪರಿಷತ್ ಶಾಸಕರುಗಳಾದ ತಿಪ್ಪಣ್ಣಪ್ಪ ಕಮಕನೂರ, ಜಗದೇವ ಗುತ್ತೇದಾರ್, ಜಿಲ್ಲಾಧಿಕಾರಿ ಬಿ. ಫೌಜಿಯಾ ತರನ್ನುಮ್, ನಗರ ಪೊಲೀಸ್ ಆಯುಕ್ತ ಡಾ. ಎಸ್.ಡಿ. ಶರಣಪ್ಪ, ಎಸ್.ಪಿ. ಅಡ್ಡೂರು ಶ್ರೀನಿವಾಸಲು, ಜಿಲ್ಲಾ ಪಂಚಾಯತ್ ಸಿ.ಇ.ಓ ಭಂವರ್ ಸಿಂಗ್ ಮೀನಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ರಾಜಕುಮಾರ ರಾಠೋಡ, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಮಂಜುಳಾ ಪಾಟೀಲ ಇದ್ದರು.

# ಯಶಸ್ವಿಯಾಗಿ ಜರುಗಿದ ಅರಣ್ಯ ಇಲಾಖೆಯ ಅನ್ನ ದಾಸೋಹ

- **ಮಲ್ಲಮ್ಮ ನುಡಿ ವಾರ್ತೆ,ಹುಮನಾಬಾದ:**



ನಗರದ ಐತಿಹಾಸಿಕ ಶ್ರೀ ವೀರಭದ್ರೇಶ್ವರ ಜಾತ್ರಾಮಹೋತ್ಸವದ ಅಂಗವಾಗಿ ಪ್ರತಿ ವರ್ಷದಂತೆ ಈ ವರ್ಷವೂ ಕೂಡ ಪ್ರಾದೇಶಿಕ ವಲಯ ಅರಣ್ಯ ಇಲಾಖೆಯಿಂದ ಏರ್ಪಡಿಸಿದ್ದ ಅನ್ನದಾಸೋಹಕ್ಕೆ ಸಿಂಧನಕೇರಾ ವಿರಕ್ತ ಮಠದ ಹೊನ್ನಾಲಿಂಗೇಶ್ವರ ಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ ವಿಶೇಷ ಪೂಜೆ ಜರುಗಿತ್ತು. ಊಟ ಬಡಿಸುವ ಮೂಲಕ ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಐಶ್ವರ್ಯ ಗೊಬ್ಬುರ್ ಚಾಲನೆ ನೀಡಿದರು. ಪರಿಸರವಾದಿ ಶೈಲೇಂದ್ರ ಕಾವಡಿ ಮಾತನಾಡಿ, ಕಳೆದ 12 ವರ್ಷಗಳಿಂದ ಶ್ರೀ ವೀರಭದ್ರೇಶ್ವರ ಜಾತ್ರಾ ಅಂಗವಾಗಿ ಒಳ್ಳೆ ಗುಣಮಟ್ಟದ ಅನ್ನ ದಾಸೋಹ ಏರ್ಪಡಿಸುತ್ತಿರುವ ಕಾರ್ಯ ಶ್ಲಾಘನೀಯವಾಗಿದೆ ಎಂದರು. ವೀರಭದ್ರೇಶ್ವರ ಜಾತ್ರಾ ಮಹೋತ್ಸವಕ್ಕೆ ಆಗಮಿಸಿದ ಸಾವಿರಾರು ಭಕ್ತಾದಿಗಳು ಪ್ರಸಾದ ಸ್ವೀಕರಿಸಿಕೊಂಡರು. ಈ ಸಂದರ್ಭದಲ್ಲಿ ಚಿಟಗುಪ್ಪ ಪ್ರಾದೇಶಿಕ ವಲಯ ಅರಣ್ಯಾಧಿಕಾರಿ ಶ್ರೀಕಾಂತ ರಾಠೋಡ, ಹುಮನಾಬಾದ ಸಾಮಾಜಿಕ ವಲಯ ಅರಣ್ಯಾಧಿಕಾರಿ ಪ್ರಕಾಶ ನಿಪ್ಪಾಣಿ, ಉಪ ವಲಯ ಅರಣ್ಯಾಧಿಕಾರಿಗಳಾದ ವೀರಯ್ಯಾ ಪೂಜಾರಿ, ಸಂತೋಷ ನೈಕೋಡಿ, ಅಂಬಾದಾಸ್ ಪಾಟೀಲ, ರೌಫ ಖಾನ್ ಸೇರಿದಂತೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಸಮ ಸಮಾಜ ನಿರ್ಮಾಣಕ್ಕೆ ಸಂಕಲ್ಪ:ಪ್ರಿಯಾಂಕ್ ಖರ್ಗೆ

**ಮಲ್ಲಮ್ಮ ನುಡಿ ವಾರ್ತೆ, ಕಲಬುರಗಿ:**



ದೇಶದಲ್ಲಿ ಸಾವಿರಾರು ವರ್ಷಗಳಿಂದ ತುಳಿತಕ್ಕೊಳಗಾದ ಸಮುದಾಯಕ್ಕೆ ಸಂವಿಧಾನ ಜಾರಿಯಿಂದ ರಾಜಕೀಯ ಸಮಾನತೆ ಸಿಕ್ಕಿದೆಯಾದರು ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಇನ್ನು ದೊರೆತಿಲ್ಲ ಎಂಬುದನ್ನು ಮನಗಂಡಿರುವ ನಮ್ಮ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳ ಮೂಲಕ ಆರ್ಥಿಕ ಸ್ಥಿರತೆ ತಂದು ಸಮ-ಸಮಾಜದ ನಿರ್ಮಾಣದ ಸಂಕಲ್ಪ ಮಾಡಿದೆ ಎಂದು ರಾಜ್ಯದ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು ಹಾಗೂ ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಸೋಮವಾರ ಕಲಬುರಗಿ ನಗರದ ಡಿ.ಎ.ಆರ್. ಪೊಲೀಸ್ ಪರೇಡ್ ಮೈದಾನದಲ್ಲಿ 77ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿದ ನಂತರ ವಿವಿಧ ಪರೇಡ್ ತುಕಡಿಗಳಿಂದ ಗೌರವ ವಂದನೆ ಸ್ವೀಕರಿಸಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಅವರು, 26 ಜನೇವರಿ 1950 ಸಂವಿಧಾನ ಜಾರಿಗೆ ಬಂದು ಸಾಮಾಜಿಕ-ರಾಜಕೀಯ ವಂಚಿತ ಸಮುದಾಯಕ್ಕೆ ಧ್ವನಿ ಬಂದ ದಿನ. ಎಸ್.ಸಿ-ಎಸ್.ಟಿ ಆದಿವಾಸಿಗಳಿಗಳು ಮುಖ್ಯವಾಹಿನಿಗೆ ಬಂದ ಐತಿಹಾಸಿಕ ದಿನ. ಮಹಿಳೆಯರಿಗೆ ಸಮಾನವಾದ ಅವಕಾಶ ಕೊಟ್ಟ ಸುದಿನವಾಗಿದೆ ಎಂದರು.130 ಶತಕೋಟಿ ಜನಸಂಖ್ಯೆಯ ದೇಶದಲ್ಲಿ ವಿವಿಧ ಭಾಷೆ, ಆಚಾರ ವಿಚಾರ, ವಿಭಿನ್ನ ಆಚರಣೆಗಳು ಇವೆ. ಸಂವಿಧಾನ ಇರದೆ ಇದ್ದಿದ್ದರೆ ಇವುಗಳನ್ನು ಕಾಪಾಡಿಕೊಂಡು ಬರಲು ಅಸಾಧ್ಯವಾಗಿತ್ತು. ಭಿನ್ನತೆಯಲ್ಲಿ ಏಕತೆ ಇರುವ ದೇಶದಲ್ಲಿ ಡಾ.ಅಂಬೇಡ್ಕರ್ ಅವರು ನೀಡಿದ ಶ್ರೇಷ್ಠ ಸಂವಿಧಾನದಿಂದ ಇಂದು ನಾವೆಲ್ಲರು ಬಲಿಷ್ಟ ಭಾರತ ನಿರ್ಮಿಸಲು ಸಾಧ್ಯವಾಗುತ್ತಿದೆ ಎಂದರು.

ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ವಂಚಿತ ಸಮುದಾಯಕ್ಕೆ ನ್ಯಾಯ ಕಲ್ಪಿಸಿ ಅವರನ್ನು ಸಮಾಜದ ಮುಖ್ಯವಾಹಿನಿಗೆ ತಾರದಿದ್ದಲ್ಲಿ ವ್ಯವಸ್ಥೆಯ ಮೇಲೆ ಅಪನಂಬಿಕೆ ಹುಟ್ಟುಕೊಳ್ಳುತ್ತದೆ ಎಂದು ಅಂಬೇಡ್ಕರ್ ಅಂದೇ ಎಚ್ಚರಿಸಿದರು. ಈ ನಿಟ್ಟಿನಲ್ಲಿ ನಮ್ಮ ಸರ್ಕಾರ ರೈತರಿಗೆ, ಮಹಿಳೆಯರಿಗೆ, ಕಾರ್ಮಿಕರಿಗೆ ಹಾಗೂ ಇತರರಿಗೆ ಆರ್ಥಿಕ ಸಮಾನತೆ ತರುವ ಯೋಜನೆಗಳನ್ನು ರೂಪಿಸಿ ಜಾರಿಗೆ ತಂದಿದ್ದೇವೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

# ಕಕ್ಷಿದಾರರ ಭಾವನೆಗೆ ಸ್ಪಂದನೆ ನೀಡಿ

## ನ್ಯಾ. ಮೂ. ಹಂಚಾಟೆ ಸಂಜೀವ್‌ಕುಮಾರ



**ಮಲ್ಲಮ್ಮ ನುಡಿ ವಾರ್ತೆ**

- **ಕಮಲನಗರ:**

ಕಕ್ಷಿದಾರರ ಭಾವನೆಗೆ ಸ್ಪಂದನೆ ನೀಡಿ, ಅವರನ್ನು ಗೌರವದಿಂದ ಕಾಣಬೇಕು, ತಮ್ಮ ಸಮಸ್ಯೆ ಹಾಗೂ ತೊಂದರೆಗಳು ಹೊತ್ತಿಕೊಂಡು ಬರುವ ಅವರಿಗೆ ಸೂಕ್ತ ನ್ಯಾಯ ಕೊಡಿಸುವ ಕಾರ್ಯ ವಕೀಲರು ಹಾಗೂ ನ್ಯಾಯಾಧೀಶರು ಮಾಡಬೇಕೆಂದು ನ್ಯಾಯಮೂರ್ತಿ ಹಂಚಾಟೆ ಸಂಜೀವ್ ಕುಮಾರ ನ್ಯಾಯಾಧೀಶರು, ಕರ್ನಾಟಕ ಉಚ್ಚ ನ್ಯಾಯಾಲಯ ಅವರು ಹೇಳಿದರು.

ಪಟ್ಟಣದ ವಿಶ್ವಾಸನಗರ ಬಡಾವಣೆಯಲ್ಲಿ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ದಂಡನೀಯ ನ್ಯಾಯಾಲಯ, ಔರಾದ್(ಬಿ) ಸಂಚಾರಿ ನ್ಯಾಯಾಲಯ ಕಚೇರಿಯನ್ನು ಭಾನುವಾರ ಉದ್ಘಾಟನೆ ಮಾಡಿ ಮಾತನಾಡಿದರು. ಸಂವಿಧಾನದ ಚೌಕಟ್ಟಿನಲ್ಲಿ ಪ್ರತಿಯೊಬ್ಬ ಪ್ರಜೆಗೆ ನ್ಯಾಯಸಿಗುವ ಸಲುವಾಗಿ, ಕಾನೂನು ವ್ಯವಸ್ಥೆ ಮಾಡಲಾಗಿದೆ. ಕೋರ್ಟ್ ಆವರಣದಲ್ಲಿ ಕಕ್ಷಿದಾರರಿಗೆ ಮೂಲಭೂತ ಸೌಕರ್ಯ ಕೊರತೆ-ಯಾಗದಂತೆ ನೋಡಿಕೊಳ್ಳಬೇಕು, ಕಮಲನಗರ ತಾಲೂಕಿನ ಪ್ರತಿಯೊಬ್ಬ ಪ್ರಜೆಗೆ ಸರ್ವತೋಮುಖ ನ್ಯಾಯ ಒದಗಿಸುವ ಕಾರ್ಯ ಮಾಡಬೇಕೆಂದು ತಿಳಿಸಿದರು.ಕಾರ್ಯಕ್ರಮದ ಘನ ಅಧ್ಯಕ್ಷತೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ವಹಿಸಿ ಅವರು ಮಾತನಾಡಿದರು, ಕಮಲನಗರನಲ್ಲಿ ನೂತನ ತಾಲೂಕು ಕಚೇರಿಯಲ್ಲಿ ಸಂಚಾರಿ ನ್ಯಾಯಾಲಯ ಆರಂಭಗೊಂಡಿರುವುದು ಸ್ಥಳೀಯ ನಾಗರಿಕರಿಗೆ ನ್ಯಾಯ ಸೇವೆಗಳು ತ್ವರಿತವಾಗಿ ಹಾಗೂ ಹತ್ತಿರದಲ್ಲೇ ಲಭ್ಯವಾಗಲು ನೆರವಾಗಲಿದೆ. ಮುಂದಿನ ದಿನಗಳಲ್ಲಿ ಖಾಯಂ ನ್ಯಾಯಾಲಯ ನಿರ್ಮಾಣಕ್ಕಾಗಿ ಅಗತ್ಯವಿರುವ ಭೂಮಿ ಹಾಗೂ ಅನುದಾನವನ್ನು ಮೀಸಲಿಟ್ಟು, ಶೀಘ್ರದಲ್ಲೇ ಅದರ ಭೂಮಿಪೂಜೆ ನೆರವೇರಿಸಲಾಗುವುದು ಎಂದು ಭರವಸೆ ನೀಡಿದರು.ಎಲ್ಲರಿಗೂ ಸಮಾನ ನ್ಯಾಯ ಸಿಗಬೇಕು, ಸಮಾಜದಲ್ಲಿ ನ್ಯಾಯಾಂಗದ ಮೇಲೆ ಜನರಿಗೆ ತುಂಬಾ ನಂಬಿಕೆ ಇದೆ, ಪ್ರಕರಣಗಳು ತಡ ಮಾಡದೆ ಇತ್ಯರ್ಥ ಗೊಳಿಸಬೇಕು, ಪ್ರಕರಣಗಳು ಬೇಗ ಇತ್ಯರ್ಥಗೊಳ್ಳಲು ಸರ್ಕಾರದಿಂದ ಹೆಚ್ಚುವರಿ ನ್ಯಾಯಾಲಯಗಳು ಪ್ರಾರಂಭ ಮಾಡಲಾಗುತ್ತಿದೆ. ಪ್ರಸ್ತಾವಿಕ ನುಡಿಯನ್ನು ಸೈಯದ್ ಬಾಲೆಗೂರ ರಹಮಾನ್, ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೀದರ ಇವರು ಮಾತನಾಡಿ, ನಾನು ಬೀದರ ಜಿಲ್ಲೆಗೆ ಬಂದಾಗ ಮೊದಲ ಕೆಲಸ ಕಮಲನಗರ ಸಂಚಾರಿ ನ್ಯಾಯಲಯ ಮಾಡಿದು, ಇಲ್ಲಿನ ಜನರಿಗೆ ಮನೆ ಬಾಗಿಲಿಗೆ ಬಂದು ನ್ಯಾಯ ಸಿಗಲಿದೆ. ಪ್ರತಿ ಶುಕ್ರವಾರ ಮತ್ತು ಶನಿವಾರ ಕಮಲನಗರನಲ್ಲಿ ನ್ಯಾಯಲಯ ನಡೆಯಲಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಬಾಲಾಜಿ ಕಂಬಾರ ಅಧ್ಯಕ್ಷರು, ವಕೀಲರ ಸಂಘ, ಔರಾದ್ (ಬಿ), ಬಾಲಾಜಿ ಉಪಾಸೆ, ಪ್ರಧಾನ ಕಾರ್ಯದರ್ಶಿಗಳು, ವಕೀಲರ ಸಂಘ, ಔರಾದ್ (ಬಿ), ಶ್ರೀ ಶಿವಶಂಕರ್ ಕಂಶೆಟ್ಟಿ ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಬೀದರ್ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವಕೀಲರ ಸಂಘದ ಎಲ್ಲಾ ಸದಸ್ಯರು ಹಾಗೂ ತಹಸೀಲ್ದಾರ್ ಅಮಿತ ಕುಮಾರ ಕುಲಕರ್ಣಿ, ಇಓ ಹಣಮಂತರಾಯ ಕೌಟಗೆ, ಪ್ರವೀಣ ಪಾಟೀಲ, ಎಸ್. ಏನ್ ಶಿವನಕರ, ರಾಜಕುಮಾರ ಹಲಬರ್ಗೆ, ಪ್ರಭು ಬೆಣ್ಣೆ, ಸೇರದಂತೆ ವಿವಿಧ ಗ್ರಾಮ ಅಧ್ಯಕ್ಷರು ಹಾಗೂ ಪಿ.ಡಿ.ಯೋ ಸೇರಿದಂತೆ ತಾಲೂಕಿನ ಸಾರ್ವಜನಿಕ ಇದ್ದರು. ಕಾರ್ಯಕ್ರಮದ ನಿರೂಪಣೆ ಮಹಾದೇವ ಮಡಿವಾಳ ನಡೆಸಿಕೊಟ್ಟರು. ಡಿ.ವೈ.ಎಸ್ಪಿ. ಶಿವಾನಂದ ಪವಾಡ ಶೆಟ್ಟಿ ನೇತೃತ್ವದಲ್ಲಿ ಸೂಕ್ತ ಪೊಲೀಸ ಭದ್ರತೆ ನೀಡಿದರು.

# ಸಂವಿಧಾನದ ಆಶಯಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಪೂರ್ಣ ಸ್ವರಾಜ್ಯ: ನ್ಯಾಯಮೂರ್ತಿ ಆರ್ ನಟರಾಜ್




- **ಮಲ್ಲಮ್ಮ ನುಡಿ ವಾರ್ತೆ ,ಕಲಬುರಗಿ:**

ಭಾರತದ ಸಂವಿಧಾನವು ಕೇವಲ ಒಂದು ಆಡಳಿತಾತ್ಮಕ ದಾಖಲೆಯಲ್ಲ, ಅದು ದೇಶದ ಪ್ರತಿಯೊಬ್ಬ ನಾಗರಿಕನು ಗೌರವದಿಂದ ಮತ್ತು ಸಮಾನತೆಯಿಂದ ಬಾಳಲು ದಾರಿದೀಪವಾಗಿರುವ ಜೀವಂತ ದಾಖಲೆಯಾಗಿದ್ದು, ಸಂವಿಧಾನದ ಆಶಯಗಳನ್ನು ಜನರು ತಮ್ಮ ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಪೂರ್ಣ ಸ್ವರಾಜ್ಯ ಸಿಕ್ಕಂತಾಗುತ್ತದೆ ಎಂದು ಕಲಬುರಗಿ ಪೀಠದ ಗೌರವಾನ್ವಿತ ಹಿರಿಯ ನ್ಯಾಯಮೂರ್ತಿಗಳಾದ ಆರ್ ನಟರಾಜ್ ಅವರು ಅಭಿಪ್ರಾಯಪಟ್ಟರು.

ಕರ್ನಾಟಕ ಹೈಕೋರ್ಟ್ ಕಲಬುರಗಿ ಪೀಠದಲ್ಲಿಂದು ಹಮ್ಮಿಕೊಳ್ಳಲಾಗಿದ್ದ 77ನೇ ಗಣರಾಜ್ಯೋತ್ಸವದಲ್ಲಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು "ಹಕ್ಕುಗಳು ಕೇವಲ ಕಾಗದದ ಮೇಲಿರುವ ಸವಲತ್ತುಗಳಲ್ಲ, ಅವು ಸಮಾಜದ ಕಟ್ಟಕಡೆಯ ವ್ಯಕ್ತಿಗೆ ತಲುಪಿದಾಗ ಮಾತ್ರ ಸಂವಿಧಾನಕ್ಕೆ ನಿಜವಾದ ಅರ್ಥ ಬರುತ್ತದೆ. ಪ್ರಜೆಗಳ ಹಕ್ಕುಗಳನ್ನು ರಕ್ಷಿಸುವುದು ನ್ಯಾಯಾಂಗದ ಕರ್ತವ್ಯವಷ್ಟೆ ಅಲ್ಲ, ಅದು ನಮ್ಮ ಸಂವಿಧಾನದ ಆತ್ಮ "ಎಂಬ ನ್ಯಾಯಮೂರ್ತಿ ಶಿವರಾಜ್ ಪಾಟೀಲರ ಆಶಯವೇ ನಮ್ಮ ಗುರಿಯಾಗಿರಲಿ ಎಂದು ಹೇಳಿದರು.

ಭಾರತದ ಸಂವಿಧಾನ ಸಭೆಯು ರಾಷ್ಟ್ರ ಧ್ವಜವನ್ನು ಸ್ವೀಕರಿಸಲು ನಿರ್ಣಯಿಸಿದಾಗ ಅಂದಿನ ಪ್ರಧಾನಮಂತ್ರಿ ಜವಾಹರಲಾಲ್ ನೆಹರೂ ಮತ್ತು ಸರೋಜಿನಿ ನಾಯ್ಡು ಅವರ ಐತಿಹಾಸಿಕ ಮಾತುಗಳನ್ನು ಸ್ಮರಿಸಿದ ಅವರು, ಸಂವಿಧಾನದ ಅಡಿಯಲ್ಲಿ ಮೇಲು-ಕೀಳು ಎಂಬ ಭೇದವಿಲ್ಲ, ಅಲ್ಲಿರುವುದು ಕೇವಲ ಕರ್ತವ್ಯ ಮತ್ತು ಜವಾಬ್ದಾರಿ ಮಾತ್ರ. ನಾವು ನಮ್ಮ ಧರ್ಮ, ಜಾತಿ ಮತ್ತು ವೈಯಕ್ತಿಕ ನಂಬಿಕೆಗಳನ್ನು ಮನೆಯ ಚೌಕಟ್ಟಿಗೆ ಸೀಮಿತಗೊಳಿಸಿ, ಮೌಢ್ಯತೆ ಮತ್ತು ಭೇದಭಾವದಿಂದ ಮುಕ್ತರಾಗಿ ನಾವು ಬದುಕಿದಾಗ ಮಾತ್ರ ಭಾರತಕ್ಕೆ ಸಂಪೂರ್ಣ ಸ್ವರಾಜ್ಯ ಲಭಿಸಿದಂತಾಗುತ್ತದೆ. ತಮ್ಮ ಸಿಂಗಾಪುರ ಪ್ರವಾಸದ ಅನುಭವವನ್ನು ಹಂಚಿಕೊಂಡ ಅವರು ಅಲ್ಲಿನ ನಾಗರಿಕರು ಹೇಗೆ ರಾಷ್ಟ್ರಪ್ರೇಮವನ್ನು ತಮ್ಮ ದೈನಂದಿನ ಶಿಸ್ತಿನಲ್ಲಿ ಅಳವಡಿಸಿಕೊಂಡಿದ್ದಾರೆ ಎಂಬುದನ್ನು ಉದಾಹರಿಸಿದರು.

ಸಂವಿಧಾನದ ವಿಧಿ 51(ಎ) ರನ್ವಯ ನಾಗರಿಕರ ಮೂಲಭೂತ ಕರ್ತವ್ಯಗಳ ಬಗ್ಗೆ ಬೆಳಕು ಚೆಲ್ಲಿದ ಅವರು ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ನ್ಯಾಯ ಒದಗಿಸುವಲ್ಲಿ ನ್ಯಾಯಾಂಗದ ಪಾತ್ರವನ್ನು ಶ್ಲಾಘಿಸಿದರು. ಕಲಬುರಗಿ ಹೈಕೋರ್ಟ್ ಪೀಠವು ಕೇವಲ ಒಂದು ಕಟ್ಟಡವಲ್ಲ, ಅದು ಈ ಭಾಗದ ಜನರ ಸುದೀರ್ಘ ಹೋರಾಟದ ಫಲ ಮತ್ತು ನ್ಯಾಯದ ಸಂಕೇತವಾಗಿದೆ. ಇಲ್ಲಿಯವರೆಗೆ ಸುಮಾರು 1.46 ಲಕ್ಷಕ್ಕೂ ಅಧಿಕ ಪ್ರಕರಣಗಳು ವಿಲೇವಾರಿಯಾಗಿರುವುದು ಈ ಪೀಠದ ದಕ್ಷತೆಗೆ ಸಾಕ್ಷಿ ಎಂದರು.

ದೇಶದ ಐಕ್ಯತೆ ಮತ್ತು ಸಮಗ್ರತೆಯನ್ನು ಕಾಪಾಡಲು ಸಂವಿಧಾನ ಪ್ರಸ್ತಾವನೆಯು ಆಗ್ರಹಿಸಿದೆ. ಹಾಗೆಯೇ ಸರ್ಕಾರದ ಹೊಣೆಗಾರಿಕೆಯ ಬಗ್ಗೆ ನಾಗರೀಕರ ಜವಾಬ್ದಾರಿಗಳ ಬಗ್ಗೆ ದೇಶವನ್ನು ನಡೆಸಲು ಬೇಕಾದ ಅಂಗ ಸಂಸ್ಥೆಗಳ ಬಗ್ಗೆ ವಿಸ್ತರವಾಗಿ ತಿಳಿಸುವಂತಹ ಒಂದು ದಾಖಲೆಯಾಗಿದೆ. ಇದೇ ಸಂವಿಧಾದ ದೆಸೆಯಿಂದ 26-01-1950 ರಿಂದ ಇಂದಿನವರೆಗೂ ದೇಶ ಮತ್ತು ನಾಗರೀಕರು ಪ್ರಗತಿ ಪಥದಲ್ಲಿ ಸಾಗಿ ಅಭಿವೃದ್ಧಿ ಹೊಂದಿದ ದೇಶಗಳ ಸಾಲಿನೆಡೆಗೆ ದಾಪುಗಾಲು ಹಾಕಿದ್ದೇವೆ ಆದ್ದರಿಂದ ಗಣರಾಜ್ಯೋತ್ಸವವು ದೇಶದ ಒಂದು ಅತೀ ದೊಡ್ಡ ಹಬ್ಬ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಈ ದೇಶವು ಗಣರಾಜ್ಯವಾದಾಗ ಪೂರ್ಣ ಸ್ವರಾಜ್ ಬಂದಿತಾದರೂ ಸಂಪೂರ್ಣ ಸ್ವರಾಜ್ ಬರಬೇಕಾದರೆ ನಾವೆಲ್ಲಾ ನಾಗರಿಕ ಬಂಧುಗಳು ಜಾತಿ, ಧರ್ಮ ವೇಷ, ಭಾಷೆ ಮೌಢತೆಯಿಂದ ಹೊರಬಂದು ಜವಾಬ್ದಾರರಾಗಿ ಸ್ವತಂತ್ರರಾಗಿ ಸ್ವಚ್ಛಂದವಾಗಿ ಬದುಕಿದ್ದಾಗ ಮಾತ್ರ ಬರುತ್ತದೆ. ಈ ಸ್ವಚ್ಛಂದವಾಗಿ ಸುಖ ನಮಗೆಲ್ಲರಿಗೂ ಬರಲಿ, ಈ ದೇಶ ಸುಭಿಕ್ಷವಾಗಿ ಸಂಪತ್ಭರಿತವಾಗಿ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಒಂದಾಗಲಿ ಎಂದು ಆಶಿಸುತ್ತೇನೆ ಎಂದರು.



ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಇಂದು ಮುಖ್ಯ ಗುರುಗಳಾದ ಅನ್ನಪೂರ್ಣ ನೇತೃತ್ವದಲ್ಲಿ ಹಾಗೂ ಸುರೇಶ್ ಕಾಳೇಕರ್ ದೈಹಿಕ ಶಿಕ್ಷಣದ ಶಿಕ್ಷಕರು. ಪ್ರಶಾಂತ್ ಡ್ಯಾಡೇ ಸಹ ಶಿಕ್ಷಕರು, ಜ್ಯೋತಿ ಸಹ ಶಿಕ್ಷಕಿಯರು, ಸಂಧ್ಯಾರಾಣಿ ಸಹ ಶಿಕ್ಷಕಿಯರು. ಉಷಾ ಸಹ ಶಿಕ್ಷಕಿಯರು,ಕುಮಾರಿ ರೇಣುಕಾ ಅತಿಥಿ ಶಿಕ್ಷಕಿಯರು, ವಿಠಲ ಹತ್ತಿ ಇವರ ಎಲ್ಲಾ ಶಿಕ್ಷಕ ವೃಂದದವರಿಂದ ಮಲ್ಲಮ್ಮ ನುಡಿ ಪ್ರಾದೇಶಿಕ ಕನ್ನಡ ದಿನ ಪತ್ರಿಕೆಯನ್ನು ಬಿಡುಗಡೆ ಮಾಡಲಾಯಿತು. (ಮಲ್ಲಮ್ಮ ನುಡಿ ಚಿತ್ರ)




ಕಮಲನಗರ:ಮಲ್ಲಮ್ಮ ನುಡಿ ದಿನ ಪತ್ರಿಕೆ ಹೊರ ತಂದ ವಿಶಿಷ್ಟ ಕ್ಯಾಲೆಂಡರರನ್ನು ತಾಲೂಕಿನ ದಂಡ ಅಧಿಕಾರ ಹಾಗೂ ತಹಸೀಲ್ದಾರ ಅಮಿತಕುಮಾರ ಕುಲಕರ್ಣಿ ಸರ್, ತಾಲೂಕ ಕಾರ್ಯ ನಿರ್ವಾಹಕ ಅಧಿಕಾರಿ ಹನಮಂತರಾಯ ಕೌಟಗೆ ಸರ್ ಮತ್ತು ಗ್ರೇಡ-2 ತಹಸೀಲ್ದಾರ ರಮೇಶ ಪೆದ್ದೆ ಸರ್ ಅವರಿಂದ ಬಿಡುಗಡೆ ಮಾಡಲಾಯಿತು. ಈ ಸಂದರ್ಭದಲ್ಲಿ ಕಮಲನಗರ ತಾಲೂಕ ವರದಿಗಾರ ಪರಮೇಶ ರಾಂಪುರೆ ಅವರು ಇದ್ದರು. (ಮಲ್ಲಮ್ಮ ನುಡಿ ಚಿತ್ರ)

# ಸಂವಿಧಾನದಿಂದ ನಮಗೆ ಸಮಾನತೆ, ಸಾರ್ವಭೌಮತ್ವ ಸಿಕ್ಕಿದೆ:ಪದ್ಮಾ ಭವರಾ



- **ಮಲ್ಲಮ್ಮ ನುಡಿ ವಾರ್ತೆ,ಕಮಲನಗರ :**

ನಿರಂಕುಶ ಪ್ರಭುತ್ವ ಕಿತ್ತೆಸೆದು ಪ್ರಜಾಪ್ರಭುತ್ವ ರಾಷ್ಟ್ರದ ಮೂಲ ಆಶಯಗಳನ್ನು ಮುಂದಿಟ್ಟುಕೊಂಡು ರಚಿಸಲಾದ ಸಂವಿಧಾನ ಸರ್ವರಿಗೆ ಸಮಬಾಳು, ಜಾತ್ಯಾತೀತ, ಸಮಾನತೆ, ಭ್ರಾತೃತ್ವ, ಸಾರ್ವಭೌಮತ್ವ ಮತ್ತು ಸ್ವಾತಂತ್ರವನ್ನು ದಯಪಾಲಿಸಿದೆ. ಡಾ.ಅಂಬೇಡ್ಕರ ಅವರು ವೈಚಾರಿಕ ನಿಲುವು ದೇಶದ ಪ್ರಗತಿಗೆ ಭದ್ರಬುನಾದಿ ಹಾಕಿದೆ ಎಂದು ಶಿಕ್ಷಕಿ ಪದ್ಮಾ ಭವರಾ ನುಡಿದರು.

ಪಟ್ಟಣದ ತಹಸೀಲ ಕಾರ್ಯಾಲಯದಲ್ಲಿ ಸೋಮವಾರ ಜಿಲ್ಲಾಡಳಿತ, ಕಂದಾಯ ಮತ್ತು ತಾ.ಪಂ.ಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದ ಅವರು ಮಾತನಾಡಿದರು.

ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಏಕತೆಯ ಶಕ್ತಿಯನ್ನು ಸ್ಮರಿಸುವ ದಿನ ತನ್ನದೆ ಆದ ಐತಿಹಾಸಿಕ ಕ್ಷಣವಾಗಿದೆ.ವಂದೇ ಮಾತರಂ ಗೀತೆ ರಚನೆಯಾಗಿ 150 ವರ್ಷ ಕಳೆದಿವೆ.ದೇಶದ ಪ್ರಗತಿ ಮತ್ತು ಅಖಂಡತೆಯನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ನಾವೆಲ್ಲರು ಒಗ್ಗೂಡಬೇಕು.

ಅಂತರಿಕ ಉಗ್ರವಾದ ಅತ್ಯಂತ ಅಪಾಯಕಾರಿಯಾಗಿದ್ದು, ಸ್ವಾಭಿಮಾನ ಮತ್ತು ಸ್ವಾವಲಂಬನೆ ಮೂಲಕ ದೇಶದ ಪ್ರಗತಿ ಜೊತೆಗೆ ಸಮನ್ವಯತೆ ಸಾಧಿಸಬೇಕಾದ ಅನಿವಾರ್ಯತೆ ಒದಗಿದೆ ಎಂದರು.

ಧ್ವಜಾರೋಹಣ ನೆರವೇರಿಸಿದ ತಹಶೀಲ್ದಾರ್ ಅಮಿತಕುಮಾರ ಕುಲಕರ್ಣಿ ಮಾತನಾಡಿ ಜನರಿಂದ , ಜನರಿಗೋಸ್ಕರ ಮತ್ತು ಜನರಿಂದ ಆಯ್ಕೆಯಾದ ಪ್ರತಿನಿಧಿಗಳಿಂದ ನಡೆಸುವ ಸರಕಾರ ಪ್ರಜಾಪ್ರಭುತ್ವ ಮೌಲ್ಯಗಳನ್ನು ಹೊಂದಿರುತ್ತದೆ. ಮೂಲ ಸವಲತ್ತುಗಳಿಂದ ವಂಚಿತರಾದ ನಾಗರೀಕರ ಮನೆ ಬಾಗಿಲಿಗೆ ಸರಕಾರದ ಯೋಜನೆಗಳನ್ನು ಕೊಂಡೊಯ್ಯುವ ಕಾಳಜಿ ಪ್ರತಿಯೊಬ್ಬ ಅಧಿಕಾರಿಗಳ ಕಾರ್ಯವಾಗಿದೆ.

ಈ ನಿಟ್ಟಿನಲ್ಲಿ ಸಾರ್ವಜನಿಕರು ಮತ್ತು ಅಧಿಕಾರಿಗಳ ಸಮನ್ವಯತೆಯಿಂದ ಕಾರ್ಯ ಕೈಗೊಂಡರೆ ದೇಶ ಪ್ರಗತಿಯಾಗುತ್ತದೆ ಎಂದರು. ವೇದಿಕೆಯಲ್ಲಿ ಗ್ರಾ.ಪಂ.ಅಧ್ಯಕ್ಷೆ ಸುಶೀಲಾಬಾಯಿ ಮಹೇಶ ಸಭೆ ಅಧ್ಯಕ್ಷತೆ ವಹಿಸಿದರು. ತಾ.ಪಂ.ಇ.ಓ. ಹಣಮಮತರಾಯ ಕೌಟಗೆ, ಗ್ರೇಡ್-2.ತಹಸೀಲದಾರ ರಮೇಶ ಪೆದ್ದೆ, ಪಿಡಿಓ.ದಿಲೀಪ ,ಸಿ ಆರ್ಪಿ .ಶಿವಕುಮಾರ ಹೊನ್ನಾಳೆ, ಪಿ ಎಸ್ ಐ.ಆಶಾ ರಾಠೋಡ, ಬಾಲಾಜಿ ತೆಲಂಗ್, ಶ್ರೀರಂಗ ಪರಿಹಾರ, ಮನೋಜಕುಮಾರ ಪೊಲೀಸ್ ಪಾಟೀಲ, ಸುಭಾಷ ಗಾಯಕವಾಡ, ರಾಜಕುಮಾರ ಪೊ.ಪಾಟೀಲ, ಶಿವೂ ವಡ್ಡೆ, ನೀಲಕಂಠರಾವ ಕಾಂಬಳೆ ಹಾಗೂ ಪ್ರಮುಖರಿದ್ದರು. ರೋಹಿದಾಸ ಮೇತ್ರೆ ಕಾರ್ಯಕ್ರಮ ನಿರೂಪಿಸಿದರು. ಹಣಮಂತರಾಯ ಕೌಟಗೆ ವಂದಿಸಿದರು. ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಜರುಗಿದವು.



ಕಮಲನಗರ : ತಾಲೂಕಿನ ಮುಧೋಳ (ಬಿ) ಗ್ರಾಮದ ಪಿ.ಕೆ.ಪಿ.ಎಸ್. ನಲ್ಲಿ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮ ನಿಮತ್ಯ ಸಂಘದ ಅಧ್ಯಕ್ಷ ಗುರುನಾಥ ವಟಗೆ ಧ್ವಜಾರೋಹಣ ಮಾಡಿದರು. ಈ ಸಂದರ್ಭದಲ್ಲಿ ಸಂಘದ ಸದಸ್ಯರು ಇದ್ದರು.

# ದೇಶ ಕಟ್ಟುವ ಕೆಲಸ ಮಾಡೋಣ: ಸಂಕೀನ್



• ಮಲ್ಲಮ್ಮ ನುಡಿ ವಾರ್ತೆ

ಗಣರಾಜ್ಯೋತ್ಸವ ಅಂಗವಾಗಿ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಅವರು ಜಿಲ್ಲಾ ಪತ್ರಿಕಾ ಭವನದಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿದರು. ಇದೇ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಮಲ್ಲಪ್ಪ ಸಂಕೀನ್ ಅವರು, ದೇಶಕ್ಕೆ ಹಲವಾರು ಮಹಾನ್ ಪುರುಷರು ಅಪೂರ್ವವಾದ ಕೊಡುಗೆ ನೀಡಿದ್ದಾರೆ. ಅವರು ಹಾಕಿಕೊಟ್ಟಿರುವ ಮಾರ್ಗದಲ್ಲಿ ನಾವೆಲ್ಲರೂ ಸಾಗುವ ಮೂಲಕ ದೇಶವನ್ನು ಕಟ್ಟುವ ಕೆಲಸ ಮಾಡಬೇಕು ಎಂದರು. ಸಮಾಜದ ಬದಲಾವಣೆಯಲ್ಲಿ ಪತ್ರಕರ್ತರ ಪಾತ್ರ ಅಮೋಘವಾಗಿದೆ. ಹೀಗಾಗಿ ನಾವು ಕೂಡ ನೋಂದವರ ಧ್ವನಿಯಾಗಿ ಕೆಲಸ ಮಾಡಬೇಕು. ಯಾವುದೇ ಕಾರಣಕ್ಕೂ ಸಹ ನಿರ್ಲಕ್ಷ್ಯತನ ಮಾಡಬಾರದು. ಮೈ ಮರೆತರೆ ವ್ಯತಿರಿಕ್ತವಾದ ಪರಿಣಾಮ ಉಂಟಾಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬಾರದು ಎಂದರು. ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಿದ್ದಪ್ಪ ಲಿಂಗೇರಿ, ಜಿಲ್ಲಾ ಕಾರ್ಯಕಾರಿಣಿ ಸದಸ್ಯ ದೇವರಾಜ ವರ್ಕನಳ್ಳಿ, ಪತ್ರಕರ್ತರಾದ ನರಸಪ್ಪ ನಾರಾಯಣೋರ್, ಡಾ. ಭೀಮರಾಯ ಲಿಂಗೇರಿ, ಮಲ್ಲಿಕಾರ್ಜುನ ಆಶನಾಳ, ನಾಗರಾಜ ಮುಗದುಮ್, ನಾಗರಾಜ ಬೀರನೂರ, ಆಂಜನೇಯ ದೇವರಮನಿ, ಲಿಂಗೇಶ್ ಮರಕಲ್, ಭೀರಲಿಂಗಪ್ಪ ಕಿಲ್ಲನಕೇರಾ, ರಮೇಶ್, ಮಹೇಶ್, ಶಿವಾನಂದ ಸೇರಿದಂತೆ ಇನ್ನಿತರರಿದ್ದರು.

# ವಚನ ಚಳುವಳಿಯ ತಾತ್ವಿಕತೆಯೇ ಸೌಹಾರ್ದತೆ: ರಾಮಚಂದ್ರಪ್ಪ



• ಮಲ್ಲಮ್ಮ ನುಡಿ ವಾರ್ತೆ,ಬಸವಕಲ್ಯಾಣ:

ವಚನ ಚಳುವಳಿ ಸಮಾನತೆ ಮತ್ತು ಸೌಹಾರ್ದತೆ ಸಾಧಿಸಿದ ಚಳುವಳಿಯಾಗಿದೆ. ಕನ್ನಡ ಜಗತ್ತನ್ನು ವೈಚಾರಿಕವಾಗಿ ರೂಪಿಸಿದ್ದು ವಚನಕಾರರು ಎಂದು ಹಿರಿಯ ಚಿಂತಕ ಪ್ರೊ. ಬರಗೂರು ರಾಮಚಂದ್ರಪ್ಪ ಹೇಳಿದರು.

ಇಲ್ಲಿನ ಇಂಜಿನಿಯರಿಂಗ್ ಕಾಲೇಜು ಸಹಯೋಗದಲ್ಲಿ ಡಾ. ಜಯದೇವಿತಾಯಿ ಲಿಗಾಡೆ ಪ್ರತಿಷ್ಠಾನದಿಂದ ಹಮ್ಮಿಕೊಂಡಿದ್ದ ಪ್ರತಿಷ್ಠಾನದ 96ನೇ ಉಪನ್ಯಾಸ ಸಮಾರಂಭದಲ್ಲಿ 'ಕನ್ನಡ ಸಾಹಿತ್ಯ: ಸಮಾನತೆ ಮತ್ತು ಸೌಹಾರ್ದತೆ ' ಕುರಿತು ಮಾತನಾಡಿದ ಅವರು,

ವಚನ ಸಾಹಿತ್ಯಕ್ಕೆ ಸಾಹಿತ್ಯದ ಮನ್ನಣೆ ದೊರೆತದ್ದು ಎಪ್ಪತ್ತು ಎಂಬತ್ತರ ದಶಕದ ನಂತರ. ಅನಂತರ ವಚನಗಳ ಕುರಿತು ಭಿನ್ನ ಆಯಾಮಗಳಲ್ಲಿ ಅಧ್ಯಯನ ಆರಂಭವಾದವು ಎಂದರು.

ದೇಹವೇ ದೇಗುಲ ಎಂಬ ಪರಿಕಲ್ಪನೆ ಭಕ್ತಿಯ ಖಾಸಗೀಕರಣಕ್ಕೆ ಆದ್ಯತೆ ನೀಡಿದೆ. ಈ ಆಲೋಚನೆ ಉಳ್ಳವರಿಂತ ವೈಯಕ್ತಿಕ ನೆಲೆಯ ಭಕ್ತಿಗೆ ಮಹತ್ವ ತಂದಿದೆ. ಶರಣ ಸತಿ ಲಿಂಗ ಪತಿ, ಕಾಯಕವೇ ಕೈಲಾಸ ಇಂಥ ಪರಿಕಲ್ಪನೆ ನೀಡಿದ ವಚನ ಚಳುವಳಿ ಜನಪರವಾದದ್ದು. ಬಸವಣ್ಣನವರು ರಾಜಾಶ್ರಯದಲ್ಲಿ ಇದ್ದು ಚಳುವಳಿ ರೂಪಿಸಿದ್ದರು. ಪಂಪ ರಾಜಾಶ್ರಯದಲ್ಲಿ ಜಾತಿ ವ್ಯವಸ್ಥೆಯನ್ನು ವಿರೋಧಿಸಿದ್ದನು ಎಂದರು.

ಸೌಹಾರ್ದತೆ –ಸಮಾನತೆ ಪ್ರಜಾಪ್ರಭುತ್ವದ ತಾತ್ವಿಕತೆಯಾಗಿದೆ. ಸಂವಾದಗಳು ಸಾಧ್ಯವಾಗದ ಕಾಲಘಟ್ಟದಲ್ಲಿ ಇದ್ದೇವೆ. ಸಂವಾದ, ವಾಗ್ವಾದಗಳು ಪ್ರಜಾಪ್ರಭುತ್ವ ಜೀವಂತಿಕೆಗೆ ಪ್ರಧಾನ ಸತ್ವವಾಗಿವೆ. ಸಂವಾದದಲ್ಲಿ ಅಭಿಪ್ರಾಯ, ಭಿನ್ನಾಭಿಪ್ರಾಯ, ಸಹಿಷ್ಣುತೆಗಳಿಗೆ ಮನ್ನಣೆ ದೊರೆಯುತ್ತದೆ. ಬಹುತ್ವ ಹಾಗೂ ಏಕತ್ವಗಳ ಒಂದತ್ವಗಳೆ ಸೌಹಾರ್ದತೆಯಾಗಿದೆ ಎಂದರು.ವಿವೇಕ ಜಾಗದಲ್ಲಿ ಉದ್ರೇಕ, ಸತ್ಯದ ಜಾಗದಲ್ಲಿ ಅಸತ್ಯ ಬಂದು ನೆಲೆಸಿವೆ. ವಿಚಾರ ಮತ್ತು ವಿಕಾರಗಳ ನಡುವಿನ ಅಂತರ ಕಡಿಮೆಯಾಗಿದೆ. ಕನ್ನಡ ಸಾಹಿತ್ಯ ಜಾತಿ– ಕುಲ ವ್ಯವಸ್ಥೆಯನ್ನು ವಿರೋಧಿಸಿದೆ. ಲಿಂಗ ತಾರತಮ್ಯವನ್ನು ವಿರೋಧಿಸಿದೆ. ಪರಂಪರೆಗೆ ಚಲನಶೀಲತೆ ಇರುತ್ತದೆ. ಸಂಪ್ರದಾಯಕ್ಕೆ ಜಡತೆ ಇರುತ್ತದೆ. ಸಂಸ್ಕೃತಿಯೂ ಏಕ ಕಾಲದಲ್ಲಿ ಚಲನಶೀಲತೆ ಮತ್ತು ಜಡತ್ವವನ್ನು ಒಳಗೊಂಡಿರುತ್ತದೆ ಎಂದರು.ನಾವು ಜೀವಿಸುವ ಸಮಾಜದ ಸಹಬಾಳ್ವೆಗೆ, ದೇಶದ ಸೌಹಾರ್ದತೆಗೆ , ಸಮಾನತೆಗೆ ಧಕ್ಕೆ ಬಂದಾಗ ಪ್ರಜ್ಞಾವಂತರು ಆ ಕಾಲದ ದನಿಯಾಗಬೇಕು. ಜಡತ್ವಕ್ಕೆ ಕನ್ನಡ ಸಾಹಿತ್ಯವು ಕಾಲದ ದನಿಯಾಗಿದೆ. ಸಮಕಾಲೀನ ಸೌಹಾರ್ದತೆಗೆ –ಸಮಾನತೆಗೆ ಧಕ್ಕೆ ಬಂದಾಗ ಎಲ್ಲರೂ ಕಾಲದ ದನಿಯಾಗುವ ನಿಟ್ಟಿನಲ್ಲಿ ಪ್ರಯತ್ನಿಸಬೇಕು ಎಂದರು.

ಧರ್ಮ ತಾರತಮ್ಯವಿಲ್ಲದೆ, ಲಿಂಗ ತಾರತಮ್ಯವಿಲ್ಲದೆ, ಜಾತಿ ತಾರತಮ್ಯವಿಲ್ಲದೆ ಕನ್ನಡವನ್ನು ಕಟ್ಟಲಾಗಿದೆ. ಜೈನರು, ಲಿಂಗಾಯತರು, ಬ್ರಾಹ್ಮಣರು, ಕ್ರೈಸ್ತರು, ಮುಸ್ಲಿಂರು ಸೇರಿದಂತೆ ಎಲ್ಲರೂ ಕನ್ನಡ ಜಗತ್ತನ್ನು ಕಟ್ಟಿದ್ದಾರೆ. ಹಾಗಾಗಿಯೇ ಕನ್ನಡ ಸಾಹಿತ್ಯ ಎಂದಿಗೂ ಸಮಾನತೆ ಮತ್ತು ಸೌಹಾರ್ದತೆ ಪ್ರತಿಪಾದಿಸುತ್ತದೆ ಎಂದರು.

ಮುಖ್ಯ ಅತಿಥಿಗಳಾಗಿ ಭಾಗವಹಿಸಿದ ಬೀದರ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ. ಎಸ್. ಬಿರಾದಾರ ಮಾತನಾಡಿ, ಕನ್ನಡ ಸಾಹಿತ್ಯ ಆರಂಭದಿಂದಲೂ ಸಮಾನತೆ ಮತ್ತು ಸೌಹಾರ್ದತೆಯ ಪಾಠ ಮಾಡುತ್ತಾ ಬಂದಿದೆ. ಅದನ್ನು ಗ್ರಹಿಸುವ, ಅರ್ಥೈಸುವ ಪ್ರಯತ್ನ ಮತ್ತೆ ಮತ್ತೆ ಮಾಡಬೇಕಿದೆ ಎಂದರು. ಹಿರಿಯ ಸಾಹಿತಿ ಡಾ. ಜಗನ್ನಾಥ ಹೆಬ್ಬಾಳೆ ಅವರು ಮಾತನಾಡಿ, ಕನ್ನಡದ ಸಾಕ್ಷಿ ಪ್ರಜ್ಞೆಯಾಗಿರುವ ಬರಗೂರರು ತಮ್ಮ ಕನ್ನಡ ಪರ ಕೆಲಸಗಳಿಂದ ಮನೆಮಾತಾಗಿದ್ದಾರೆ. ಅವರು ತಾಯಿ ಪ್ರೀತಿಯ ಜಾಯಮಾನವರು. ಎಂದಿಗೂ ಈ ನೆಲದ ಪ್ರಜಾಪ್ರಭುತ್ವದ, ಸಮಾನತೆಯ ಬಗೆಗೆ ಧ್ಯಾನಿಸಿದವರು ಎಂದರು.ಅಧ್ಯಕ್ಷತೆ ವಹಿಸಿದ್ದ ಬಿಇಸಿ ಕಾಲೇಜು ಪ್ರಾಚಾರ್ಯ ಡಾ ಅಶೋಕ ಕುಮಾರ ವಣಗೀರೆ, ಪ್ರತಿಷ್ಠಾನದ ನಿರ್ದೇಶಕ ಡಾ ಭೀಮಾಶಂಕರ ಬಿರಾದಾರ ಮಾತನಾಡಿದರು. ಬರಗೂರು ರಾಮಚಂದ್ರಪ್ಪ ಅವರು ಬರೆದ 'ಸೌಹಾರ್ದ ಭಾರತ' ಪುಸ್ತಕ ಓದುಗರಿಗೆ ನೀಡುವ ಮೂಲಕ ಸಮಾರಂಭ ಉದ್ಘಾಟಿಸಲಾಯಿತು. ಅಂತಾರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ನಟ ಆಕಾಂಕ್ಷ ಬರಗೂರು, ಉಪ ಪ್ರಾಚಾರ್ಯ ಡಾ ಅರುಣ್ ಕುಮಾರ್ ಯಲಾಲ್, ಪ್ರತಿಷ್ಠಾನದ ನಿರ್ದೇಶಕ ಡಾ ಶಿವಾಜಿ ಮೇತ್ರೆ, ಚಂದ್ರಕಾಂತ ಅಕ್ಕಣ್ಣ, ಸಂಜು ಕುಮಾರ ನಡುಕರ , ಅನೋಜಕುಮಾರ, ಶರಣಪ್ಪ ಗದಲೇಗಾಂವ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ರೆಜಿಸ್ಟಾರ್ ಪ್ರೇಮಸಾಗರ ಪಾಟೀಲ ಸ್ವಾಗತಿಸಿದರು. ಪ್ರತಿಷ್ಠಾನದ ಕಾರ್ಯದರ್ಶಿ ದೇವೇಂದ್ರ ಬರಗಾಲೆ ನಿರೂಪಿಸಿದರು. ಪ್ರತಿಷ್ಠಾನದ ಅಧ್ಯಕ್ಷ ಎಸ್.ಜಿ. ಹುಡೇದ ವಂದಿಸಿದರು.

# ಸುಭದ್ರ ಭಾರತಕ್ಕೆ ಸಂವಿಧಾನವೇ ಬುನಾದಿ

## ಹಾರಕೂಡ ಶ್ರೀ.



ಮಲ್ಲಮ್ಮನುಡಿವಾರ್ತೆ.ಬಸವಕಲ್ಯಾಣ: ಸುಭದ್ರ ಹಾಗೂ ಪ್ರಬುದ್ಧ ಭಾರತಕ್ಕೆ ನಮ್ಮ ದೇಶದ ಶ್ರೇಷ್ಠ ಸಂವಿಧಾನವೇ ಬುನಾದಿಯಾಗಿದ್ದು, ಸಂವಿಧಾನಿಕ ಮೌಲ್ಯಗಳು ಪ್ರತಿ ಭಾರತೀಯನ ದೈನಂದಿನ ಆಚರಣೆಯಾಗಬೇಕು ಎಂದು ಹಾರಕೂಡದ ಪೂಜ್ಯ ಶ್ರೀ ಡಾ. ಚನ್ನವೀರ ಶಿವಾಚಾರ್ಯರು ನುಡಿದರು.

ತಾಲೂಕಿನ ಹಾರಕೂಡ ಶ್ರೀ ಮಠದ ಶ್ರೀ ಗುರುಲಿಂಗ ಶಿವಾಚಾರ್ಯ ಉಚಿತ ವಸತಿ ಶಾಲೆಯಲ್ಲಿ 77ನೇಯ ಗಣರಾಜ್ಯೋತ್ಸವದಂದು ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಶ್ರೀಗಳು, ಭಾರತ ಜಗತ್ತಿನಲ್ಲಿಯೇ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾಗಿದ್ದು ಬಹುತ್ವ ನಮ್ಮ ದೇಶದ ವೈಶಿಷ್ಟವಾಗಿದೆ.

ಹಾಗಾಗಿ ಭಾರತೀಯರು ವೈವಿಧ್ಯತೆಯಲ್ಲಿ ಏಕತೆಯನ್ನು ಕಾಪಾಡಿಕೊಳ್ಳುವುದರ ಮೂಲಕ ಸಂವಿಧಾನ ಶಿಲ್ಪಿ ಭಾರತ ರತ್ನ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ರವರ ಕನಸು ನನಸಾಗುವ ನಿಟ್ಟಿನಲ್ಲಿ ಸಂವಿಧಾನದ ಮೂಲ ಆಶಯ ಈಡೇರುವಂತೆ ಪ್ರತಿ ಭಾರತೀಯ ಪೌರ ಪ್ರಜ್ಞೆಯಿಂದ ಹೊಣೆಗಾರಿಕೆ ನಿಭಾಯಿಸುವುದು ಅಗತ್ಯವಾಗಿದೆ.

ದೇಶದಲ್ಲಿ ಗಟ್ಟಿ ಪ್ರಜಾಪ್ರಭುತ್ವ ನೆಲೆಗೊಂಡು ಭಾರತ ವಿಶ್ವದ ಬಲಾಢ್ಯ ರಾಷ್ಟ್ರವಾಗಿ ಬೆಳೆಯಲು ತ್ಯಾಗ ಮತ್ತು ಸೇವೆಯ ಆದರ್ಶ ಹೊತ್ತು ಎಲ್ಲರೂ ಒಂದಾಗಿ ಪ್ರಾಮಾಣಿಕ ಪ್ರಯತ್ನ ಮಾಡುವಂತೆ ಕರೆಯಿತ್ತರು.

ಶಾಲೆ ಆಡಳಿತ ಅಧಿಕಾರಿ ಐ. ಜಿ. ಮಠಪತಿ, ಬಸವಣಪ್ಪ ಗಿಲ್ಕಿ, ವಿಜಯಕುಮಾರ ಸಂಗೊಳಗೆ, ಹಾರಕೂಡ ಗ್ರಾಮ ಪಂಚಾಯಿತಿ ಪಿಡಿಓ ಯೋಗೇಶ ಹಿರೇಮಠ, ಡಾ. ರಾಜಶೇಖರ ಮದರಿ, ಪಂಡಿತರಾವ ದೇಗಾಂವ, ಶಿವಶರಣಯ್ಯ ಕಂಬಳಿಮಠ, ನಾಗೇಶ ಮಹಾಜನ, ನಾಗಣ್ಣ ಪೀರಜೆ, ವೀರಯ್ಯ ಸ್ವಾಮಿ ಮೀನಹಾಬಳ, ನಾಗಣ್ಣ ಪಾಟೀಲ, ಮಾಧುರಾಯ ಕೆರಗೋಟೆ, ಮಹಾದೇವ ಡಾವರೆ.

ಪ್ರೌಢಶಾಲೆಯ ಮುಖ್ಯ ಶಿಕ್ಷಕರಾದ ಪಂಡಿತ ಪೂಜಾರಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು. ನಂತರ ಶ್ರೀ ಗುರುಲಿಂಗ ಶಿವಾಚಾರ್ಯ ಉಚಿತ ವಸತಿ ಶಾಲೆ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ವಿವಿಧ ಕ್ಷೇತ್ರಗಳ ಸಾಧಕರಿಗೆ ಸೇವಾ ರತ್ನ ಪ್ರಶಸ್ತಿ ಪ್ರಧಾನ

## ಪ್ರಿಯಾಂಕ್ ಖರ್ಗೆ



• ಮಲ್ಲಮ್ಮ ನುಡಿ ವಾರ್ತೆ,ಚಿತ್ತಾಪುರ:

ರಾಜ್ಯದ ವಿಧಾನಸಭೆಯಲ್ಲಿ ನಾನು ಸರ್ಕಾರಿ ನೌಕರರ ಧ್ವನಿಯಾಗಿದ್ದೇನೆ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ಮತ್ತು ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಹೇಳಿದರು.

ಪಟ್ಟಣದ ಬಸವೇಶ್ವರ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಕರ್ನಾಟಕ ರಾಜ್ಯ ಸರ್ಕಾರಿ/ ಅರೆ ಸರ್ಕಾರಿ ಪರಿಶಿಷ್ಟ ಜಾತಿ ಪರಿಶಿಷ್ಠ ಪಂಗಡ ನೌಕರರ ಸಂಘ ಚಿತ್ತಾಪುರ ಶಾಖೆಯ ಪದಾಧಿಕಾರಿಗಳ ಪದಗ್ರಹಣ ಹಾಗೂ ವಿವಿಧ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ "ಸೇವಾ ರತ್ನ ಪ್ರಶಸ್ತಿ" ಪ್ರಧಾನ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ನೌಕರರ ಸಮಸ್ಯೆಗಳಿಗೆ ಮತ್ತು ಬೇಡಿಕೆಗಳ ಬಗ್ಗೆ ನಮ್ಮ ಸರ್ಕಾರ ಸ್ಪಂದಿಸಿ ಈಡೇರಿಸಲು ಬದ್ಧವಾಗಿದೆ ಎಂದರು.ಜನಸಾಮಾನ್ಯರ ಸೇವೆಗೆ ನಾವು ಹಾಗೂ ಸರ್ಕಾರಿ ನೌಕರರು ಸದಾ ಸಿದ್ಧವಾಗಿರಬೇಕು. ಜನರ ಸ್ವಾಭಿಮಾನದ ಬದುಕು ಹಾಗೂ ಜೀವನಮಟ್ಟ ಸುಧಾರಣೆಗೆ ಸರ್ಕಾರದ ಪಂಚ ಗ್ಯಾರಂಟಿ ಯೋಜನೆಗಳು ಜನರಿಗೆ ತಲುಪಿಸುವ ಪ್ರಾಮಾಣಿಕ ಸೇವೆ ಸಲ್ಲಿಸಬೇಕು ಎಂದು ಹೇಳಿದರು. ಜಿಲ್ಲಾಧಿಕಾರಿ ಫೌಝಿಯಾ ತರನುಮ್, ಎಸ್ಪಿ ಅದ್ದೂರು ಶ್ರೀನಿವಾಸಲು, ಜಿಪಂ ಸಿಇಒ ಭಂವರಸಿಂಗ್ ಮೀನಾ, ತಹಶೀಲ್ದಾರ್ ನಾಗಯ್ಯ ಹಿರೇಮಠ, ಕೆಪಿಸಿಸಿ ಸದಸ್ಯ ನಾಗರಡ್ಡಿ ಪಾಟೀಲ ಕರದಾಳ, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಭೀಮಣ್ಣ ಸಾಲಿ, ಸರಕಾರಿ ನೌಕರರ ಸಂಘದ ಜಿಲ್ಲಾಧ್ಯಕ್ಷ ಬಸವರಾಜ ಬಳೂಂಡಗಿ, ಗಂಗಾ ಪರಮೇಶ್ವರಿ ಶಿಕ್ಷಣ ಸಂಸ್ಥೆ ಅಧ್ಯಕ್ಷೆ ಅಮರೇಶ್ವರಿ ಚಿಂಚನಸೂರ, ಮನೂರ್ ಆಸ್ಪತ್ರೆಯ ಸಂಸ್ಥಾಪಕ ಡಾ.ಫಾರೂಕ್, ಸಂಘದ ರಾಜ್ಯಾಧ್ಯಕ್ಷ ಮಹೇಶ ಸಿ. ಹುಬ್ಬಳಿ, ಗೌರವಾಧ್ಯಕ್ಷ ವಿಠಲ ಗೋಳಾ, ಕಾರ್ಯಾಧ್ಯಕ್ಷ ಜೈ ಭೀಮ್, ರಾಜ್ಯ ಪ್ರಧಾನ ಕರ್ಯಾದರ್ಶಿ ಸುಧಾಕರ ಎಸ್. ಜಡಗಿ, ರಾಜ್ಯ ಪರಿಷತ್ ಸದಸ್ಯ ಸಂತೋಷ ಸಲಗರ, ಬೆಂಗಳೂರು ನಗರ ಸಂಘದ ಅಧ್ಯಕ್ಷ ಶ್ರೀಧರ ಕೋಟ್ರೇ, ನಿವೃತ್ತ ನೌಕರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ರೋಣದ್, ವಿಜಯಲಕ್ಷ್ಮೀ, ಕವಿತಾ ದೇವಿಂದ್ರಪ್ಪ ದೊರಿ, ಶಾಂತಮಲ್ಲಪ್ಪ ಪಾಟೀಲ, ಗೌತಮಿ ಹಿರೊಳ್ಳಿ, ಸುನೀತಾ, ಜಯಶ್ರೀ, ಮಹೇಶ್ವರಿ, ಗೀತಾ ಸೇರಿದಂತೆ ಇತರರು ಇದ್ದರು.

ಪೂಜ್ಯ ವರಜ್ಯೋತಿ ಬಂತೇಜಿ ಅಣದೂರ ದಿವ್ಯಸಾನಿದ್ಯ ವಹಿಸಿದ್ದರು, ಸಂಘದ ತಾಲೂಕು ಅಧ್ಯಕ್ಷ ಅರುಣಕುಮಾರ ಎಸ್. ಚಿಂಚನಸೂರ ಅಧ್ಯಕ್ಷತೆ ವಹಿಸಿದ್ದರು. ಮನೋವಿಜ್ಞಾನಿ ಡಾ. ದಿಲೀಪಕುಮಾರ ನವಲೆ ಕಲಬುರಗಿ ಉಪನ್ಯಾಸ ನೀಡಿದರು. ಇದೇ ಸಂದರ್ಭದಲ್ಲಿ ವಿವಿಧ ಇಲಾಖೆಗಳ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದು ಸಾಧಕರನ್ನು ಸೇವಾ ರತ್ನ ಪ್ರಶಸ್ತಿ ಪ್ರದಾನ ಮಾಡಲಾಯಿತು ಹಾಗೂ ಎಸ್. ಎಸ್.ಎಲ್.ಸಿ./ ಪಿ.ಯು.ಸಿ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪುರಸ್ಕಾರ, ಡಾ. ಬಿ.ಆರ್. ಅಂಬೇಡ್ಕರ ರವರ ಕುರಿತು ಪ್ರಬಂಧ ಸ್ಪರ್ದೆ, ಭಾಷಣ ಹಾಗೂ ರಸಪ್ರಶ್ನೆ ಸ್ಪರ್ದೆಯಲ್ಲಿ ವಿಜೇತರಾದ ಕಾಲೇಜು ವಸತಿ ನಿಲಯದ ವಿದ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು.

ಸಿದ್ದಾರ್ಥ್ ಚಿಮ್ಮಾಇದಲಾಯಿ ಪ್ರಾರ್ಥಿಸಿದರು, ಶಿವಶರಣಪ್ಪ ಮಂತಾಳೆ ಪ್ರಾಸ್ತಾವಿಕವಾಗಿ ಮಾತನಾಡಿದರು, ಶರಣಪ್ಪ ಕಟ್ಟಿ ಸ್ವಾಗತಿಸಿದರು, ಶಿವಾನಂದ ನಾಲವಾರ ನಿರೂಪಿಸಿದರು, ಸದಾಶಿವ ದೊಡ್ಡಮನಿ ವಂದಿಸಿದರು. ಕಾರ್ಯಕ್ರಮದ ಮುನ್ನ ಪಟ್ಟಣದ ಡಾ.ಬಿ.ಆರ್. ಅಂಬೇಡ್ಕರ್ ವೃತ್ತದಿಂದ ಮರೆವಣಿಗೆ ಪ್ರಾರಂಭವಾಗಿ ಬಸವೇಶ್ವರ ಕಲ್ಯಾಣ ಮಂಟಪದವರೆಗೆ ನಡೆಯಿತು.

# ಸಿದ್ದರಾಮೇಶ್ವರ ಜಯಂತಿ ಹಾಗೂ ಶರಣ ಸಂಗಮ ಕಾರ್ಯಕ್ರಮ



• ಮಲ್ಲಮ್ಮ ನುಡಿ ವಾರ್ತೆ. ಬಸವಕಲ್ಯಾಣ :

ಇಲ್ಲಿನ ಬಸವ ಧರ್ಮ ಪೀಠದ ಬಸವ ಮಹಾನೆಯ ಆವರಣದಲ್ಲಿ ಸೋಮವಾರ ಶಿವಯೋಗಿ ಸಿದ್ದರಾಮೇಶ್ವರ ಜಯಂತಿ ಹಾಗೂ ಮಾಸಿಕ ಶರಣ ಸಂಗಮ ಕಾರ್ಯಕ್ರಮ ಜರುಗಿತು. ದಿವ್ಯ ಸಾನಿಧ್ಯ ಪೂಜ್ಯ ಶ್ರೀ ಮಹಾಜಗದ್ಗುರು ಡಾ.ಗಂಗಾದೇವಿ ಮಾತಾಜಿ ವಹಿಸಿ ಅವರು ಮಾತನಾಡಿ ಶಿವಯೋಗಿ ಸಿದ್ದರಾಮೇಶ್ವರ ಹಾಕಿ ಕೂಟ ಮಾರ್ಗದರ್ಶನದಲ್ಲಿ ನಾವು ಎಲ್ಲರೂ ನಡೆಯ ಬೇಕು ಎಂದು ಹೇಳಿದರು. ದಿವ್ಯ ಸಮ್ಮುಖ ಬೇಲೂರು ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಉದ್ಘಾಟಿಸಿ ಅವರು ಮಾತನಾಡಿದರು. ವಾಣಿಜ್ಯ ಇಲಾಖೆಯ ಆಯುಕ್ತರಾದ ಡಾ.ಮಹೇಶ ಪಾಟೀಲ ಮಾತನಾಡಿ ಪೂಜ್ಯ ಮಾತಾಜಿ ಅವರು ನಿರ್ಮಿಸಿದ 108 ಅಡಿಯ ಬಸವಣ್ಣನವರ ಪ್ರತಿಮೆಯಿಂದ ಬಸವಕಲ್ಯಾಣಕ್ಕೆ ಕಳೆ ಬಂದಿದೆ ಎಂದರು. ಉಪನ್ಯಾಸ ಪ್ರೊ.ಮೀನಾಕ್ಷಿ ಬಿರಾದಾರ ನೀಡಿ ಹನ್ನೆಡನೆಯ ಶತಮಾನದಲ್ಲಿ ವರ್ಣ, ವರ್ಗ, ಲಿಂಗ ಭೇದಗಳಿಲ್ಲದೆ ಶರಣರ ಚಿಂತನ ಮಂಥನದಿಂದ ಹೊರ ಹೊಮ್ಮಿದ ವಚನಗಳು ಮನುಕುಲಕ್ಕೆ ದಾರಿ ದೀಪವಾಗಿವೆ ಎಂದು ಹೇಳಿದರು. ಸೋಮಶೇಖರ್ ಗಾದಗಿ ಧ್ವಜಾರೋಹಣ ನೆರವೇರಿಸಿದರು.ಈ ವೇಳೆ ಪೂಜ್ಯ ಶ್ರೀ ಬಸವಯೋಗಿ ಸ್ವಾಮಿಜಿ, ಪೂಜ್ಯ ಶ್ರೀ ಮಹದೇಶ್ವರ ಸ್ವಾಮಿಜಿ, ಪೂಜ್ಯ ಶ್ರೀ ಜ್ಞಾನೇಶ್ವರಿ ಮಾತಾಜಿ, ಪೂಜ್ಯ ಶ್ರೀ ಲಾವಣ್ಯ ಮಾತಾಜಿ, ಹಾಗೂ ಅನೇಕ ಪೂಜ್ಯರು ಉಪಸ್ಥಿತರಿದ್ದರು. ಈ ಸಂದರ್ಭದಲ್ಲಿ ಬಸವರಾಜ ಬುಳ್ಳಾ, ಚನ್ನಪ್ಪ ಪ್ರತಾಪುರೆ, ರಾಜೇಂದ್ರ ಗಂದಗೆ, ರವಿಂದ್ರ ಕೋಳಕುರ, ಸುರೇಶ ಸ್ವಾಮಿ, ಸಾಹಿತಿ ಸಂಗಮೇಶ ಜವದೆ, ಆಕಾಶ ಖಂಡಾಳೆ, ದತ್ತಾತ್ರೇಯ ರಾಗಾ, ಶಿವರಾಜ ನರಶೆಟ್ಟಿ, ಜಯಶ್ರೀ ಪಾಟೀಲ, ರಾಜಶ್ರೀ ಖೂಬಾ, ಸೊನಾಲಿ ನೀಲಕಂಠೆ, ಸವಿತಾ ಪ್ರತಾಪುರೆ, ಹಲವಾರು ಶರಣ ಶರಣೆ–ಯರು ಉಪಸ್ಥಿತರಿದ್ದರು. ಅಂಬರೀಶ ಭೀಮಣ್ಣೆ ನಿರೂಪಿಸಿದರು. ನಿರ್ಮಲಾ ಶಿವಣಕರ್ ಸ್ವಾಗತಿಸಿದರು.

**IN THE COURT OF THE SENIOR CIVIL JUDGE & JMFC AT BASAVAKALYAN**
**Crl. Misc; NO. 982/2025**

**Petitioner:**

P1. Ravikumar s/o Tippanna P2. Naganna s/o Tippanna. P3. Narasappas/o Tippanna, p4. Shivraj s/o Tippanna, P5. Chitramma Do. Tippanna wo Tippanna, all are R.O Village Rampurwadi, tQ Basavakalyan Dist; Bidar.

**V/S**

**Respondent;**

the Tahasildar, Basavakalyan.

Claim; Issue of Death Certificate of the mother of petitioners Petition under sec. 13(3) of Birth and Death Registration Act. 1969

**PAPER PUBLICATION**

This is to inform to the public at large, the Father of the petitioner, by name " Tippanna s/o Beerappa, " Who was died on 04.08.2005, in his house at Village; Rampurwadi, tQ; Basavakalyan, Dist; Bidar leaving behind the petitionr No.1, as his son, The said " RAvikumar and anothers V/S The Tahsildar Basavakalyan has field the above case before the Hon'ble senior civil judge court at Basavakalyan for issuing direction to the respondent for issue of death certificate. If anybody got objection for the same, they are hereby resquested to come and appear before the Hon;ble court on or before 26.03.2026 at 11.00 AM.

**By order fo the court**
**Chief Ministerial officer**
**Date.14.01.2026**
**Senior civil judge & jmfc court**
**Basavakalyan**

**IN THE COURT OF THE SENIOR CIVIL JUDGE & JMFC AT BASAVAKALYAN**
**Crl. Misc; NO. 981/2025**

**Petitioner:**

P1. Ravikumar s/o Tippanna P2. Naganna s/o Tippanna. P3. Narasappas/o Tippanna, p4. Shivraj s/o Tippanna, P5. Chitramma Do. Tippanna wo Tippanna, all are R.O Village Rampurwadi, tQ Basavakalyan Dist; Bidar.

**V/S**

**Respondent;**

the Tahasildar, Basavakalyan.

Claim; Issue of Death Certificate of the mother of petitioners Petition under sec. 13(3) of Birth and Death Registration Act. 1969

**PAPER PUBLICATION**

This is to inform to the public at large, the Mother of the petitioner, by name " Ratnamma w.o Tippanna, " Who was died on 16.05.2023, in our house at Village; Rampurwadi, tQ; Basavakalyan, Dist; Bidar leaving behind the petitionr No.1, as her son, The said " RAvikumar and anothers V/S The Tahsildar Basavakalyan has field the above case before the Hon'ble senior civil judge court at Basavakalyan for issuing direction to the respondent for issue of death certificate. If anybody got objection for the same, they are hereby resquested to come and appear before the Hon;ble court on or before 26.03.2026 at 11.00 AM.

**By order fo the court**
**Chief Ministerial officer**
**Date.14.01.2026**
**Senior civil judge & jmfc court**
**Basavakalyan**

# ಜಾತಿಯ ವಿಷಬೀಜವನ್ನು ನಾವು ಸುಟ್ಟು ಹಾಕದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ



• ಮಲ್ಲಮ್ಮ ನುಡಿ ವಾರ್ತೆ,ಯಾದಗಿರಿ:

ಜಾತಿಯ ವಿಷಬೀಜವನ್ನು ನಾವು ಸುಟ್ಟು ಹಾಕದಿದ್ದರೆ ದೇಶಕ್ಕೆ ಉಳಿಗಾಲವಿಲ್ಲ ಎಂದು ನಗರ ವಸತಿ ರಹಿತರ ಆಶ್ರಯ ಕೇಂದ್ರದ ವ್ಯವಸ್ಥಾಪಕ ಬೀರಲಿಂಗಪ್ಪ ಕಿಲ್ಲನಕೇರಾ ಅವರು ಕಳವಳ ವ್ಯಕ್ತಪಡಿಸಿದರು. ನಗರಸಭೆ, ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ದೀನ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದ ಹಾಗೂ ಭಾರತಾಂಬೆ ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಸಂಯುಕ್ತ ಆಶ್ರಯದಲ್ಲಿನ ನಗರದಲ್ಲಿನ ನಗರ ವಸತಿ ರಹಿತರ ಆಶ್ರಯ ಕೇಂದ್ರದಲ್ಲಿ ನಡೆದ 77 ನೇ ಗಣರಾಜ್ಯೋತ್ಸವ ದಿನಾಚರಣೆಯಲ್ಲಿ ರಾಷ್ಟ್ರ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಜಾತಿ ಎಂಬ ಜ್ವಾಲಾಗ್ನಿಯು ದೇಶದಲ್ಲಿ ಸಹೋದರತ್ವ, ಸಮಾನತೆ ಮತ್ತು ದೇಶಭಕ್ತಿಯನ್ನೇ ಸುಟ್ಟು ಹಾಕುತ್ತಿದೆ. ಹೀಗಾಗಿ ನಾವು ಜಾತಿ, ಮತ, ಪಂಥ, ಪಂಗಡ, ಅಸ್ಪೃಶ್ಯತೆ ಯನ್ನು ಬಿಟ್ಟಾಗ ಮಾತ್ರ ನಮ್ಮ ದೇಶ ಮತ್ತು ಮುಂದಿನ ನಮ್ಮ ಪೀಳಿಗೆ ಉಳಿಯುತ್ತದೆ ಎಂದರು.

ಈ ಸಂದರ್ಭದಲ್ಲಿ ವಸತಿ ರಹಿತರ ಆಶ್ರಯ ಕೇಂದ್ರದ ಸಿಬ್ಬಂದಿ ಕೃಷ್ಣ, ದೇವಮ್ಮ, ಸಿದ್ರಾಮ್ ಕಿಣಿಕೇರಿ ಸೇರಿದಂತೆ ನಿರಾಶ್ರಿತರಾದ ಪಟೇಲ್ ಸಾಬ್, ರಾಘವೇಂದ್ರ, ಬಾಲಪ್ಪ, ರಾಮಚಂದ್ರ, ಬುದಿವಂತಿ, ಯಲ್ಲಪ್ಪ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ವಿಶ್ವಕ್ಕೆ ಮಾದರಿ ಸಂವಿಧಾನ ರಚಿಸಿದ ಅಂಬೇಡ್ಕರ್ : ಪ್ರಕಾಶ ಖಂಡ್ರೆ



• ಮಲ್ಲಮ್ಮ ನುಡಿ ವಾರ್ತೆ,ಭಾಲ್ಕಿ:

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಮಾನತೆಯ ಸಮಾಜ ಕಟ್ಟಲು ಅನುಕೂಲವಾಗುವಂತೆ ವಿಶ್ವದ ಪ್ರಮುಖ ರಾಷ್ಟ್ರಗಳ ಸಂವಿಧಾನಗಳ ಅಧ್ಯಯನ ಮಾಡಿ ವಿಶ್ವಕ್ಕೆ ಮಾದರಿಯಾದ ಸಂವಿಧಾನ ಬರೆದರು. ನಮ್ಮ ಸಂವಿಧಾನ ವಿಶ್ವದಲ್ಲೇ ಶ್ರೇಷ್ಠವಾಗಿದೆ ಎಂದು ಮಾಜಿ ಶಾಸಕ ಪ್ರಕಾಶ ಖಂಡ್ರೆ ಹೇಳಿದರು.

ತಾಲ್ಲೂಕಿನ ಕರಡ್ಯಾಳದ ಶ್ರೀ ಚನ್ನಬಸವೇಶ್ವರ ಗುರುಕುಲ ಶಿಕ್ಷಣ ಸಮುಚ್ಚಯದಲ್ಲಿ ಹಮ್ಮಿಕೊಂಡಿದ್ದ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

### ಶಾಲೆಗೆ ಬಹುಮಾನದ ಹಣ ನೀಡಿದ ವಿದ್ಯಾರ್ಥಿನಿ

ಕನ್ನಡ ಮಾಧ್ಯಮ ವಿಭಾಗದ 9ನೇ ತರಗತಿ ವಿದ್ಯಾರ್ಥಿನಿ ಸಂಸ್ಕೃತಿ ಶಿವಕಾಂತ ಈಚೆಗೆ ಜಿಲ್ಲಾ ಮಟ್ಟದಲ್ಲಿ ನಡೆದ ಭಾಷಣ ಸ್ಪರ್ಧೆಯಲ್ಲಿ ತನಗೆ ಬಹುಮಾನ ರೂಪದಲ್ಲಿ ದೊರೆತ 5 ಸಾವಿರ ರೂಪಾಯಿ ಹಣವನ್ನು ಸಂಸ್ಥೆಯ ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿಗೆ ನೀಡಿ ಸರ್ವರ ಮೆಚ್ಚುಗೆಗೆ ಪಾತ್ರಳಾದಳು.

ಬಸವಲಿಂಗ ಪಟ್ಟದ್ದೇವರು ಗುರುಕುಲ ಸ್ಥಾಪಿಸುವ ಮೂಲಕ ನಮ್ಮ ಭಾಗಕ್ಕೆ ಅದ್ಭುತ ಕೊಡುಗೆ ನೀಡಿದ್ದಾರೆ. ಈ ಶಿಕ್ಷಣ ಸಂಸ್ಥೆ ಬೆಳೆಸಲು ಅವರು ಸಾಕಷ್ಟು ಸಮಸ್ಯೆಗಳನ್ನು ಎದುರಿಸಿದ್ದಾರೆ. ಅವರ ಪರಿಶ್ರಮ ವರ್ಣನಾತೀತ ಎಂದು ಹೇಳಿದರು.

ವಿದ್ಯಾರ್ಥಿಗಳು ಗುಣಾತ್ಮಕ ಶಿಕ್ಷಣದೊಂದಿಗೆ ಉತ್ತಮ ಸಂಸ್ಕಾರ ಬೆಳೆಸಿಕೊಂಡು ದೇಶಕ್ಕೆ ತಮ್ಮದೇಯಾದ ಕೊಡುಗೆ ನೀಡಬೇಕು.

ನಮ್ಮ ದೇಶ ವಿಶ್ವದಲ್ಲಿ ಬಲಾಢ್ಯ ರಾಷ್ಟ್ರವಾಗಿಸಲು ಎಲ್ಲ ಯುವಕರು, ವಿದ್ಯಾರ್ಥಿಗಳು ದೇಶ ನಿರ್ಮಾಣ ಕಾರ್ಯದಲ್ಲಿ ನಿರಂತರವಾಗಿ ತೊಡಗಿಸಿಕೊಳ್ಳಬೇಕು ಎಂದು ಹೇಳಿದರು. ಮಕ್ಕಳ ಹಕ್ಕುಗಳ ರಕ್ಷಣಾ ಕಾರ್ಯದಲ್ಲಿ ಶಶಿಧರ ಕೋಸಂಬೆ ಅವರು ಮಾತುತ್ತಿರುವ ಕಾರ್ಯಗಳು ಅಭಿನಂದನಾರ್ಹ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.ಹಿರೇಮಠ ಸಂಸ್ಥಾನ ವಿದ್ಯಾಪೀಠದ ಕಾರ್ಯದರ್ಶಿ ಮಹಾಲಿಂಗ ಸ್ವಾಮೀಜಿ ಮಾತನಾಡಿ, ನಾವೆಲ್ಲರೂ ಸಂವಿಧಾನದ ಆಶಯಗಳಿಗೆ ತಕ್ಕಂತೆ ಬದುಕು ನಡೆಸಬೇಕು. ವಿದ್ಯಾರ್ಥಿಗಳು ಚೆನ್ನಾಗಿ ಅಭ್ಯಸಿಸಿ ರಾಷ್ಟ್ರದ ಸತ್ಪ್ರಜೆಗಳಾಗಬೇಕು ಎಂದು ಹೇಳಿದರು.ಲೋಕಾಯುಕ್ತ ವಿಭಾಗದ ಸರ್ಕಾರಿ ಅಭಿಯೋಜಕ ಕೇಶವ ಶ್ರೀಮಾಳೆ, ಸಿಆರ್ ಪಿ ಮಹಾದೇವ ಮಡಿವಾಳ ಮಾತನಾಡಿದರು.ಇದೇ ಸಂದರ್ಭದಲ್ಲಿ ವಿವಿಧ ವಿಭಾಗಗಳ ವಿದ್ಯಾರ್ಥಿಗಳು ಪ್ರಸ್ತುತಪಡಿಸಿದ ಸಾಂಸ್ಕೃತಿಕ ಕಾರ್ಯಕ್ರಮಗಳು ಸಭಿಕರ ಮನ ಸೆಳೆದವು. ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ್ ಕೋಸಂಬೆ, ವಿಶ್ವಹಿಂದೂ ಪರಿಷತ್ ರಾಷ್ಟ್ರೀಯ ಟ್ರಸ್ಟಿ ಜೈಕಿಶನ್ ಬಿಯಾನಿ, ಉದ್ಯಮಿ ಸೋಮನಾಥಪ್ಪ ಅಷ್ಟೂರೆ, ಆಡಳಿತಾಧಿಕಾರಿ ಮೋಹನರೆಡ್ಡಿ, ನಟ, ನಿರ್ದೇಶಕ ಬಿ.ಜೆ. ವಿಷ್ಣುಕಾಂತ, ವಿವಿಧ ವಿಭಾಗಗಳ ಮುಖ್ಯಸ್ಥರಾದ ಪಾಂಡುರಂಗ ಕುಂಬಾರ, ಕಿರಣ ಸಜ್ಜನಶೆಟ್ಟಿ, ಸುಧಾಕರ ಬಿರಾದಾರ, ಸಿದ್ರಾಮ ಗೊಗ್ಗಾ, ರಾಜು, ರಂಗಾರೆಡ್ಡಿ, ಶಶಿಕುಮಾರ, ವಿಜಯಲಕ್ಷ್ಮಿ, ಮಹೇಶ ಮಹಾರಾಜ್, ಮಹೇಶ ಕುಲಕರ್ಣಿ, ಪ್ರವೀಣ ಖಂಡಾಳೆ, ಶ್ರೀದೇವಿ ಕುಲಕರ್ಣಿ ಸೇರಿದಂತೆ ಇತರರು ಇದ್ದರು.

ಮಧುಕರ ಗಾಂವ್ಕರ್ ನಿರೂಪಿಸಿದರು.

# ವನಸಿರಿ ಪೌಂಡೇಷನ್ ನಿಂದ ಸಸಿ ನೆಡುವ ಕಾರ್ಯಕ್ರಮ



• **ಮಲ್ಲಮ್ಮನ ನುಡಿ ವಾರ್ತೆ ಮಸ್ಕಿ:**

ನಗರದ ವಿವಿಧ ದೇವಸ್ಥಾನಗಳ ಆವರಣದಲ್ಲಿ ವನಸಿರಿ ಪೌಂಡೇಷನ್ ಮಸ್ಕಿ ತಾಲೂಕು ಘಟಕ ಹಾಗೂ ಓಂ ಶಿವಂ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮಸ್ಕಿ ವತಿಯಿಂದ ಓಂ ಶಿವಂ ಸೌಹಾರ್ದ ಸಹಕಾರಿ ಸಂಘದ 3 ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ಹಾಗೂ ಗಣರಾಜ್ಯೋತ್ಸವ ಅಂಗವಾಗಿ ಬಿಲ್ವಪತ್ರಿ ಸಸಿಗಳನ್ನು ನೆಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.ನಂತರ ನೆಟ್ಟ ಸಸಿಗಳ ಸುತ್ತಲೂ ತಂತಿ ಜಾಲರಿ ಹಾಗೂ ಸಂಘದ ನಾಮ ಫಲಕ ಅಳವಡಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಓಂ ಶಿವಂ ಸೌಹಾರ್ದ ಸಹಕಾರಿ ಸಂಘದ ನಿರ್ದೇಶಕರಾದ ಮೌನೇಶ ನಾಯಕ ಮಾತನಾಡಿ ಓಂ ಶಿವಂ ಸೌಹಾರ್ದ ಸಹಕಾರಿ ಸಂಘ 3ನೇ ವರ್ಷದ ವಾರ್ಷಿಕೋತ್ಸವದ ಅಂಗವಾಗಿ ವಿಶಿಷ್ಟವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು,ನಗರದ ವಿವಿಧ ಧಾರ್ಮಿಕ ಸ್ಥಳಗಳಲ್ಲಿ(ಶ್ರೀ ಜಗದ್ಗುರು ವ ಮೌನೇಶ್ವರ,ವೀರಭದ್ರೇಶ್ವರ,ಬೆಟ್ಟದ ಮಲ್ಲಿಕಾರ್ಜುನ ದೇವಸ್ಥಾನ ಹಾಗೂ ಇನ್ನಿತರ ದೇವಸ್ಥಾನಗಳ ಆವರಣದಲ್ಲಿ) ಪವಿತ್ರವಾದ ಬಿಲ್ವಪತ್ರಿ ಸಸಿಗಳನ್ನು ನೆಡುವುದರ ಮೂಲಕ ಸಮಾಜಕ್ಕೆ ಪರಿಸರ ಜಾಗೃತಿ ಮೂಡಿಸುವ ಅಭಿಯಾನವನ್ನು ಕೈಗೊಂಡಿದ್ದು ನಮ್ಮ ಜೊತೆ ಸಹಕರಿಸಿದ ವನಸಿರಿ ಪೌಂಡೇಷನ್ ತಾಲೂಕ ಅಧ್ಯಕ್ಷರು ಹಾಗೂ ಸದಸ್ಯರುಗಳಿಗೆ ನಾವು ಅಭಿನಂದನೆಗಳನ್ನು ಸಲ್ಲಿಸುತ್ತೇವೆ. ಸಾರ್ವಜನಿಕರೂ ಕೂಡಾ ಸಸಿ ನೆಡುವಂತಹ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಸಿಗಳನ್ನು ಉಳಿಸಿ ಬೆಳಸಬೇಕಾಗಿದೆ.ಕೈಗಾರಿಕೆಗಳು ಹೆಚ್ಚಾಗಿ ಪರಿಸರ ನಾಶವಾಗುತ್ತಿದ್ದೂ, ನಮ್ಮೆಲ್ಲರಿಗೂ ಮುಂದಿನ ದಿನಗಳಲ್ಲಿ ಕಷ್ಟದ ಪರಿಸ್ಥಿತಿ ಬರುತ್ತದೆ.ನಾವೆಲ್ಲರೂ ಇಂದಿನ ಯುವಕರಿಗೆ ಪರಿಸರದ ಜಾಗೃತಿ ಮೂಡಿಸಬೇಕಾಗಿದೆ.ಹಸಿರೇ ಹುಸಿರು ಎನ್ನುವ ದ್ಯೇಯ ವಾಖ್ಯಾದ ಮೂಲಕ ನಮ್ಮ ಸಂಸ್ಥೆ ವತಿಯಿಂದ ಸಸಿ ನೆಡುವ ಕಾರ್ಯಕ್ರಮ ಹಮ್ಮಿಕೊಂಡಿದೆ.ಈ ಕಾರ್ಯಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದಗಳು ಎಂದು ತಿಳಿಸಿದರು.ನಂತರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಓಂ ಶಿವಂ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಅಮರೇಶ ಯಂಬಲದ ಮಾತನಾಡಿ ಓಂ ಶಿವಂ ಸೌಹಾರ್ದ ಸಹಕಾರಿ ಸಂಘ ನಿಯಮಿತ ಮಸ್ಕಿ ಇದರ 3 ನೇ ವಾರ್ಷಿಕೋತ್ಸವದ ಅಂಗವಾಗಿ ನಾವು ಮಸ್ಕಿ ನಗರದ ವಿವಿಧದೆ ಬಿಲ್ವ ಪತ್ರಿ ಸಸಿಗಳನ್ನು ನೆಡುತ್ತಿದ್ದೇವೆ. ನಮ್ಮ ಸಹಕರಿಯು ಯಶಸ್ವೀಯಾಗಿ 4ನೇ ವರ್ಷಕ್ಕೆ ದಾಪುಗಾಲು ಇಡುತ್ತಿದೆ.ಮುಂದಿನ ದಿನಗಳಲ್ಲಿ ಇನ್ನಷ್ಟು ಹೆಚ್ಚಿನ ಕಾರ್ಯ ನಿರ್ವಹಿಸೋಣ ಎಂದು ಎಲ್ಲಾ ಸಹಕಾರಿ ಸದಸ್ಯರಲ್ಲಿ ಮನವಿ ಮಾಡಿಕೊಡರು.

ಈ ಸಂಧರ್ಭದಲ್ಲಿ ಓಂ ಶಿವಂ ಸೌಹಾರ್ದ ಸಹಕಾರಿ ಸಂಘದ ಅಧ್ಯಕ್ಷರಾದ ಅಮರೇಶ ಯಂಬಲದ ಉಪಾಧ್ಯಕ್ಷರಾದ ಅಮರೇಶ ಬ್ಯಾಳಿ

ಮುಖ್ಯ ಕಾರ್ಯನಿರ್ವಾಹಕರು ವೀರೇಶ ವಿಶ್ವಕರ್ಮ,ವನಸಿರಿ ಪೌಂಡೇಷನ್ ಮಸ್ಕಿ ತಾಲೂಕ ಅಧ್ಯಕ್ಷ ರಾಜು ಪತ್ತಾರ ಬಳಗಾನೂರು, ರಾಜ್ಯ ಸಾಮಾಜಿಕ ಜಾಲತಾಣ ಅಧ್ಯಕ್ಷ ಚನ್ನಪ್ಪ ಕೆ ಹೊಸಹಳ್ಳಿ,ನಿರ್ದೇಶಕರಾದ ಮೌನೇಶ ನಾಯಕ,ಶಶಿಕಾಂತ ಹರಸೂರು,ಮಹಾಂತೇಶ ಮರಳದ,ಶರಣಬಸವ ಸೊಪ್ಪಿಮಠ,ಮಂಜುನಾಥ ಸಜ್ಜನ್,ಆನಂದ ಸಿಂಗ್ ದೇಶಮುಖ್,ನಾಗರಾಜ್ ಯಂಬಲದ,ಮತ್ತು ಸಹಕಾರಿ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# 77ನೇ ಗಣರಾಜ್ಯೋತ್ಸವದ ಸಂಭ್ರಮ ಭಾರತವು ವೇಗವಾಗಿ ಆರ್ಥಿಕವಾಗಿ ಬೆಳೆಯುವ ದೇಶವಾಗಿದೆ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸ್ಗೂರ:**

ಭಾರತವು ವೇಗವಾಗಿ ಆರ್ಥಿಕವಾಗಿ ಬೆಳೆಯುವ ದೇಶವಾಗಿದೆ ಇದರ ಹೇಳಿಗೆ ಸಹಿಸದ ಅಮೇರಿಕಾ ಆರ್ಥಿಕವಾಗಿ ಕುಗ್ಗಿಸಲು ಯತ್ನಿಸುತ್ತಿದೆ ಅದಕ್ಕೆ ತಕ್ಕ ಉತ್ತರ ನೀಡುತ್ತ ಭಾರತವು ಇಂದು ಆರ್ಥಿಕವಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ 4ನೇ ಸ್ಥಾನದಲ್ಲಿದೆ ಎಂದು ಸಹಾಯಕ ಆಯುಕ್ತ ಬಸವಣಪ್ಪ ಕಲಶೆಟ್ಟಿ ಹೇಳಿದರು.

ತಾಲೂಕು ಕ್ರೀಡಾಂಗಣದಲ್ಲಿ ನಡೆದ ಗಣರಾಜ್ಯೋತ್ಸವದ ಧ್ವಜಾರೋಹಣ ಮಾಡಿ ಮಾತನಾಡಿದ ಅವರು ಸರದಾರ ವಲ್ಲಭಭಾಯಿ ಪಟೇಲರು ಏಕತೆಗಾಗಿ ಶ್ರಮಿಸಿದ ದಿಮಂತ ನಾಯಕರು,ಬಂಕಿಂ ಚಂದ್ರ ಚಟರ್ಜಿ ಅವರು ಒಂದೆ ಮಾತರಂ ರಚಿಸಿ ಇಂದಿಗೆ 150 ವರ್ಷದ ಪೂರೈಸಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಎಲ್ಲಾ ಮಹನಿಹರಿಗೆ ನಮಿಸುತ್ತ ಸಂವಿಧಾನ ರಚಿಸಿದ ಡಾ.ಬಿ.ಆರ್. ಅಂಬೇಡ್ಕರ್ ಅವರನ್ನು ಸ್ಮರಿಸಿದರು. ಭಾರತವು ವೇಗವಾಗಿ ಆರ್ಥಿಕವಾಗಿ ಬೆಳೆಯುವ ದೇಶವಾಗಿದೆ ಇದರ ಹೇಳಿಗೆ



ಸಹಿಸದ ಅಮೇರಿಕಾ ಆರ್ಥಿಕವಾಗಿ ಕುಗ್ಗಿಸಲು ಯತ್ನಿಸುತ್ತಿದೆ ಅದಕ್ಕೆ ತಕ್ಕ ಉತ್ತರ ನೀಡುತ್ತ ಭಾರತವು ಇಂದು ಆರ್ಥಿಕವಾಗಿ ಅಂತರಾಷ್ಟ್ರೀಯ ಮಟ್ಟದಲ್ಲಿ 4ನೇ ಸ್ಥಾನದಲ್ಲಿದೆ ಎಲ್ಲರೂ ಆರ್ಥಿಕವಾಗಿ ಸದೃಡರಾಗಬೇಕು ಎಂದು ಹೇಳಿದರು.

ಲಿಂಗಸ್ಗೂರ ತಾಲ್ಲೂಕು ಹತ್ತನೇಯ ತರಗತಿಯಲ್ಲಿ ಉತ್ತಮ ಅಂಕಗಳಿದ. ವಿಧ್ಯಾರ್ಥಿಗಳಿಗೆ ಸನ್ಮಾನಿಸಲಾಯಿತು ಹಾಗೆ ಶಿಕ್ಷಕರು ಕ್ರೀಡೆಯಲ್ಲಿ ಸಾಧನೆ ಮಾಡಿದ ಶಿಕ್ಷಕರಿಗು ಸನ್ಮಾನ ಮಾಡಲಾಯಿತು.

ಅಧ್ಯಕ್ಷತೆವಹಿಸಿದಅಧ್ಯಕ್ಷರು ಸ್ಥಳೀಯ ಶಾಸಕರು ಮಾನಪ್ಪಡಿ ವಜ್ಜಲ್ ಅವರು ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಎಲ್ಲಾ ಹೋರಾಟಗಾರ ಫಲವಾಗಿ ಭಾರತವು ಸ್ವತಂತ್ರವಾಯಿತು. ಭಾರತೀಯರಾದ ನಮಗೆ ಜನವರಿ 26 ರಾಷ್ಟ್ರದ ಅಸ್ಮಿತೆ ಮತ್ತು ಸಾರ್ವಭೌಮತ್ವದ ಸಂಕೇತ. 1947ರಲ್ಲಿ ನಾವು ಬ್ರಿಟಿಷರಿಂದ ಸ್ವಾತಂತ್ರ್ಯ ಪಡೆದರೂ, ನಮಗೆ ನಮ್ಮದೇ ಆದ ಲಿಖಿತ ಸಂವಿಧಾನ ಮತ್ತು ಕಾನೂನುಗಳು ಜಾರಿಗೆ ಬಂದಿದ್ದು 1950ರ ಜನವರಿ 26 ರಂದು. ಅಂದಿನಿಂದ ಭಾರತವು ಗಣರಾಜ್ಯ ಎಂದು ಘೋಷಿಸಲ್ಪಟ್ಟಿತು. ಈ ದಿನವನ್ನು ನಾವು ದೇಶಾದ್ಯಂತ ಅತ್ಯಂತ ಸಂಭ್ರಮ ಮತ್ತು ದೇಶಭಕ್ತಿಯಿಂದ ಗಣರಾಜ್ಯೋತ್ಸವ ದಿನವನ್ನಾಗಿ ಆಚರಿಸುತ್ತೇವೆ.

ಭಾರತದ ಸಂವಿಧಾನವು ವಿಶ್ವದ ಅತಿದೊಡ್ಡ ಲಿಖಿತ ಸಂವಿಧಾನವಾಗಿದೆ. ಡಾ. ಬಿ.ಆರ್. ಅಂಬೇಡ್ಕರ್ ಅವರ ನೇತೃತ್ವದ ಕರಡು ಸಮಿತಿಯು ಎರಡ್ಮೂರು ವರ್ಷಗಳ ಕಾಲ ಅವಿರತ ಶ್ರಮವಹಿಸಿ ಈ ಸಂವಿಧಾನವನ್ನು ರಚಿಸಿತು. ನಮ್ಮ ಸಂವಿಧಾನವು ಪ್ರತಿಯೊಬ್ಬ ಭಾರತೀಯನಿಗೂ ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯವನ್ನು ಒದಗಿಸುತ್ತದೆ. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಈ ದಿನದಂದು, ಸ್ವಾತಂತ್ರ್ಯ ತಂದು ಕೊಡಲು ತ್ಯಾಗ, ಬಲಿದಾನ ಮಾಡಿದ ನಮ್ಮ ಹೋರಾಟಗಾರರನ್ನು ಈ ದಿನ ಸ್ಮರಿಸಲೇಬೇಕು. ಹಾಗೆ ದೇಶಕ್ಕಾಗಿ ಹಗಲಿರುಳು ದೇಶ ಕಯುವ ಮೂರು ವಿಭಾಗದ ಯೋಧರಿಗೆ ಸ್ಮರಿಸಿದರು.

ಇಂದು ರಾಜ್ಯ ಸರಕಾರದ ಪಂಚ ಯೋಜನೆ ನೀಡಿದ್ದು ಇದರಿಂದ ಆರ್ಥಿಕವಾಗಿ ದಿವಾಳಿಯಾಗಿದೆ ಮೋದಿ ಅಂತ

ಉತ್ತಮ ಆಡಳಿತ ನಿಡುತಿ–ದ್ದಾರೆ ಇಂದು ಬೆಳೆಯುತ್ತಿರು ಭಾರತವು ನೋಡಿದರೆ 2047 ಆರ್ಥಿಕತೆಯಲ್ಲಿ ಪ್ರಥಮ ಸ್ಥಾನ ಪಡೆಯಲಿದೆ ಎಂದರುಕನ್ಯಾಶಾಲೆ ರೈತಗೀತೆ ಆಡಿದರೆ,ಶಾಸಕರ ಶಾಲಾ ವಿದ್ಯಾರ್ಥಿಗಳು ರಾಷ್ಟ್ರಗೀತೆ ಹಾಗೂ ನಾಡಗೀತೆ ಆಡಿದರ.

ಈ ಸಂದರ್ಭದಲ್ಲಿ ಕು.ಸತ್ಯಮ್ಮ ತಹಶಿಲ್ದಾರರು,ದತ್ತಾತ್ರಾಯ ಕಾರ್ನಾಡ ಪೋಲಿಸ್ ಉಪಾಧಿಕ್ಷರು,ಉಮೇಶ ಕಾರ್ಯನಿರ್ವಾಹಕಅಧಿಕಾರಿಗಳು,ಪಾಮಯ್ಯ ಮುರಾರಿ,ಭೂಪನಗೌಡ ಪಾಟೀಲ, ಅಮರೇಶ ದೊಡ್ಡಪ್ಪ,ಬಸನಗೌಡ ಸಂಗಣ್ಣ, ವೆಂಕಟೇಶ ಆರ್ ಗುತ್ತೆದಾ,ಶಶಿಧರ ಪಾಟೀಲ,ಕ್ಷೇತ್ರ ಶಿಕ್ಷಣ ಅಧಿಕಾರಿಗಳು ಸುಜಾತ ಹೂನೂರ,ಅಬಕಾರಿ ಇಲಾಖೆ ಅಧಿಕಾರಿ ಲಕ್ಷ್ಮೀ,ಹಾಜಿಬಾಬು ಸರಕಾರಿ ನೌಕರರ ಸಂಘ ಅಧ್ಯಕ್ಷರು ಸೇರಿದಂತೆ ಉಪಸ್ಥಿತರಿದ್ದರು.

# ರಥಸಪ್ತಮಿಯ ದಿನದ ಅಂಗವಾಗಿ ಉಚಿತ ಯೋಗ ಶಿಬಿರ ಕಾರ್ಯಕ್ರಮ



• **ಮಲ್ಲಮ್ಮನ ನುಡಿ ವಾರ್ತೆ ಮಸ್ಕಿ:**

ಯೋಗ ಸನ್ನಿಧಿ ಜ್ಞಾನ ವಿದ್ಯಾಪೀಠ ಟ್ರಸ್ಟ್( ರಿ )ಮಾನ್ವಿರವರ ವತಿಯಿಂದ ಪಟ್ಟಣದ ಭ್ರಮರಾಂಬ ಮಲ್ಲಿಕಾರ್ಜುನ ದೇವಾಲಯ ಆವರಣದಲ್ಲಿ ಯೋಗ ಗುರು ಅನ್ನದಾನಯ್ಯ ಇವರಿಂದ ರಥಸಪ್ತಮಿಯ ದಿನದ ಅಂಗವಾಗಿ ಉಚಿತ ಯೋಗ ಶಿಬಿರ ಕಾರ್ಯಕ್ರಮ ಜರುಗಿತು.

ಈ ಸಂದರ್ಭದಲ್ಲಿ, ಯೋಗ ಗುರು ಅನ್ನದಾನಯ್ಯ ಸ್ವಾಮಿ ರವರು ಮಾತನಾಡಿ ರಥಸಪ್ತಮಿಯು ಸೂರ್ಯ ದೇವರ ಜನ್ಮದಿನವಾಗಿದ್ದು ಇದನ್ನು ಮನುಕುಲಕ್ಕೆ ಶಕ್ತಿ ಮತ್ತು ಆರೋಗ್ಯವನ್ನು ನೀಡುವ ಸೂರ್ಯನಿಗೆ ಕೃತಜ್ಞತೆ ಸಲ್ಲಿಸಲು ದಿನವಾಗಿ ಆಚರಿಸಲಾಗುತ್ತದೆ.ಈ ದಿನ ಸೂರ್ಯ ದೇವರು ಏಳು ಕುದುರೆಗಳಿರುವ ರಥವನ್ನು ಏರಿ ಜಗತ್ತಿಗೆ ಬೆಳಕನ್ನು ನೀಡಲು ಬಂದ ದಿನವೆಂದು ನಂಬಲಾಗಿದೆ. ಆತನನ್ನು ಗೌರವಿಸಲು ಸೂರ್ಯ ನಮಸ್ಕಾರ ಮಾಡಲಾಗುತ್ತದೆ.

108 ಸೂರ್ಯ ನಮಸ್ಕಾರಗಳನ್ನು ಮಾಡುವುದರಿಂದ ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಲು ಮತ್ತು ಮನಸ್ಸನ್ನು ಶಾಂತಗೊಳಿಸಲು

ರಥಸಪ್ತಮಿಯ ಈ ಸಮಯವು ಚಳಿಗಾಲದಿಂದ ವಸಂತ ಋತುವಿನ ಕಡೆಗೆ ಸೂರ್ಯನ ಪಥವು ಬದಲಾವಣೆಯನ್ನು ಸೂಚಿಸುತ್ತದೆ. ಇದು ಕೃಷಿ ಚಟುವಟಿಕೆಗಳಿಗೆ ಹೊಸ ಉತ್ಸಾಹವನ್ನು ನೀಡುತ್ತದೆ. ಈ ದಿನ ಸೂರ್ಯನ ಕಿರಣಗಳಿಗೆ ಮೈಯೊಡ್ಡಿ ನಮಸ್ಕಾರ ಮಾಡುವುದರಿಂದ ದೈಹಿಕ ಮತ್ತು ಮಾನಸಿಕ ಆರೋಗ್ಯ ವೃದ್ಧಿಯಾಗುತ್ತದೆ, ದೇಹದ ತೂಕ ಇಳಿಕೆ, ರಕ್ತ ಪರಿಚಲನೆ ಸುಧಾರಣೆ, ಹೃದಯದ ಆರೋಗ್ಯ ವೃದ್ಧಿ, ಒತ್ತಡ ನಿವಾರಣೆ ಮಾಡುತ್ತದೆ, ಇದು ದೇಹದ ಸ್ನಾಯುಗಳನ್ನು ಬಲಪಡಿಸಿ, ನಮ್ಯತೆ ಹೆಚ್ಚಿಸಿ, ಜೀರ್ಣಕ್ರಿಯೆಯನ್ನು ಸುಧಾರಿಸಿ, ಮತ್ತು ಶ್ವಾಸಕೋಶದ ಆರೋಗ್ಯವನ್ನು ಉತ್ತಮಗೊಳಿಸುತ್ತದೆ. ಥೈರಾಯ್ಡ್ ಮತ್ತು ಇತರ ಅಂತಃಸ್ರಾವಕ ಗ್ರಂಥಿಗಳನ್ನು ಉತ್ತೇಜಿಸುವ ಮೂಲಕ ಹಾರ್ಮೋನುಗಳ ಮಟ್ಟವನ್ನು ಸ್ಥಿರಗೊಳಿಸಲು ಸಹಾಯ ಮಾಡುತ್ತದೆ. ಈ ದಿನ ನದಿಗಳಲ್ಲಿ ಅಥವಾ ಮನೆಯಲ್ಲಿ ತಲೆಯ ಮೇಲೆ ಎಕ್ಕದೆಲೆಗಳನ್ನು ಇಟ್ಟುಕೊಂಡು ಸ್ನಾನ ಮಾಡಿ ಸೂರ್ಯ ನಮಸ್ಕಾರ ಮಾಡುವುದರಿಂದ ಕೀಲುನೋವುಗಳು ನಿವಾರಣೆ ಯಾಗುತ್ತವೆ, ಸೂರ್ಯ ನಮಸ್ಕಾರವು ಕೇವಲ ಒಂದು ಯೋಗಾಸನವಲ್ಲ, ಅದು ದೈಹಿಕ ಶಕ್ತಿ ಮತ್ತು ಆಧ್ಯಾತ್ಮಿಕ ಜಾಗೃತಿಯನ್ನು ಸಮತೋಲನಗೊಳಿಸುವ ಪವಿತ್ರ ಪ್ರಕ್ರಿಯೆಯಾಗಿದೆ. ಸೂರ್ಯನು ಹೇಗೆ ತನ್ನ ಹಳೆಯ ರಥವನ್ನು ಬಿಟ್ಟು ಹೊಸ ರಥವನ್ನು ಏರುತ್ತಾನೋ ಹಾಗೆ ನಾವು ಕೂಡ ನಮ್ಮ ಹಳೆಯ ಆಲೋಚನೆ, ವಿಚಾರಗಳು, ಕೋಪತಾಪಗಳನ್ನು ಬಿಟ್ಟು ಹೊಸ ಆಲೋಚನೆಗಳನ್ನು ಇಟ್ಟುಕೊಂಡು ಹೊಸ ಮಾರ್ಗದಲ್ಲಿ ಪ್ರಯಾಣ ಮಾಡಬೇಕು ಎಂದು ಹೇಳಿದರು. ಈ ವೇಳೆ, ಸುಕುಮುನಿಯಪ್ಪಬೋವಿ,ಮಲ್ಲಿಕಾರ್ಜುನ ನಾಗರಬೆಂಚಿ,ಚಂದ್ರಕಲಾ,ಮಲ್ಲಿಕಾರ್ಜುನ ಕಂದಗಲ್ಲ,ಸೇರಿದಂತೆ ಇತರರು ಇದ್ದರೂ.

# ಮೂಲಭೂತ ಸೌಕರ್ಯ ಒದಗಿಸಲು ಆಗ್ರಹ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ತಾಲ್ಲೂಕಿನ ಚಿಕ್ಕಸೂಗೂರು ಗ್ರಾಮ ಪಂಚಾಯತಿ ಪಕ್ಕದಲ್ಲಿಯೇ ಇರುವ ನಿವೇಶನಗಳ ಸ್ಥಳದಲ್ಲಿಯೇ ನಿರ್ಮಿಸಲು ಉದ್ದೇಶಿರುವ ಉದ್ಯಾನವ ತಡೆಹಿಡಿದು ಚಿಕ್ಕಸೂಗೂರು ಗ್ರಾಮದ ಬಹುಮುಖ್ಯ ಮೂಲಭೂತ ಸೌಕರ್ಯ ಕೈಗೊಳ್ಳಬೇಕು ಎಂದು ದಲಿತ ಸೇನೆ ಮುಖಂಡರು ಅಪರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಒತ್ತಾಯಿಸಿದೆ.



ತಾಲ್ಲೂಕಿನ ಚಿಕ್ಕಸೂಗೂರು ಗ್ರಾಮ ಪಂಚಾಯತಿಯ ಚಿಕ್ಕಸೂಗೂರು ಗ್ರಾಮಕ್ಕೆ ಸಂಬಂಧಪಟ್ಟಂತೆ ಹಲವಾರು ಮೂಲಭೂತ ಸೌಕರ್ಯಗಳ ಕೊರತೆ ಇದ್ದು, ಅದರಲ್ಲಿ ಮುಖ್ಯವಾಗಿ ಪರಿಶಿಷ್ಟ ಜಾತಿಯ ಬಡಾವಣೆಗೆ ಸಂಬಂಧಪಟ್ಟಂತೆ ಸುರ್ವಣ ಕಾಲೋನಿಯಿಂದ ಪ.ಜಾತಿ ಬಡಾವಣೆಯ ಮೂಲಕ ಸ್ಮಶಾನದ ರಸ್ತೆಯವರೆಗೆ ಇರುವ ರಾಜ್ ಕಾಲುವೆ ನಿರ್ಮಾಣ, ಸಂಗಮೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ಪರಿಶಿಷ್ಟ ಜಾತಿಯ ಏರೀಯಾದ ಚರಂಡಿ ನಿರ್ಮಾಣ ಹಾಗೂ ಪ.ಜಾತಿಯ ಜನತಾ ಕಾಲೋನಿಯಿಂದ ಹೈದರಬಾದ ಮುಖ್ಯರಸ್ತೆಗೆ ಮೂರು ಸಂಪರ್ಕ ರಸ್ತೆಗಳ ನಿರ್ಮಾಣ ಹಾಗೂ ಶ್ರೀ ಆಂಜಿನಯ್ಯ ದೇವಸ್ಥಾನದ ಪಕ್ಕದಲ್ಲಿ ಹಾದೂ ಹೋಗುವ ರಾಜ್ ಕಾಲುವೆಯ ಹೊಸ ನಿರ್ಮಾಣ ಮತ್ತು ವಡೂರು ಕ್ರಾಸ್‌ನಲ್ಲಿರುವ ಅತೀಕ್ರಮಣಗೊಂಡಿರುವ ಅನಧಿಕೃತ ಶೆಡ್‌ಗಳನ್ನು ತೆರವುಗೊಳಿಸಿ, ಸದರಿ ಸ್ಥಳದಲ್ಲಿ ಸಾರ್ವಜನಿಕರ ಹಾಗೂ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಹೈಟೆಕ್ ಶೌಚಾಲಯ ಹಾಗೂ ಉತ್ತಮ ಬಸ್ ನಿಲ್ದಾಣ ಕಟ್ಟಡ ನಿರ್ಮಾಣ ಅತ್ಯಂತ ಅವಶ್ಯಕ ಮೂಲಭೂತ ಸಮಸ್ಯೆಗಳಾಗಿವೆ.

ಇಷ್ಟೇಲ್ಲಾ ಸಮಸ್ಯೆಗಳು ಇದ್ದರೂ ಕೂಡ ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸರೋಜಮ್ಮ ತಮ್ಮ ಮೇಲಾಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿ, ನಿವೇಶನಗಳಲ್ಲಿ ಮೇಲಾಧಿಕಾರಿಗಳ ಆದೇಶ ಇದೆ ಎಂದು ಹೇಳಿ ಉದ್ಯಾನ ನಿರ್ಮಿಸಲು ಉದ್ದೇಶಿಸಿರುವುದು ಕಾನೂನು ಬಾಹೀರವಾಗಿದೆ ಎಂದು ದೂರಿದರು. ಆದುದರಿಂದ ಮೇಲೆ ತೋರಿಸಿದ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿ, ಸದರಿ ಉದ್ಯಾನವನದ ಯೋಜನೆಯನ್ನು ಕೈಬಿಟ್ಟು ಮೇಲೆ ತೋರಿಸಿದ ಮೂಲಭೂತ ಸೌಕರ್ಯ ಒದಗಿಸಬೇಕು.ಸದರಿ ಉದ್ಯಾನವನದ ಹಣಕಾಸನ್ನು ಮತ್ತು ಚಿಕ್ಕಸೂಗೂರು ಪಂಚಾಯತಿಗೆ ಈಗಾಗಲೇ ಮಂಜೂರು ಆಗಿರುವ ಸುಮಾರು ನಾಲ್ಕು ಕೋಟಿ ಅರವತ್ತು ಲಕ್ಷ ರೂಪಾಯಿಗಳ ಅನುದಾನದಲ್ಲಿ ಸದರಿ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ನಿರ್ವಹಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ಆದೇಶ ನೀಡಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಮಾರುತಿ ಚಿಕ್ಕಸೂಗೂರು, ಸುರೇಶಬಾಬು, ಕೃಷ್ಣಮಾರ್ಚಲ, ಬಾಬು ಸೇರಿದಂತೆ ಉಪಸ್ಥಿತರಿದ್ದರು.

# 77ನೇ ಗಣರಾಜ್ಯೋತ್ಸವದ ಧ್ವಜಾರೋಹಣ



• **ಮಲ್ಲಮ್ಮ ನುಡಿ ವಾರ್ತೆ ಬೀದರ್:**

ಬೀದರ ತಾಲೂಕಿನ ಸಂಗೋಳಗಿ ಗ್ರಾಮ ಪಂಚಾಯತನಲ್ಲಿ 77ನೇ ಗಣರಾಜ್ಯೋತ್ಸವಬವನ್ನು ಗ್ರಾಮ ಪಂಚಾಯತ್ ಅಧ್ಯಕ್ಷರಾದ ಶಾಂತವೀರ ಹಜ್ಜರಗಿ ಅವರು ಧ್ವಜಾರೋಹಣ ನೆರವೇರಿಸಿದರು,

ಭಾರತದಲ್ಲಿ ಪ್ರತೀ ವರ್ಷ ಜನವರಿ 26ರಂದು ಆಚರಿಸುವ ರಾಷ್ಟ್ರೋತ್ಸವವನ್ನು 1950ರ ಜನವರಿ 26ರಂದು ಭಾರತದ ಸಂವಿಧಾನ ಜಾರಿಗೆ ಬಂದು, ಭಾರತ ಗಣರಾಜ್ಯವಾಗಿ ಘೋಷಿತವಾದ ದಿನವಾದ್ದರಿಂದ ಈ ದಿನವನ್ನು ಗಣರಾಜ್ಯೋತ್ಸವವೆಂದು ಆಚರಿಸುತ್ತಾರೆ,

ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿಯಾದ ಪೂಜಾಶ್ರೀ ಬಿರಾದಾರ,ಕಾರ್ಯದರ್ಶಿಯಾದ ಕವಿತಾ, ಸಂತೋಷ ಭೋಸ್ಲೆ,ಶಿವರಾಜ್,ಭೀಮಶಂಕರ ಮಡಿವಾಳ, ಗ್ರಾಮದ ಮುಖಂಡರಾದ ಅಶೋಕ್ ಪಾಟೀಲ್, ಚಂದ್ರಕಾಂತ್ ಜಮಾದಾರ,ಚಂದ್ರಕಾಂತ್ ಪೊಲೀಸ್ ಪಾಟೀಲ್, ಬಾಬುರಾವ್ ಮಳೆಗಾರ, ಭೀಮಣ್ಣಗುತ್ತಿ ,ಅನೇಕ ಗ್ರಾಮ ಪಂಚಾಯತ್ ಸದಸ್ಯರು,ಸಿಬ್ಬಂದಿಗಳು, ಗ್ರಾಮಸ್ಥರು ಉಪಸ್ಥಿತಿ ಇದ್ದರು,

# 77ನೇ ಗಣರಾಜ್ಯೋತ್ಸವ ಆಚರಣೆ

• **ಮಲ್ಲಮ್ಮ ನುಡಿ ವಾರ್ತೆ ಲಿಂಗಸೂರು:**



ಕರ್ನಾಟಕ ಕಾರ್ಯ ನಿರ್ವಹಿತ ಪತ್ರಕರ್ತ ಸಂಘದ ಲಿಂಗಸೂರು ತಾಲೂಕು ಘಟಕದ ವತಿಯಿಂದ 77ನೇ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು.

ಕಾರ್ಯಕ್ರಮದಲ್ಲಿ ನಿವೃತ್ತ ದೈಹಿಕ ಶಿಕ್ಷಕಿ ಗಂಗಮ್ಮ ಅವರು ರಾಷ್ಟ್ರಧ್ವಜಾರೋಹಣವನ್ನು ನೆರವೇರಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ತಾಲೂಕು ಅಧ್ಯಕ್ಷರಾದ ಶಿವರಾಜ್ ಕೆಂಭಾವಿ ವಹಿಸಿದ್ದರು. ಅವರು ಮಾತನಾಡಿ, ಭಾರತೀಯ ಸಂವಿಧಾನದ ಮೌಲ್ಯಗಳು, ಪ್ರಜಾಪ್ರಭುತ್ವದ ಮಹತ್ವ ಹಾಗೂ ಸಮಾಜ ನಿರ್ಮಾಣದಲ್ಲಿ ಪತ್ರಕರ್ತರ ಹೊಣೆಗಾರಿಕೆ ಕುರಿತು ವಿವರಿಸಿದರು.

ಇದೇ ಸಂದರ್ಭದಲ್ಲಿ ಸಂಘದ ಉಪಾಧ್ಯಕ್ಷರಾದ ರಾಘವೇಂದ್ರ ಭಜಂತ್ರಿ, ಪ್ರಧಾನ ಕಾರ್ಯದರ್ಶಿ ಗಂಗಾಧರ್ ನಾಯಕ್ ಗುಂತ್ಗೋಳ್ ಹಾಗೂ ಜಿಲ್ಲಾ ಸದಸ್ಯರಾದ ಸಿದ್ದನ್ ಗೌಡ ಪಾಟೀಲ್ ಅವರು ಮಾತನಾಡಿ, ಪತ್ರಿಕೋದ್ಯಮದ ಮೌಲ್ಯಗಳನ್ನು ಕಾಪಾಡುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದಲ್ಲಿ ನಾಗರಾಜ್ ಗೊರೆಬಾಳ್, ಅಂಬ್ರಯ್ಯ ಘಂಟಿ, ಹನುಮಂತ್ ನಾಯಕ್, ಮುಸ್ತಫ, ಅಂಬರೀಷ್ ಕಲ್ಲೂರ್, ರಾಜೇಶ್ ಮಾಣಿಕ್, ಬಸವರಾಜ್ ನಾಯಕ್, ಲಕ್ಷ್ಮಣ ಬಾರಿಕೇರ್, ಹನುಮಂತ ಕನ್ನಾಳ್, ಗೌತಮ್ ಕುಮಾರ್, ಕಿಶೋರ್ ಕುಮಾರ್, ಎಚ್. ಎನ್. ಹೂಗಾರ್, ಆನಂದ ಕುಪ್ಪಿಗುಡ್ಡ ಸೇರಿದಂತೆ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಇತರರು ಉಪಸ್ಥಿತರಿದ್ದರು.

# ಗಣರಾಜ್ಯೋತ್ಸವ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸಾರುತ್ತದೆ: ಸಾಗರ್ ಖಂಡ್ರೆ

• **ಮಲ್ಲಮ್ಮ ನುಡಿ ವಾರ್ತೆ ಭಾಲ್ಕಿ:**

77ನೇ ಗಣರಾಜ್ಯೋತ್ಸವದ ಅಂಗವಾಗಿ ಶಾಂತಿವರ್ಧಕ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ , ಸಂಸದರಾದ ಸಾಗರ್ ಖಂಡ್ರೆ ಭೀಮಣ್ಣ ಖಂಡ್ರೆ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಧ್ವಜಾರೋಹಣ ನೆರವೇರಿಸಿದರು.



ಗಣರಾಜ್ಯೋತ್ಸವವು ನಮ್ಮ ಸಂವಿಧಾನದ ಮಹತ್ವವನ್ನು ಸ್ಮರಿಸುವ ಪವಿತ್ರ ದಿನವಾಗಿದ್ದು, ಪ್ರಜಾಪ್ರಭುತ್ವದ ಮೌಲ್ಯಗಳು, ಸಮಾನತೆ, ನ್ಯಾಯ ಮತ್ತು ಬಾಂಧವ್ಯ, ನಮ್ಮ ಜೀವನದಲ್ಲಿ ಪ್ರತಿಬಿಂಬಿಸಬೇಕು ಎಂದು ಹೇಳಿದರು. ದೇಶದ ಏಕತೆ ಮತ್ತು ಸಮಗ್ರತೆಯನ್ನು ಕಾಪಾಡುತ್ತಾ, ಜವಾಬ್ದಾರಿಯುತ ನಾಗರಿಕರಾಗಿ ಸಂವಿಧಾನದ ಆಶಯಗಳನ್ನು ಪಾಲಿಸುವಂತೆ ಎಲ್ಲರಿಗೂ ಕರೆ ನೀಡಿದರು. ಈ ಸಂದರ್ಭದಲ್ಲಿ ಆಡಳಿತ ಅಧಿಕಾರಿ ಅಂಕುಶ್ ಡೋಲೆ, ಬಿಕೆಐಟಿ ಕಾಲೇಜಿನ ಪ್ರಾಂಶುಪಾಲರಾದ ಉದಯಕುಮಾರ ಕಲ್ಯಾಣೆ, ಸಿಬ್ಬಂದಿ ವರ್ಗದವರು ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಮಕ್ಕಳನ್ನು ಮೊಬೈಲ್ ಗೀಳಿನಿಂದ ದೂರವಿಡಲು ಕರೆ



• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ:**

ನಗರ ವಂದನಾ ವಿದ್ಯಾ ಸಂಸ್ಥೆಯ ಶಾಲೆಯ ವಾರ್ಷಿಕೋತ್ಸವ ನಿನ್ನೆ ಸಂಜೆ ಇಲ್ಲಿನ ರಾಘವ ಕಲಾ ಮಂದಿರದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ರಂಗಭೂಮಿ ಕಲಾವಿದ ಪುರುಷೋತ್ತಮ ಹಂದ್ಯಾಳು, ಹಾಸ್ಯ ಕಲಾವಿದ ಶಿಕ್ಷಕ ಎ. ಎರ್ರಿಸ್ವಾಮಿ, ಕನ್ನಡಪರ ಹೋರಾಟಗಾರ ಚಂದ್ರಶೇಖರ ಕಪ್ಪಗಲ್ಲು ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು ಇಂದು ಮಕ್ಕಳು ಮೊಬೈಲ್ ಗೀಳಿಗಿ ಬಿದ್ದು ಕಲೆ, ಸಂಸ್ಕೃತಿಯಿಂದ ದೂರವಾಗುತ್ತಿದ್ದಾರೆ. ಪೋಷಕರು ಮಕ್ಕಳನ್ನು ಆದಷ್ಟು ಮೊಬೈಲ್ ನಿಂದ ದೂರವಿಟ್ಟು ವಿಧ್ಯೆಯ ಜೊತೆಗೆ ಕಲೆ ಸಂಸ್ಕೃತಿಗಳ ಮೂಲಕ ಸುಸಂಸ್ಕೃತರನ್ನಾಗಿ ಮಾಡಿ ಎಂದರು.

ಶಾಲೆಯ ಆಡಳಿತ ಮಂಡಳಿಯ ಕಾರ್ಯದರ್ಶಿ ಕೆ.ಬಿ.ಈಶ್ವರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಕಾರ್ಯಕ್ರಮ ನಿರೂಪಣೆ ವಿಜಯಲಕ್ಷ್ಮಿ, ಶ್ವೇತಾ, ಸೌಮ್ಯ, ಮಹೇಶ್ವರಿ ಅವರಿಂದ ವಂದನಾರ್ಪಣೆ ನಮ್ರತ ಇವರಿಂದ ನಡೆಯಿತು. ಶಾಲೆಯ ಮಕ್ಕಳಿಂದ ನೃತ್ಯ, ಹಾಡುಗಾರಿಕೆ, ಕಿರು ನಾಟಕ ಮೊದಲಾದ ಕಾರ್ಯಕ್ರಮಗಳ ಪ್ರದರ್ಶನ ನಡೆಯಿತು.

# ಸರ್ವರ ಶ್ರೇಯೋಭಿವೃದ್ಧಿಗೆ ಸಂವಿಧಾನ

• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ:**



ಪಟ್ಟಣದ ವಾರ್ಡ್ ಸಂ 2 ಮತ್ತು ಮಾಹಾನಾಯಕ ಡಾ. ಬಿ.ಆರ್.ಅಂಬೇಡ್ಕರ್ ಅವರ ಪುತ್ಥಳಿ ಆವರಣದಲ್ಲಿ ದಲಿತ ಸಮುದಾಯದ ಮುಖಂಡರಿಂದ 77ನೇಯ ಗಣರಾಜ್ಯೋತ್ಸವವನ್ನು ಸೋಮವಾರ ಅದ್ದೂರಿಯಾಗಿ ಆಚರಣೆ ಮಾಡಲಾಯಿತು. ಧ್ವಜಾರೋಹಣವನ್ನು ಭೀಮರಾಯ ಮೇಸ್ತ್ರಿ ಮಾಳಳ್ಳಿಕರ್, ಸೋಮಲಿಂಗ ದೊಡ್ಡಮನಿ ಮತ್ತು ಮಾನಪ್ಪ ಮಾಳಳ್ಳಿಕರ್ ನೆರವೇರಿಸಿದರು.

ಗಣರಾಜ್ಯೋತ್ಸವ ಉದ್ದೇಶಿಸಿ ದಲಿತ ಮುಖಂಡ ಬಸವಣ್ಣಪ್ಪ ಆರ್ ಮಾಳಳ್ಳಿಕರ್ ಮಾತನಾಡಿ ಡಾ. ಭೀಮರಾವ್ ಅಂಬೇಡ್ಕರ್ ಅವರು ರಾಷ್ಟ್ರದ ಸರ್ವರ ಶ್ರೇಯೋಭಿವೃದ್ಧಿಗೆ ಸಂವಿಧಾನವನ್ನು ಬರೆದು ಕೊಟ್ಟಿದ್ದಾ–ರೆ. ಸಂವಿಧಾನದಲ್ಲಿ ಎಲ್ಲ ಜಾತಿ ಜನಾಂಗದವರಿಗೆ ಸಮಾನತೆ ನೀಡಿ, ಹಕ್ಕು ಮತ್ತು ಕರ್ತವ್ಯಗಳನ್ನು ತಿಳಿಸಿ ಆರೋಗ್ಯಯುತ ರಾಷ್ಟ್ರ ನಿರ್ಮಾಣಕ್ಕೆ ದಾರಿ ತೋರಿದ ಮಹಾನ್ ದಾರ್ಶನಿಕರಾಗಿದ್ದಾರೆ ಎಂದು ತಿಳಿಸಿದರು. ಯೋಗಪ್ಪ ಮಾಳಳ್ಳಿಕರ್, ತಿಪ್ಪಣ್ಣ ಅಂಬರಖೇಡ, ಅಯ್ಯಣ್ಣ ಮಾಳಳ್ಳಿಕರ್, ಶರಣಪ್ಪ ಕಾಡಮಗೇರಿ, ಭೀಮಶಂಕರ್ ಸೋಮನಾಳಕರ್, ಪರಶುರಾಮ ಮಾಳಳ್ಳಿಕರ್, ಮಲ್ಲಿಕಾರ್ಜುನ ಕಟ್ಟಿಮನಿ, ಬಸವರಾಜ ಯಮನೂರ, ಲಕ್ಷ್ಮಣ ಬಾವಿಮನಿ, ಅಂಬರೀಶ್ ಬೊಮ್ಮನಹಳ್ಳಿ, ಜುಮಣ್ಣ ಕಟ್ಟಿಮನಿ, ತಿಪ್ಪಣ್ಣ ಅಗ್ನಿ, ಗುರಪ್ಪ ನಗನೂರ, ಸಿದ್ದಪ್ಪ ಕಂಬಾರ, ನಿಂಗಪ್ಪ ಕಟ್ಟಿಮನಿ, ಶೇಖಪ್ಪ ಇಂಗಳಿಗಿ, ಶಿವಪ್ಪ ಬಳವಾಟ, ಬಾಲರಾಜ ಬಸರಿಗಿಡ, ಶಿವು ಕಟ್ಟಿಮನಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

# ಕೆ.ಎಸ್.ಆರ್.ಟಿ.ಸಿ ಸಿಬ್ಬಂದಿಗೆ ಕಾನೂನು ಅರಿವು, ನೆರವು ಕಾರ್ಯಕ್ರಮ

• **ಮಲ್ಲಮ್ಮ ನುಡಿ ವಾರ್ತೆ ವಿಜಯನಗರ (ಹೊಸಪೇಟೆ)**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಪೊಲೀಸ್ ಇಲಾಖೆ, ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ಶಿಕ್ಷಣ ಇಲಾಖೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಹಾಗೂ ಪ್ರಾದೇಶಿಕ ಸಾರಿಗೆ ಇಲಾಖೆಯ ಜಂಟಿ ಸಹಯೋಗದಲ್ಲಿ ರಸ್ತೆ ಸುರಕ್ಷತಾ ಮಾಸಾಚರಣೆ ಅಂಗವಾಗಿ ಕೆ.ಎಸ್.ಆರ್.ಟಿ.ಸಿ ಬಸ್ ಚಾಲಕ, ನಿರ್ವಾಹಕರಿಗೆ ಮತ್ತು ಡಿಪೋ ಸಿಬ್ಬಂದಿ ವರ್ಗದವರಿಗೆ ಜನವರಿ 24ರಂದು ಸಂಜೆ 6.30ಕ್ಕೆ ನಗರದ ಕೆ.ಎಸ್.ಆರ್.ಟಿ.ಸಿ ಡಿಪೋದಲ್ಲಿ ಕಾನೂನು ಅರಿವು, ನೆರವು ಕಾರ್ಯಕ್ರಮ ಆಯೋಜಿಸಲಾಗಿದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಕೆ.ಎಂ.ರಾಜಶೇಖರ್ ಉದ್ಘಾಟಿಸುವರು. ಕೆ.ಎಸ್.ಆರ್.ಟಿ.ಸಿ ವಿಭಾಗೀಯ ನಿಯಂತ್ರಣಾಧಿಕಾರಿ ರಾಜಶೇಖರ್ ಹುದ್ದಾರ್ ಅಧ್ಯಕ್ಷತೆ ವಹಿಸಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ಡಿ.ಪಿ. ಕುಮಾರಸ್ವಾಮಿ, ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿಜೆಎಂ ಹಾಗೂ ತಾಲ್ಲೂಕು ಕಾನೂನು ಸೇವಾ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಪ್ರಶಾಂತ್ ನಾಗಲಾಪುರ್, ಅಪರ ಸಿವಿಲ್ ನ್ಯಾಯಾಧೀಶೆ ಜೆ.ಚೈತ್ರ, 2ನೇ ಅಪರ ಸಿವಿಲ್ ನ್ಯಾಯಾಧೀಶೆ ಶೃತಿ ತೇಲಿ, ಪ್ರಾದೇಶಿಕ ಸಾರಿಗೆ ಅಧಿಕಾರಿ ದಾಮೋದರ್ ಭಾಗವಹಿಸಲಿದ್ದಾರೆ.

# ಸಂವಿಧಾನದಿಂದ ಸರ್ವರಿಗೂ ಸಮಾನತೆ: ರಹೀಂ ಖಾನ್




• **ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ**

ಮಹಾನ್ ಮಾನವತಾವಾದಿ ಡಾ.ಬಿ.ಆರ್ ಅಂಬೇಡ್ಕರ್ ಅವರು ರಚಿಸಿದ ಭಾರತದ ಸಂವಿಧಾನದಿಂದ ದೇಶದಲ್ಲಿ ಸರ್ವರಿಗೂ ಸಮಾನತೆ ಲಭಿಸಿದೆ ಎಂದು ಪೌರಾಡಳಿತ ಮತ್ತು ಹಜ್ ಸಚಿವ ರಹೀಂ ಖಾನ್ ಅವರು ಹೇಳಿದರು.

ಜಿಲ್ಲಾಡಳಿತ ವತಿಯಿಂದ ನಗರದ ಬಿಎಂಸಿಆರ್‌ಸಿ ಮೈದಾನದ ಆವರಣದಲ್ಲಿ ಸೋಮವಾರ ಏರ್ಪಡಿಸಿದ್ದ 77ನೇ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ರಾಷ್ಟ್ರಧ್ವಜಾರೋಹಣ ನೆರವೇರಿಸಿ ಬಳಿಕ ಅವರು ಮಾತನಾಡಿದರು.

ನಮ್ಮ ದೇಶವು ವಿವಿಧತೆಯಲ್ಲಿ ಏಕತೆ ಹೊಂದಿದ ರಾಷ್ಟ್ರವಾಗಿದೆ. ದೇಶದಲ್ಲಿ ಸ್ವಾತಂತ್ರ, ಸಮಾನತೆ, ಭ್ರಾತೃತ್ವ ಭಾವನೆಗಳು ಇವೆ ಎಂದರೆ ಅದು ಸಂವಿಧಾನ ನಮಗೆ ನೀಡಿರುವ ಕೊಡುಗೆಯಾಗಿದೆ ಎಂದರು.

ಭಾರತ ದೇಶದ ಇತಿಹಾಸದಲ್ಲಿ ಆಗಸ್ಟ್ 15 ಮತ್ತು ಜನವರಿ 26 ಅತ್ಯಂತ ಮಹತ್ವದ ದಿನಗಳಾಗಿವೆ. ಜ.26 ರಂದು ಇಡೀ ಸ್ವತಂತ್ರ ಭಾರತವನ್ನು 'ಗಣರಾಜ್ಯ' ಎಂದು ಘೋಷಿಸಲಾಯಿತು. ಭಾರತವು ಸಾರ್ವಭೌಮ ಗಣರಾಜ್ಯವಾಯಿತು. ಇದನ್ನು ಪ್ರಜಾರಾಜ್ಯೋತ್ಸವ ಎಂದು ಕರೆಯುತ್ತೇವೆ. ದೇಶಕ್ಕೆ ಪ್ರಜಾಪ್ರಭುತ್ವದ ಆಡಳಿತಪದ್ಧತಿಯನ್ನು ಅಳವಡಿಸಿಕೊಂಡ ಸಂಭ್ರಮದ ಈ ದಿನವಾಗಿದೆ ಎಂದು ತಿಳಿಸಿದರು.

ನಮ್ಮ ಸಂವಿಧಾನದ ಪ್ರಸ್ತಾವನೆಯಲ್ಲಿ ನಮ್ಮ ದೇಶದ ಜನಜೀವನದ ಆಶೋತ್ತರಗಳು ಹುದುಗಿವೆ. ಅವುಗಳನ್ನು ಸಾಕಾರಗೊಳಿಸುವ ಪ್ರಯತ್ನದಲ್ಲಿ ನಾವೆಲ್ಲರೂ ತೊಡಗಬೇಕು. ಸಂವಿಧಾನದ ಪೂರ್ವದಲ್ಲಿ ರಾಜನ ಮಗ ರಾಜ ಆಗುತ್ತಿದ್ದನು. ಆದರೆ ಸಂವಿಧಾನ ಜಾರಿಗೆ ಬಂದ ನಂತರ ಪ್ರತಿಯೊಬ್ಬರೂ ದೇಶ ಆಳುವ ನಾಯಕನಾಗುವ ಅವಕಾಶ ಕಲ್ಪಿಸಿಕೊಟ್ಟಿದೆ. ಶಿಕ್ಷಣದಿಂದ ಉನ್ನತ ಹುದ್ದೆಗಳನ್ನು ಅಲಂಕರಿಸುವ ಅವಕಾಶ ಕಲ್ಪಿಸಿಕೊಟ್ಟಿದೆ ಎಂದರು.

ಪ್ರಜಾಪ್ರಭುತ್ವದ ಬೆನ್ನೆಲುಬಾಗಿರುವ ಸ್ಥಳೀಯ ಆಡಳಿತ ವ್ಯವಸ್ಥೆಯನ್ನು ಬಲಪಡಿಸಿ ಬಲಿಷ್ಠ ರಾಷ್ಟ್ರ ಕಟ್ಟುವ ಹಾಗೂ ದೇಶದ ಸಮಗ್ರತೆ ಮತ್ತು ಐಕ್ಯತೆಯನ್ನು ಕಾಪಾಡುವ ಕಾರ್ಯದಲ್ಲಿ, ದೇಶದ ರಕ್ಷಣಾ ಕಾರ್ಯದಲ್ಲಿ ಯೋಧರೊಂದಿಗೆ ಪ್ರತಿಯೊಬ್ಬ ಭಾರತೀಯನು ಕೈಜೋಡಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ ಎಂದು ಪ್ರತಿಪಾದಿಸಿದರು.

ನಮ್ಮ ಸರ್ಕಾರವು ಬಡವರು, ರೈತರ ಪರವಾಗಿದೆ. ಎಲ್ಲರಿಗೂ ಸಮಾನತೆ ಕಲ್ಪಿಸಿದೆ. ನಮ್ಮ ಸರ್ಕಾರ ಬಂದ ಮೇಲೆ ಬಡ, ಶೋಷಿತ ಹಾಗೂ ಹಿಂದುಳಿದ ವರ್ಗಗಳ ಅಭಿವೃದ್ಧಿಗೆ ಪಣತೊಟ್ಟಿದ್ದು, ಕರ್ನಾಟಕ ರಾಜ್ಯ ಸರ್ಕಾರ ಜಾರಿಗೊಳಿಸಿದ ಐದು ಗ್ಯಾರಂಟಿ ಯೋಜನೆಗಳಿಂದ ಕೂಲಿ ಕಾರ್ಮಿಕರ, ರೈತರ, ನಗರ ಬಡಜನರ, ಸರ್ವರ ಆರ್ಥಿಕ ಹೊಣೆಯನ್ನು ನಿಭಾಯಿಸಿದೆ ಎಂದರು.

ನಗರಗಳ ಸಮಗ್ರ ಅಭಿವೃದ್ಧಿಗೆ ರಾಜ್ಯ ಸರ್ಕಾರದ ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ, ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ, ಸ್ವಚ್ಛ ಭಾರತ್ ಮಿಷನ್, ಅಮೃತ 2.0 ಯೋಜನೆ, 15ನೇ ಹಣಕಾಸು ಯೋಜನೆಗಳ ಮೂಲಕ ಪ್ರಗತಿ ಸಾಧಿಸಲಾಗಿದೆ. ಹಲವಾರು ವರ್ಷಗಳಿಂದ ದಾಖಲೆಗಳಿಲ್ಲದ ಜಾಗಗಳಿಗೆ ಖಾತಾ ವಿತರಿಸುವ ಯೋಜನೆ ಜಾರಿಗೊಳಿಸಲಾಗಿದೆ ಎಂದರು.

ಭಾರತವನ್ನು ಜಗತ್ತಿನ ಅತ್ಯಂತ ಪ್ರಬುದ್ಧ, ಪ್ರಗತಿಪರ, ಭದ್ರ, ಬಲಿಷ್ಠ ರಾಷ್ಟ್ರವನ್ನಾಗಿ ರೂಪಿಸಲು ದೇಶಭಕ್ತಿ ಅಳವಡಿಸಿಕೊಳ್ಳುವ ಮೂಲಕ ನಾವೆಲ್ಲಾ ಒಂದಾಗಿ ಪ್ರಯತ್ನಿಸೋಣ. ಪ್ರೀತಿ–ವಿಶ್ವಾಸ ಹಂಚುವ ಮೂಲಕ ಜಿಲ್ಲೆಯನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಎಲ್ಲರೂ ಸಹಕರಿಸಬೇಕು. ಮುಂದಿನ ದಿನಗಳಲ್ಲಿ ರಾಜ್ಯದ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧವಾಗಿದ್ದು, ಜನತೆಯ ಸಹಕಾರದೊಂದಿಗೆ ಪ್ರಗತಿಯನ್ನು ಸಾಧಿಸಲಿದೆ ಎಂದು ಅಭಿಮತ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಪೊಲೀಸ್, ಅರಣ್ಯ ಇಲಾಖೆ, ಗೃಹರಕ್ಷಕ ದಳ ಇಲಾಖೆ ಮತ್ತು ಶಾಲಾ ಕಾಲೇಜುಗಳ ವಿದ್ಯಾರ್ಥಿಗಳಿಂದ ಸಮವಸ್ತ್ರದಲ್ಲಿ ಶಿಸ್ತುಬದ್ಧ ಪಥಸಂಚಲನ ನಡೆಯಿತು.

ಗಣರಾಜ್ಯೋತ್ಸವದ ದಿನಾಚರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸಾಧನೆ ಮಾಡಿದ ಸಾಧಕರಿಗೆ ಸನ್ಮಾನಿಸಿ, ಗೌರವಿಸಲಾಯಿತು.

ಬಳಿಕ ಶಾಲಾ ಶಿಕ್ಷಣ ಇಲಾಖೆಯ ವಿವಿಧ ಮಾಧ್ಯಮಿಕ ಮತ್ತು ಪ್ರೌಢ ಶಾಲೆಯ ವಿದ್ಯಾರ್ಥಿಗಳಿಂದ ಗಣರಾಜ್ಯೋತ್ಸವದ ನಿಮಿತ್ತ ಸಾಮೂಹಿಕ ನೃತ್ಯ, ದೇಶ ಭಕ್ತಿಗೀತೆ, ವೇಷಧಾರಿ ಒಳಗೊಂಡ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನೋಡುಗರ ಮನಸೂರೆಗೊಂಡವು.

ಈ ಸಂದರ್ಭದಲ್ಲಿ ಸಂಸದ ಈ.ತುಕಾರಾಮ್, ಡಾ.ಬಾಬು ಜಗಜೀವನ್‌ರಾಮ್ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತದ ಅಧ್ಯಕ್ಷ ಮುಂಡರಗಿ ನಾಗರಾಜ, ಮಹಾನಗರ ಪಾಲಿಕೆಯ ಮಹಾಪೌರರಾದ ಪಿ.ಗಾದೆಪ್ಪ, ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್.ಆಂಜನೇಯುಲು, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಕೆ.ಇ.ಚಿದಾನಂದಪ್ಪ, ಪಾಲಿಕೆ ಉಪಮೇಯರ್ ಮುಬೀನಾ, ಬಳ್ಳಾರಿ ವಲಯ ಪೊಲೀಸ್ ಮಹಾನಿರೀಕ್ಷಕ ಡಾ.ಪಿ.ಎಸ್ ಹರ್ಷ, ಜಿಲ್ಲಾಧಿಕಾರಿ ನಾಗೇಂದ್ರಪ್ರಸಾದ್.ಕೆ., ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಸುಮನ್ ಡಿ ಪೆನ್ನೇಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್, ಅಪರ ಜಿಲ್ಲಾಧಿಕಾರಿ ಮಹಮ್ಮದ್ ಎನ್.ಝುಬೇರ್, ಸಹಾಯಕ ಆಯುಕ್ತ ರಾಜೇಶ್.ಹೆಚ್.ಡಿ., ಮಹಾನಗರ ಪಾಲಿಕೆ ಆಯುಕ್ತ ಪಿ.ಎಸ್.ಮಂಜುನಾಥ, ಡಿಎಂಎಫ್ ವಿಶೇಷಾಧಿಕಾರಿ ಲೋಕೇಶ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿ–ಸಿಬ್ಬಂದಿ ವರ್ಗ, ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ಡಾ.ಬಿ.ಆರ್ ಅಂಬೇಡ್ಕರ್ ಸರ್ವ ಜನಾಂಗದ ನಾಯಕ

• **ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ:**

ಬಾಬಾ ಸಾಹೇಬರು ದೇಶಕ್ಕೆ ಸಂವಿಧಾನ ನೀಡಿ ಸರ್ವರಿಗೂ ಸಮಬಾಳು ಮತ್ತು ನ್ಯಾಯವನ್ನು ಖಾತರಿಪಡಿಸಿದರು ಅವರು ಸರ್ವ ಜನಾಂಗದ ನಾಯಕ ಎಂದು ಹಿರಿಯ ದಲಿತ ಮುಖಂಡ ಮಹಾದೇವಪ್ಪ ಜಲಪುರ ಹೇಳಿದರು.

ಸಮೀಪದ ಯಾಳಗಿ ಗ್ರಾಮದ ಅಂಬೇಡ್ಕರ್ ವೃತದಲ್ಲಿ 77ನೇ ಗಣರಾಜ್ಯೋತ್ಸವನ್ನು ಅದ್ದೂರಿಯಾಗಿ ಆಚರಣೆ

ಮಾಡಿ ಕಾರ್ಯಕ್ರಮದ ಅಧ್ಯಕ್ಷ ವಹಿಸಿ ಮಾತನಾಡಿದ ಅವರು ಇಂದಿಗೂ ಅವರ ತತ್ವಗಳು ಸಮ ಸಮಾಜ ನಿರ್ಮಾಣಕ್ಕೆ ಮಾರ್ಗದರ್ಶನವಾಗಿವೆ ಡಾ.ಬಿ.ಆರ್ ಅಂಬೇಡ್ಕರ್ ರವರನ್ನು ಒಂದು ವರ್ಗಕ್ಕೆ ಸೀಮಿತಗೊಳಿಸುವುದು ಸರಿಯಲ್ಲ ಎಂದರು.



ಗ್ರಾಮ ಪಂಚಾಯಿತ ಅಭಿವೃದ್ಧಿ ಅಧಿಕಾರಿ ಸತೀಶ್ ಅಲಗೂರ್ ಧ್ವಜಾರೋಹಣ ನೆರವೇರಿಸಿದರು.

ಅಂಬೇಡ್ಕರ್ ಅವರು ಭಾವ ಚಿತ್ರಕ್ಕೆ ಶ್ರೀನಿವಾಸ್ ಮಾಲಿ ಪಾಟೀಲ್ ಹಾಗೂ ರಾಮನಗೌಡ ಹೊಸಮನಿ ಮಾಲಾರ್ಪಣೆ ಮಾಡಿದರು. ಕರ್ನಾಟಕ ರಾಜ್ಯ ದಲಿತ ಸಂಘರ್ಷ ಸಮಿತಿ ಯಾದಗಿರಿ ಜಿಲ್ಲಾ ಸಂಘಟನೆ ಸಂಚಾಲಕ ಶಿವಶರಣ ಯಾಳಗಿ ಮುಖಂಡರಾದ ಬಸವರಾಜ್ ಹೆಳವರ, ಭಾಸ್ಕರ್ ಗೌಡ ದೇವರಡ್ಡಿ, ಪ್ರೌಢ ಶಾಲೆ ಮುಖ್ಯಗುರಗಳಾದ ಶಿವನಗೌಡ ನಾಗಪ್ಪ ಕುಂಬಾರ, ನಿಂಗಣ್ಣ ,

ಬಸಪ್ಪ ಜಲಪುರ, ಶ್ರೀಶೈಲ್ ಮಹಾಮಾನಿ ಬಡಿಗೇರ, ಲೋಹಿತ್, ರಾಜು ನಾಗರಡ್ಡಿ, ರವಿ ನಾಗರಡ್ಡಿ, ಮಂಜು ಜಲಪುರ, ಹಾಗೂ ಶಾಲೆ ಮಕ್ಕಳು ಇದ್ದರು.

# ಜೆಡಿಎಸ್ ಕಾರ್ಯಾಲಯದಲ್ಲಿ ಗಣರಾಜ್ಯೋತ್ಸವ ಆಚರಣೆ

• **ಮಲ್ಲಮ್ಮ ನುಡಿ ವಾರ್ತೆ ಯಾದಗಿರಿ:**

ನಗರದ ಜಿಲ್ಲಾ ಜೆಡಿಎಸ್ ಕಾರ್ಯಾಲಯದಲ್ಲಿ ಗಣರಾಜ್ಯೋತ್ಸವದ ಅಂಗವಾಗಿ ಜಿಲ್ಲಾಧ್ಯಕ್ಷ ಸುಭಾಷ್ಚಂದ್ರ ಕಟಕಟಿ ಅವರ ನೇತೃತ್ವದದಲ್ಲಿ ಧ್ವಜಾರೋಹಣ ನೆರವೇರಿಸಿ ಗಣರಾಜ್ಯೋತ್ಸವ ದಿನ ಆಚರಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾಧ್ಯಕ್ಷ ಕಟಕಟಿ ಅವರು ನಮ್ಮ ಜೆಡಿಎಸ್ ಪಕ್ಷವು ರೈತರ ಹಕ್ಕುಗಳು, ಗ್ರಾಮೀಣ ಅಭಿವೃದ್ಧಿ ಮತ್ತು ಜಾತ್ಯತೀತೆಯ ರಾಜಕಾರಣಕ್ಕೆ ಒತ್ತು ನೀಡುತ್ತಾ ಬಂದಿದ್ದು, ಈ ಗಣರಾಜ್ಯದ ಆಶಯಗಳನ್ನು ಈಡೇರಿಸುತ್ತಾ ಕರ್ನಾಟಕದಲ್ಲಿ ನಮ್ಮ ಪಕ್ಷ ಜನರ



ಸಮಸ್ಯೆಗಳಿಗೆ ಧ್ವನಿಯಾಗಿದ್ದು, ಈ ಗಣರಾಜ್ಯೋತ್ಸವದ ದಿನ ರಾಷ್ಟ್ರೀಯ ಏಕತೆಗಾಗಿ ನಾವೆಲ್ಲರೂ ಪ್ರತಿಜ್ಞೆ ಮಾಡೋಣ ಎಂದರು.

ಇದೇ ವೇಳೆ ಮಹಿಳಾ ಜಿಲ್ಲಾಧ್ಯಕ್ಷರಾದ ನಾಗರತ್ನ ಅನಪುರ ಅವರು ಮಾತನಾಡಿ ದೇಶಭಕ್ತಿ, ಐಕ್ಯತೆ ಮತ್ತು ಸಂವಿಧಾನದ ಆದರ್ಶಗಳನ್ನು ಗೌರವಿಸುವ ಈ ಸುದಿನದಂದು ನಮ್ಮ ಸಂವಿಧಾನವು ಸಮಾನತೆ, ಸ್ವಾತಂತ್ರ್ಯ ಮತ್ತು ನ್ಯಾಯವನ್ನು ಎತ್ತಿ ಹಿಡಿಯುತ್ತದೆ. ಇಂದಿನ ಆಚರಣೆಯು ನಮ್ಮ ಜವಾಬ್ದಾರಿಯನ್ನು ಇನ್ನಷ್ಟು ಹೆಚ್ಚಿಸಲಿ ಗ್ರಾಮೀಣ ಅಭಿವೃದ್ಧಿ, ಯುವಕರ ಉದ್ಯೋಗ, ಮಹಿಳಾ ಸಬಲೀಕರಣಕ್ಕಾಗಿ ನಾವು ಶ್ರಮಿಸೋಣ ಎಂದರು. ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಚನ್ನಪ್ಪಗೌಡ ಮೊಸಂಬಿ, ವಿಶ್ವನಾಥ್ ಶಿರವಾರ, ರಾಮಣ್ಣ ಕೋಟಗೇರಾ, ಮಲ್ಲನಗೌಡ ಹಳಿಮನಿ, ಬಂದಪ್ಪ ಹರಳಿ, ಬಸ್ಸುಗೌಡ, ರಾಜುಗೌಡ, ಪರಮರೆಡ್ಡಿ, ಶರಣಪ್ಪಗೌಡ, ಬಸವರಾಜ ಗಿರೆಪ್ಪನೋರ, ನರಸಿಂಹ ರೆಡ್ಡಿ, ಶರಣುಗಾಡಿ, ಹರೀಶವಾಲಿ, ಮಲ್ಲುಗುಂಡಗುರ್ತಿ, ಉದಯ್, ನಿಂಗಪ್ಪ ಯಡ್ಡಳ್ಳಿ, ಯಲ್ಲಾಲಿಂಗ ಚಾಮನಹಳ್ಳಿ, ಸಾಯಿಬಣ್ಣ ಯಾದವ್ ಸೇರಿದಂತೆ ಇನ್ನಿತರರಿದ್ದರು.

# 77ನೇ ಗಣರಾಜ್ಯೋತ್ಸವ ಶಾಸಕ ಅಪ್ಪಾಜಿ ನಾಡಗೌಡ ಭಾರತೀಯರೆಲ್ಲರೂ ಒಂದು ಎಂಬ ಭಾವನೆ ಇರಲಿ




• **ಮಲ್ಲಮ್ಮ ನುಡಿ ವಾರ್ತೆ ತಾಳಿಕೋಟಿ:**

ಭಾರತದ ಸಂವಿಧಾನ ಎಲ್ಲರಿಗೂ ಸಮಾನ ಹಕ್ಕುಗಳನ್ನು ನೀಡಿದೆ. ಅದು ಎಲ್ಲ ದೇಶವಾಸಿಗಳ ಹಿತವನ್ನು ಬಯಸುತ್ತದೆ, ಜಾತಿ ವರ್ಗ ಹಾಗೂ ಧರ್ಮದ ಆಧಾರದಲ್ಲಿ ವ್ಯತ್ಯಾಸ ಮಾಡದೇ ನಾವೆಲ್ಲರೂ ಭಾರತೀಯರು ನಾವೆಲ್ಲ ಒಂದು ಎಂಬ ಭಾವನೆ ಎಲ್ಲರಲ್ಲೂ ಬರಬೇಕಾಗಿದೆ ಎಂದು ಕೆ ಎಸ್ ಡಿ ಎಲ್ ಅಧ್ಯಕ್ಷ, ಶಾಸಕ ಅಪ್ಪಾಜಿ ನಾಡಗೌಡ ಹೇಳಿದರು. ಪಟ್ಟಣದ ಸರ್ಕಾರಿ ಕನ್ನಡ ಮಾದರಿ ಪ್ರಾಥಮಿಕ ಶಾಲೆ ಆವರಣದಲ್ಲಿ ತಾಲೂಕಾಡಳಿತದ ವತಿಯಿಂದ ಆಯೋಜಿಸಿದ್ದ 77ನೇ ಗಣರಾಜ್ಯೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ಡಾ.ಬಿ ಆರ್ ಅಂಬೇಡ್ಕರ್ ಅವರು ನಮಗೆ ವಿಶ್ವ ಶ್ರೇಷ್ಠ ಸಂವಿಧಾನವನ್ನು ಕೊಟ್ಟು ಹೋಗಿದ್ದಾರೆ ಅದರ ರಕ್ಷಣೆ ನಮ್ಮೆಲ್ಲರ ಕರ್ತವ್ಯವಾಗಬೇಕು ಸಂವಿಧಾನದಿಂದಲೇ ದೇಶ ಸದೃಢವಾಗಲು ಸಾಧ್ಯ, ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮನ್ನು ಸಮರ್ಪಿಸಿದ ಮಹಾತ್ಮ ಗಾಂಧಿಯವರ ತ್ಯಾಗ ಬಲಿದಾನವನ್ನು ನಾವೆಂದೂ ಮರೆಯಬಾರದು ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ ಬಲಿದಾನಗಳನ್ನು ದುರ್ಬಲಗೊಳಿಸುವ ಕಾರ್ಯ ಮಾಡಬಾರದು. ಎಲ್ಲರೂ ಒಂದಾಗಿ ದೇಶ ಕಟ್ಟುವ ಕಾರ್ಯ ಮಾಡಬೇಕಾಗಿದೆ. ನಮ್ಮ ಸರ್ಕಾರವು ಐದು ಗ್ಯಾರಂಟಿ ಯೋಜನೆಗಳನ್ನು ರಾಜ್ಯದಲ್ಲಿ ಯಶಸ್ವಿಯಾಗಿ ಅನುಷ್ಠಾನಗೊಳಿಸಿದ್ದು ರಾಜ್ಯದ ಅಭಿವೃದ್ಧಿಗೆ ಪೂರಕವಾಗಿದೆ ಸಾಕಷ್ಟು ಫಲಾನುಭವಿಗಳು ಇದರ ಸದುಪಯೋಗ ಪಡೆದುಕೊಳ್ಳುತ್ತಿದ್ದಾರೆ, ರಾಜ್ಯ ಹಾಗೂ ಕೇಂದ್ರದ ಸಮನ್ವಯತೆಯೊಂದಿಗೆ ದೇಶದ ಪ್ರಗತಿ ಸಾಧ್ಯ ಇದಕ್ಕೆ ಒಕ್ಕೂಟ ವ್ಯವಸ್ಥೆಯ ಪಾಲನೆ ಅಗತ್ಯವಾಗಿದೆ. ಇಡೀ ಮತಕ್ಷೇತ್ರ ಅಭಿವೃದ್ಧಿಯಡೆಗೆ ಹೋಗುತ್ತಿದೆ ಇದರಲ್ಲಿ ನಿಮ್ಮೆಲ್ಲರ ಸಹಕಾರವು ಇದೆ. ಪಟ್ಟಣದಲ್ಲಿ ಪ್ರಜಾಸೌಧ ಕಟ್ಟಡಕ್ಕೆ ಮಂಜೂರಾತಿ ಸಿಕ್ಕಿದೆ ಒಂದು ವರ್ಷದ ಒಳಗಾಗಿ ಇದರ ನಿರ್ಮಾಣ ಆಗಲು ತಾಲೂಕಾಡಳಿತ ಆಸಕ್ತಿ ವಹಿಸಬೇಕು ಅದರಂತೆ ನೂತನ ತಾಲೂಕಿನ ಎಲ್ಲಾ ಕಚೇರಿಗಳು ಆದಷ್ಟು ಬೇಗ ಆರಂಭಿಸಲು ಶಕ್ತಿ ಮೀರಿ ಪ್ರಯತ್ನಿಸಲಾಗುವುದು. ಭವ್ಯ ಭಾರತದ ನಿರ್ಮಾಣಕ್ಕೆ ಎಲ್ಲಾರು ಒಂದಾಗಿ ಕೆಲಸ ಮಾಡೋಣ ಎಂದರು. ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ತಾಲೂಕಾಡಳಿತದಿಂದ ಸನ್ಮಾನಿಸಲಾಯಿತು ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಅಂಗನವಾಡಿಯ ಎಲ್.ಕೆ.ಜಿ. ಮತ್ತು ಯುಕೆಜಿ ಮಕ್ಕಳಿಗೆ ಕೊಡಮಾಡಿದ ಸ್ಮಾರ್ಟ್ ಟಿವಿಗಳನ್ನು ಅಪ್ಪಾಜಿ ನಾಡಗೌಡರು ವಿತರಿಸಿದರು. ತಹಸಿಲ್ದಾರ್ ಡಾ.ವಿನಯಾ ಹೂಗಾರ ಧ್ವಜಾರೋಹಣ ನೆರವೇರಿಸಿದರು. ಕಾರ್ಯಕ್ರಮದಲ್ಲಿ ತಾಪಂ ಇಓ ಅನಸೂಯಾ ಚಲವಾದಿ, ಪುರಸಭೆ ಮುಖ್ಯಾಧಿಕಾರಿ ವಸಂತಪವಾರ, ಸಿಡಿಪಿಓ ಶಿವಮೂರ್ತಿ ಕುಂಬಾರ, ಕ್ಷೇತ್ರ ಸಮನ್ವಯಾಧಿಕಾರಿ ಆರ್ ಬಿ ದಮ್ಮೂರಮಠ, ಗ್ಯಾರಂಟಿ ಸಮಿತಿಯ ಸಂಗಮೇಶ ದೇಸಾಯಿ, ಶಿರಸ್ತೆದಾರ ಜೈನಾಪೂರ, ಪಿಎ ಜ್ಯೋತಿ ಖೋತ್, ಪಟ್ಟಣದ ಗಣ್ಯರು, ಜನಪ್ರತಿನಿಧಿಗಳು, ಕನ್ನಡ ಪರ ಸಂಘಟನೆ, ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರು, ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ವಿದ್ಯಾರ್ಥಿಗಳು ಇದ್ದರು.

# ಪಟ್ಟಣದ ಗ್ರಾಮದೇವಿ ಜಾತ್ರೆಗೆ ಅಂಕಿತ

• **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ:**

ಫೆಬ್ರವರಿ 25ರಲ್ಲಿ ಜರಗುವ ಗ್ರಾಮದೇವಿ ಜಾತ್ರಾಮಹೋತ್ಸವದ ದಿ.25–01–2026ರಂದು ದೇವಸ್ಥಾನದಲ್ಲಿ ವಿಷೇಶ ಪೂಜೆ ಸಲ್ಲಿಸುವುದರೊಂದಿಗೆ ಅರ್ಚಕ ಕಿರಣ ಪೂಜಾರ ಇವರು ಜಾತ್ರೆ ಸವಿವರ ಪಟ್ಟಿಯನ್ನು ಜಾತ್ರಾ ಉತ್ಸವ ಕಮಿಟಿ ಅಧ್ಯಕ್ಷ ಸುಧೀರ ಬೋಳಾರ ಇವರಿಗೆ ಸಲ್ಲಿಸುವುದರೊಂದಿಗೆ ಅಂಕಿತ ಹಾಕುವ ಕಾರ್ಯಕ್ರಮ ಜರುಗಿತು.

ಕಾರ್ಯಕ್ರಮದಲ್ಲಿ ದೇವಸ್ಥಾನ ಟ್ರಸ್ಟ ಕಮಿಟಿ ಅಧ್ಯಕ್ಷ ಶ್ರೀಕಾಂತ ಖಟಾವಕರ ಜಾತ್ರಾ ಕಮಿಟಿ ಅಧ್ಯಕ್ಷ ಸುಧೀರ ಭೋಳಾರ ಇವರು ಗ್ರಾಮದೇವಿಯರಿಗೆ ಸಂಕಲ್ಪ ಪೂಜೆ ನೆರವೇರಸಿದರು.

ಪೂಜಾರರಾದ ಕಿರಣ ಪೂಜಾರ ಮೊದಲನೆ ಹೊರಬಿಡುವವಾರ ಪ್ರಮುಖ ಗ್ರಾಮಗಳಾದ ಕಲಘಟಗಿ ಪಟ್ಟಣ, ಬೆಂಡಿಗೇರಿ, ಮಾಚಾಪೂರ, ದಾಸ್ತಿಕೊಪ್ಪ



ಹಾಗೂ ಕಲಕುಂಡಿ ಗ್ರಾಮದ ಸಾರ್ವಜನಿಕರು ,ಪೇಬ್ರವರಿ ದಿ 3–2–2026 ಮಂಗಳವಾರ ದಿ 6–2–2026ರ ಶುಕ್ರವಾರ, 10–2–2026ರ ಮಂಗಳವಾರ, 13–02–2026ರ ಶುಕ್ರವಾರ 17–02–2026 ಮಂಗಳವಾರ ಹೊರವಾರವನ್ನಾಗಿ ಆಚರಿಸುವುದು ಅಂದು ಬೆಳಿಗ್ಗೆ 1ಘಂಟೆಗೆ ಭಕ್ತರು ಮನೆಯ ಹೊರಗಡೆ ಹೊಲಗಳಲ್ಲಿ ಇದ್ದು ಸಾಯಾಂಕಾಲ 5ಘಂಟೆಗೆ ಮರಳಿ ಬರುವುದು ವಾಡಿಕೆ ಇದ್ದು ಕಟ್ಟುನಿಟ್ಟಾಗಿ ಪಾಲಿಸಬೇಕು

ಫೆಬ್ರವರಿ 18ರ ಬುಧವಾರ ದೇವಿಯರ ಕಳಾಕರ್ಷಣ ಹೊಮ, ಪೂಜೆಯೊಂದಿಗೆ ಬಣ್ಣ ಹಚ್ಚಲು ಬಿಡುವುದು, 24ರಂದು ಮಂಗಳವಾರ ಪುಣ್ಯಾಹವಾಚನ, ನಂತರ ಕಳಾಕರ್ಷಣ ನಡೆಯುವುದು, ಮಾಂಗಲ್ಯ ಧಾರಣೆ, ಕುಮಾರಿಕಾ ಪೂಜೆ ಪೂರ್ಣಾಹುತಿ ಮಹಾಮಂಗಳಾರತಿ ಮೃಘಶಿರ ನಕ್ಷತ್ರದಂದು ನಡೆಸಲಾಗುವುದು 25ರಂದು 3ಘಂಟೆಗೆ ಗ್ರಾಮದೇವಿಯರ ಭವ್ಯ ಮೆರವಣಿಗೆಯೊಂದಿಗೆ ಚೌತಮನೆಕಟ್ಟಿಯಲ್ಲಿ ಸ್ಥಾಪಿಸುವುದು ನಂತರ 9ದಿವಸದವರೆಗೆ ದೇವಿಯರಿಗೆ ಉಡಿ ತುಂಬವ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮ ಗಣ್ಯರ ಆಗಮನ, ವಿವಿಧ ಕಲಾವಿದರಿಂದ ಸಂಗೀತ ಕಾರ್ಯಕ್ರಮ ಜರಗುವುದು ಎಂದು ಜಾತ್ರಾ ಉತ್ಸವ ಕಮಿಟಿ ಅಧ್ಯಕ್ಷ ಸುದೀರ ಬೋಳಾರ ತಿಳಿಸಿದರು.

ಅಂಕಿತ ಹಾಕುವ ಆರ್ಯಕ್ರಮದಲ್ಲಿ ಹರಿಶಂಕರ ಮಠದ, ಬಾಬಣ್ಣ ಅಂಚಟಗೇರಿ, ಕುಮಾರ ಖಂಡೇಕರ, ಪ್ರಮೋದ ಪಾಲ್ಕರ, ರಾಕೇಶ ಅಳಗವಾಡಿ, ವೃಷಬೇಂದ್ರಪಟ್ಟಣಶೆಟ್ಟಿ, ನೀತಿನ ಶೆವಡೆ, ಶಶಿಧರ ನಿಂಬಣ್ಣವರ, ಗಂಗಾಧರ ಗೌಳಿ, ಮಹಾಂತೇಶ ತಹಶಿಲ್ದಾರ, ಶಿವಪುತ್ರಯ್ಯ ತೇಗೂರಮಠ, ಸದಾನಂದ ಚಿಂತಾಮಣಿ, ಶಕುಂತಲಾ ಬೋಳಾರ, ರಾಜು ಚಿಕ್ಕಮಠ, ಅನೀಲ ರಂಗೋಳ್ಳಿ, ರಾಜು ಖಟಾವಕರ, ರಾಘವೇಂದ್ರ ಅಳ್ನಾವರ, ರಮೇಶ ಸದರೆ, ಪರಶುರಾಮ ಹುಲಿಹೊಂಡ, ಪರಶುರಾಮ ತಹಶಿಲ್ದಾರ, ಇದ್ದರು.

# ಸಂವಿಧಾನದ ಅರಿವು ಎಲ್ಲಾ ಇಲಾಖೆಯ ಅಧಿಕಾರಿಗಳು ಮೂಡಿಸುವಲ್ಲಿ ಪ್ರಮುಖ ಪಾತ್ರವಹಿಸಬೇಕು: ಕಂದಕೂರು



• **ಮಲ್ಲಮ್ಮ ನುಡಿ ವಾರ್ತೆ ಗುರುಮಠಕಲ್:**

ಪಟ್ಟಣದ ಜವಾಹರ್ ಲಾಲ್ ಕ್ರೀಡಾಂಗಣದಲ್ಲಿ ಸಾರ್ವಜನಿಕ ಧ್ವಜಾರೋಹಣ ಸಮಿತಿವತಿಯಿಂದ 77 ನೇಯ ಗಣರಾಜ್ಯೋತ್ಸವದ ಅಚರಣೆ ಜರುಗಿತು. ತಹಸೀಲ್ದಾರ್ ಚನ್ನಮಲ್ಲಪ್ಪ ಘಂಟಿ ಧ್ವಜಾರೋಹಣ ನೆರವೇರಿಸಿದರು, ವಿಶೇಷ ಉಪನ್ಯಾಸ ಭೀಮಶಪ್ಪ ಮನ್ನೇ ನೀಡಿದರು. ಅಧ್ಯಕ್ಷೀಯ ನುಡಿಗಳನ್ನಾಡಿದ ಶಾಸಕ ಶರಣಗೌಡ ಕಂದಕೂರು ಸಂವಿಧಾನ ಕುರಿತಾದ ಜಾಗೃತಿ ಕೇವಲ ವೇದಿಕೆಯಲ್ಲಿ ಮಾತ್ರ ಆಗದೆ ಪ್ರತಿ ಶಾಲೆಯಲ್ಲಿ ಆಗಬೇಕು, ಸಂವಿಧಾನ ನಮ್ಮ ಪೀಳಿಗೆಗೆ ಸಿಕ್ಕಿರುವ ಒಂದು ಆಸ್ತಿ, 241 ಪುಟಗಳ ಸಂವಿಧಾನ ಬಡವರಿಗೆ ಸಮಾನತೆ, ಯುವ ಪೀಳಿಗೆಯ ಭವಿಷ್ಯ ನೀಡುವದು ಸಂವಿಧಾನ ಎಲ್ಲರಿಗೂ ಸಂವಿಧಾನ ಅರಿತಾಗ ಮಾತ್ರ ಸಂವಿಧಾನ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರಿಗೆ ಗೌರವ ನೀಡಿದಂತೆ ಎಂದು ಹೇಳಿದರು.

ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ನೃತ್ಯ ವಿಶೇಷವಾಗಿ ಅಪರೇಷನ್ ಸಿಂಧೂರ ನೃತ್ಯಕ್ಕೆ ಎಲ್ಲರ ಮೆಚ್ಚುಗೆ ವ್ಯಕ್ತವಾಯಿತು, ಸಮಾಜ ಸೇವೆಗಾಗಿ ಅಶೋಕ್ ಶನಿವಾರಂ, ಪ್ರತಿ ವರ್ಷ ಪಟ್ಟಣದಲ್ಲಿ ನೀರಿನ ಅರವಟ್ಟಿಗೆ ಸೇವೆ ನೀಡುವ ನರಸಿಮುಲು ಗಂಗಾನೊಳ, ಬಸ್ ಘಟಕದ ವ್ಯವಸ್ಥೆಗಾಗಿ ಶರಣಪ್ಪ ಹೂಗಾರ, ಶಿಕ್ಷಣ ಕ್ಷೇತ್ರದಲ್ಲಿ ರವೀಂದ್ರ ಚೌಹಾಣ್, ಸಿ ಆರ್ ಪಿ ಎಫ್ ಸೇನೆಗೆ ಆಯ್ಕೆಯಾದ ಸುರೇಶ್, ಉರಗ ರಕ್ಷಕ ನರಸಿಂಹರಿಗೆ ಸನ್ಮಾನಿಸಲಾಯಿತು.

ವೇದಿಕೆಯ ಸಾನಿಧ್ಯ ಖಾಸಮಠ ಶಾಂತವೀರ ಗುರು ಮುರುಘರಾಜೇಂದ್ರ ಸ್ವಾಮಿಗಳು, ಅಥಿತಿಗಳಾಗಿ ಅಂಬರೀಷ ಪಾಟೀಲ, ಶರಣಪ್ಪ ಮಡಿವಾಳ, ವೀರಣ್ಣ ಎಸ್ ದೊಡ್ಡಮನಿ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಜನ ಪ್ರತಿನಿಧಿಗಳು, ಸಂಘಟನೆ ಪದಾಧಿಕಾರಿಗಳು, ವಿವಿಧ ಇಲಾಖೆಗಳ ಅಧಿಕಾರಿಗಳು, ಪಟ್ಟಣದ ಶಾಲಾ ಶಿಕ್ಷಕರು ಹಾಗೂ ಶಾಲಾ ಮಕ್ಕಳು ಭಾಗವಹಿಸಿದರು.

ಬಾಕ್ಸ: ಮಹಾತ್ಮ ಬಸವೇಶ್ವರ, ನಿಜಶರಣ ಅಂಬಿಗರ ಚೌಡಯ್ಯ ಪುತ್ತಾಳಿಗೆ ಅನುದಾನ ಬಿಡುಗಡೆ ಮಾಡಿದ್ದು, ನಮ್ಮ ತಂದೆಯವರ ಅವದಿಯಲ್ಲಿ ಡಾ.ಅಂಬೇಡ್ಕರ್, ಬಾಬುಜೀ ಪುತ್ತಳಿ ಅನಾವರಣ ಗೊಳಿಸಿದ್ದು ನನ್ನ ಸೌಭಾಗ್ಯ– ಶಾಸಕ ಕಂದಕೂರ.

# ಸ್ವಾಮಿ ವಿವೇಕಾನಂದರು ಭಾರತದ ಆಧ್ಯಾತ್ಮಿಕ ವಿಚಾರಗಳನ್ನು ಪ್ರಪಂಚಕ್ಕೆ ಪರಿಚಯಿಸಿದರು



• **ಮಲ್ಲಮ್ಮ ನುಡಿ ಹುಣಸಗಿ:**

ಸ್ವಾಮಿ ವಿವೇಕಾನಂದರು ಪ್ರಪಂಚಕ್ಕೆ ಭಾರತದ ಆಧ್ಯಾತ್ಮಿಕ ಶಕ್ತಿ ಮತ್ತು ಭಾರತದ ಸಂಸ್ಕೃತಿ–ಸಂಸ್ಕಾರ–ಉತ್ಕೃಷ್ಟ ವಿಚಾರಗಳನ್ನು ತೋರಿಸಿಕೊಟ್ಟವರು ಎಂದು ಸಾಮಾಜಿಕ ಕಾರ್ಯಕರ್ತ ಬಸವರಾಜ್ ಮೇಲಿನಮನಿ ಹೇಳಿದರು.

ಅಖಿಲ ಭಾರತೀಯ ಸಾಹಿತ್ಯ ಪರಿಷದ್ ವತಿಯಿಂದ ವಿವೇಕ ಚಿಂತನ–ಮಂತನ ವಿಷಯದ ಮೇಲೆ ಹುಣಸಗಿ ಪಟ್ಟಣದ ಮೊರಾರ್ಜಿ ದೇಸಾಯಿ ವಸತಿ ಶಾಲೆ ಆಯೋಜಿಸಿದ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸಕರಾಗಿ

ಮಾತನಾಡಿ, ಮೋಜು ಮಸ್ತಿಯ ಗೌಜುಗದ್ದಲದಲ್ಲಿ ಕಳೆದುಹೋಗುವ ಜನಸಮುದಾಯಕ್ಕೆ ಮೊದಲ ಬಾರಿಗೆ ಭ್ರಾತೃತ್ವದ ಅನುಭವವನ್ನು ಕಟ್ಟಿಕೊಟ್ಟ ಮಹಾನ್ ವ್ಯಕ್ತಿ ಸ್ವಾಮಿ ವಿವೇಕಾನಂದರು ಎಂಬುದು ಭಾರತೀಯರಿಗೆ ಹೆಮ್ಮೆ ತರುವ ವಿಚಾರ. ಆಧ್ಯಾತ್ಮ ಹಾಗೂ ವಾಸ್ತವ ಬದುಕು ಎರಡನ್ನೂ ಸಮದೂಗಿಸಿಕೊಂಡು ಮುನ್ನಡೆದವರು. ಹಾಗಾಗಿಯೇ 'ನಿಮ್ಮನ್ನು ನೀವು ನಂಬದ ಹೊರತು ದೇವರನ್ನು ನಂಬಲು ಸಾಧ್ಯವಿಲ್ಲ', ನಿಮ್ಮ ಮನಸ್ಸನ್ನು ಉನ್ನತ ಆಲೋಚನೆಗಳಿಂದ ಮತ್ತು ಆದರ್ಶಗಳಿಂದ ತುಂಬಿಕೊಳ್ಳಿ, ಇದರ ನಂತರ ನೀವು ಮಾಡುವ ಕೆಲಸವು ಉತ್ತಮವಾಗಿರುತ್ತದೆ.

'ನನಗೆ ಬೇಕಾದುದು ಕಬ್ಬಿಣದ ಸ್ನಾಯುಗಳು, ಉಕ್ಕಿನ ನರಗಳು ಮತ್ತು ಸಿಡಿಲಿನಂಥ ಮನಸ್ಸುಗಳು. ಅಂತಹ ಕೆಲವೇ ತರುಣರಿಂದ ದೇಶದ ಭವಿಷ್ಯವನ್ನೇ ಬದಲಾಯಿಸಬಹುದು' ಎನ್ನುವ ವಿವೇಕಾನಂದರು ಯುವಸಮುದಾಯ ಹೇಗಿರಬೇಕು ಮತ್ತು ಸಾಧ್ಯತೆಗಳ ಬಗ್ಗೆ ಸ್ವಾಮಿ ವಿವೇಕಾನಂದರು ನೂರಾರು ವರ್ಷಗಳ ಹಿಂದೆಯೇ ಆದರ್ಶಗಳನ್ನು ಬಿತ್ತಿ, ನಮ್ಮೊಳಗಿನ ಉತ್ಸಾಹವನ್ನು ಹೊರಹೊಮ್ಮಿಸುವ ಕಾಯಕವನ್ನು ನಡೆಸಿಕೊಟ್ಟಿದ್ದಾರೆ. ಅವರ ಪ್ರೇರಣೆ ನಮ್ಮೆಲ್ಲರಲ್ಲೂ ಸದಾ ಜಾಗೃತಿ ಹಾಗೂ 'ದೇಶ ಮೊದಲು' ಎನ್ನುವ ಭಾವನೆಯನ್ನು ಮೂಡಿಸುವಂತಾಗಬೇಕಿದೆ ಎಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಕಾಲೇಜು ಅಭಿವೃದ್ಧಿ ಕಮಿಟಿಯ (ಅಆಅ) ಅಧ್ಯಕ್ಷ ಬಸವರಾಜ್ ಸಜ್ಜನ್ ಮಾತನಾಡಿದರು. ವಸತಿ ಶಾಲೆಯ ಪ್ರಾಂಶುಪಾಲರಾದ ಅಶೋಕ ನೀಲಗಾರ್ ಗೌರವ ಉಪಸ್ಥಿತಿ ವಹಿಸಿದ್ದರು. ಅಭಾಸಾಪ ಅಧ್ಯಕ್ಷ ಶರಣಗೌಡ ಗೆಣ್ಣೂರ ಅಧ್ಯಕ್ಷೀಯ ನುಡಿ ಹೇಳಿದರು. ಅಭಾಸಾಪ ಕಾರ್ಯದರ್ಶಿ ದೇವರಾಜ್ ಕುಲ್ಕರ್ಣಿ, ಚನ್ನಕುಮಾರ ದಿಂಡವಾರ್ ಸೇರಿದಂತೆ ಶಾಲೆಯ ಸಿಬ್ಬಂದಿ ವರ್ಗ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು. ಸಂಗೀತ ಶಿಕ್ಷಕ ಅಶೋಕ್ ರಾಜನಕೊಳೂರು ಸ್ವಾಗತಿಸಿ, ನಿರೂಪಿಸಿದರು. ಶಿಕ್ಷಕ ಶ್ರೀರಾಮ್ ವಂದಿಸಿದರು.

# ಸೈಕಲ್ ಮ್ಯಾರಾಥಾನ್

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು:**

ಎಡೆದೊರೆನಾಡು ರಾಯಚೂರು ಜಿಲ್ಲಾ ಉತ್ಸವ 2026ರ ನಿಮಿತ್ತ ಜಿಲ್ಲಾಡಳಿತದಿಂದ ಜನವರಿ 27ರ ಬೆಳಗ್ಗೆ 6 ಗಂಟೆಗೆ ಸೈಕಲ್ ಮ್ಯಾರಾಥಾನ್ ಸ್ಪರ್ಧೆಯನ್ನು ಆಯೋಜನೆ ಮಾಡಲಾಗಿದೆ.

ಈ ಸೈಕಲ್ ಮ್ಯಾರಾಥಾನ್ ಮಹಾತ್ಮಾಗಾಂಧಿ ಜಿಲ್ಲಾ ಕ್ರೀಡಾಂಗಣದಿಂದ ಆರಂಭವಾಗಿ ಬಸವೇಶ್ವರ ಸರ್ಕಲ್, ಲಿಂಗಸುಗೂರು ರೋಡ್, ಯಕ್ಲಾಸಪುರ್, ಯರಮರಸ್, ಬೈಪಾಸ್, ಓಪೆಕ್ ಆಸ್ಪತ್ರೆ, ಗಂಜ್ ಸರ್ಕಲ್, ಬಸವೇಶ್ವರ ಸರ್ಕಲ್ ಮಾರ್ಗವಾಗಿ ಮಹಾತ್ಮಾಗಾಂಧಿ ಜಿಲ್ಲಾ ಕ್ರೀಡಾಂಗಣಕ್ಕೆ ಬಂದು ತಲುಪುವುದು.

ಈ ಸ್ಪರ್ಧೆಯಲ್ಲಿ ವಿಜೇತರಾಗುವ ಸ್ಪರ್ಧಾಳುಗಳಿಗೆ ಪ್ರಥಮ ಬಹುಮಾನ 10 ಸಾವಿರ ರೂ. ಹಾಗೂ ದ್ವಿತೀಯ ಬಹುಮಾನ 5 ಸಾವಿರ ರೂ.ಗಳನ್ನು ನೀಡಲಾಗುವುದು ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಅಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗಣರಾಜ್ಯೋತ್ಸವ ಸಂಭ್ರಮ ಸಾಧಕರಿಗೆ ಸನ್ಮಾನ
# ರಾಜ್ಯದ ಅಭಿವೃದ್ಧಿಗೆ ಯುವಶಕ್ತಿ ಸನ್ನದ್ಧರಾಗಬೇಕಿದೆ: ಸಚಿವ ತಿಮ್ಮಾಪೂರ



• **ಮಲ್ಲಮ್ಮ ನುಡಿ ವಾರ್ತೆ ಬಾಗಲಕೋಟೆ:**

ರಾಜ್ಯದ ಅಭಿವೃದ್ಧಿಯ ವೇಗ ಹೆಚ್ಚಿ ಮುನ್ನಡೆ ಸಾಧಿಸಬೇಕಾದರೆ ಯುವ ಜನಾಂಗ ಸನ್ನದ್ಧರಾಗಬೇಕಿದೆ ಎಂದು ಅಬಕಾರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಹೇಳಿದರು.

ನವನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಸೋಮವಾರ ಜಿಲ್ಲಾಡಳಿತದಿಂದ ಹಮ್ಮಿಕೊಂಡ 77ನೇ ಗಣರಾಜ್ಯೋತ್ಸವದ ಧ್ವಜಾರೋಹಣ ನೆರವೇರಿಸಿ, ಮಾತನಾಡಿದ ಅವರು, ಕರ್ನಾಟಕವನ್ನು ದೇಶದ ಪ್ರಗತಿಪರ ರಾಜ್ಯವನ್ನಾಗಿ ರೂಪಿಸಬೇಕಾದರೆ ಎಲ್ಲರೂ ಕ್ರಿಯಾಶೀಲರಾಗಿ ದಣಿವರಿಯದೆ ದುಡಿಯಬೇಕಿದೆ. ರಾಷ್ಟ್ರ ಕಟ್ಟುವ ಕಾರ್ಯದಲ್ಲಿ ತ್ಯಾಗ, ಬಲಿದಾನ, ಪ್ರಾಣಾರ್ಪಣೆ ಮಾಡಿದ ಅಸಂಖ್ಯಾತ ದೇಶ ಭಕ್ತರನ್ನು, ಮಹಾನ್ ಮೇಧಾವಿಗಳನ್ನು ನೆನಪಿಸಬೇಕಾಗುತ್ತದೆ. ಇದು ನಮ್ಮೆಲ್ಲರ ಕರ್ತವ್ಯ ಕೂಡಾ ಆಗಿದೆ ಎಂದರು.

ವಸತಿ ಇಲಾಖೆ, ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ರಾಜ್ಯಾದ್ಯಂತ ನಿರ್ಮಿಸಿರುವ 45645 ಮನೆಗಳ ಪೈಕಿ ಬಾಗಲಕೋಟೆ ಜಿಲ್ಲೆಯ ರಬಕವಿಯಲ್ಲಿ 192 ಮನೆಗಳ ಹಕ್ಕುಪತ್ರಗಳನ್ನು ವಿತರಣೆ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ಪ್ರವಾಹ, ಅತಿ ಮಳೆಯಿಂದ ಹಾನಿಯಾದ ಬೆಳೆಗಳಿಗೆ ಒಟ್ಟು 139.57 ಕೋಟಿ ರೂ.ಗಳ ಇನಪುಟ್ ಸಬ್ಸಿಡಿ ಪರಿಹಾರವನ್ನು ನೇರವಾಗಿ ಜಿಲ್ಲೆಯ 1.10 ಲಕ್ಷ ರೈತರ ಬ್ಯಾಂಕ್ ಖಾತೆಗಳಿಗೆ ವಿವಿಧ ಹಂತಗಳಲ್ಲಿ ಡಿಬಿಟಿ ಮೂಲಕ ಪಾವತಿಸಲಾಗಿದೆ ಎಂದು ತಿಳಿಸಿದರು.

ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಪ್ರಸಕ್ತ ಸಾಲಿಗೆ 3.63 ಕೋಟಿ ರೂ.ಗಳ ಮೊತ್ತದ ಸಹಾಯಧನವನ್ನು 39 ಕೈಗಾರಿಕೆಗಳಿಗೆ ಬಿಡುಗಡೆ ಮಾಡಲಾಗಿದೆ. ಸಣ್ಣ ಪುಟ್ಟ ಉದ್ದಿಮೆ ಅಭಿವೃದ್ಧಿಗೆ ಜಿಲ್ಲೆಯಲ್ಲಿ 14 ಕಾರ್ಯಾಗಾರ ನಡೆಸಿ, ಕೇಂದ್ರ ಸರಕಾರದ ಯೋಜನೆಯಡಿ ಅಂದಾಜು 60 ಕೋಟಿ ರೂ.ಗಳ ಬಂಡವಾಳ ಹೂಡಿಕೆಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಮಹಾಲಿಂಗಪೂರದಲ್ಲಿ ನೂರು ವಿದ್ಯಾರ್ಥಿಗಳ ಸಾಮರ್ಥ್ಯವಿರುವ ಡಾ.ಬಿ.ಆರ್.ಅಂಬೇಡ್ಕರ ಸರಕಾರಿ ಮೆಟ್ರಿಕ್ ನಂತರದ ಬಾಲಕರ ವಸತಿ ನಿಲಯದ ನೂತನ ಕಟ್ಟವನ್ನು ಲೋಕಾರ್ಪಣೆಗೊಳಿಸಲಾಗಿದೆ ಎಂದು ತಿಳಿಸಿದರು.

ಎನ್.ಆರ್.ಎಲ್.ಎಂ ಯೋಜನೆಯಡಿ ಸ್ವ-ಸಹಾಯ ಸಂಘಗಳ ಮಹಿಳೆಯರು ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಪ್ರಸಕ್ತ ಸಾಲಿನಲ್ಲಿ 333 ಸ್ವ-ಸಹಾಯ ಗುಂಪುಗಳಿಗೆ 499.50 ಲಕ್ಷ ರೂ.ಗಳ ಸಮುದಾಯ ಬಂಡವಾಳ ನಿಧಿ ಅನುದಾನ ಬಿಡುಗಡೆ ಮಾಡಲಾಗಿದೆ. ಸ್ವ-ಸಹಾಯ ಸಂಘಗಳ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯ ಹಾಗೂ ಉತ್ಪನ್ನಗಳ ಪ್ರಚಾರಕ್ಕಾಗಿ ಜಿಲ್ಲೆಯ ಬನಶಂಕರಿ ಜಾತ್ರೆ ಹಾಗೂ ಚಾಲುಕ್ಯ ಉತ್ಸವ ಪ್ರಯುಕ್ತ 2 ಜಿಲ್ಲಾ ಮಟ್ಟದ ಸರಸ್ ಮೇಳ ಆಯೋಜನೆ ಮಾಡಿ ಮಹಿಳೆಯರು ತಯಾರಿಸುತ್ತಿರುವ ಉತ್ಪನ್ನಗಳಿಗೆ ಸೂಕ್ತ ಮಾರುಕಟ್ಟೆ ಸೌಲಭ್ಯ ಒದಗಿಸಲು ಪ್ರೋತ್ಸಾಹ ನೀಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಸಂಸದ ಪಿ.ಸಿ.ಗದ್ದಿಗೌಡರ, ರಾಜ್ಯಸಭಾ ಸದಸ್ಯ ನಾರಾಯಣಸಾ ಭಾಂಡಗೆ, ವಿಧಾನ ಪರಿಷತ್ ಶಾಸಕರಾದ ಪಿ.ಎಚ್.ಪೂಜಾರ, ಹನಮಂತ ನಿರಾಣಿ, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಜಿಲ್ಲಾ ಅಧ್ಯಕ್ಷ ಅನೀಲಕುಮಾರ ದಡ್ಡಿ, ಬುಡಾ ಅಧ್ಯಕ್ಷ ಅಬ್ದುಲ್‌ರಜಾಕ ಬೇನೂರ, ಜಿಲ್ಲಾಧಿಕಾರಿ ಸಂಗಪ್ಪ. ಜಿ.ಪಂ ಸಿಇಓ ಶಶಿಧರ ಕುರೇರ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಿದ್ದಾರ್ಥ ಗೋಯಲ್, ಯುಕೆಪಿ ಮಹಾ ವ್ಯವಸ್ಥಾಪಕ ಗಜಾನನ ಬಾಲೆ, ಅಪರ ಜಿಲ್ಲಾಧಿಕಾರಿ ಅಶೋಕ ತೇಲಿ, ಉಪ ಅರಣ್ಯ ಸಂರಕ್ಷಣಾಧಿಕಾರಿ ಸ್ವಪ್ನಿಲ್ ಅಹಿರೆ, ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ, ತಹಶೀಲ್ದಾರ ವಾಸುದೇವ್ ಸ್ವಾಮಿ ಸೇರಿದಂತೆ ಇತರರು ಉಪಸ್ಥಿತರಿದ್ದರು. ಸಂಗಮೇಶ ಸನತಂಗಿ ಕಾರ್ಯಕ್ರಮ ನಿರೂಪಿಸಿದರು.

## ಸಾಧಕರಿಗೆ ಸನ್ಮಾನ

ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದವರನ್ನು ಸನ್ಮಾನಿಸಲಾಯಿತು. ಸಿದ್ದು ಮೂಲಿಮನಿ (ಸಾಹಿತ್ಯ ಕ್ಷೇತ್ರ), ಬಸವರಾಜ ಡಂಬಳ (ಸಂಗೀತ), ಮಹಾದೇವ ಕಲ್ಯಾಣಿ (ಕರಡಿ ಮಜಲು), ವೆಂಕಪ್ಪ ಕ್ವಾನ್ಯಾಗೋಳ (ಡೊಳ್ಳಿನಪದ), ಹನಮಂತ ಭಜಂತ್ರಿ (ಕರಡಿ ಮಜಲು), ರಮೇಶ ಬಡಿಗೇರ (ಭಜನೆ), ಲೇಶಪ್ಪ ಬಸರಕೋಡ (ಪುರವಂತಿಕೆ), ಗಿರಿಮಲ್ಲಪ್ಪ ಪೂಜಾರಿ (ಚಿತ್ರಕಲೆ), ಭಾರತಿ ಹಿರೇಮಠ (ಅಂಗಾಂಗ ದಾನ), ಮಹಾದೇವ ಮಳ್ಳಿಗೇರಿ (ಕೃಷಿ), ಅಡಿವೇಶ ಡೊಂಕಪ್ಪಗಳ, ರಮೇಶ ನಾಯ್ಕರ (ಸಮಾಜ ಸೇವೆ), ವಿನೋದ ಸಂದಿಮನಿ, ಪ್ರಭಾಸ ತಳವಾರ, ಗಂಗಾ ದಂಡಿನ, ಹನಮಂತ ಹುಲ್ಲಿಕೇರಿ, ಏಕನಾಥ ದಿವಟಗಿ ಬು (ಕ್ರೀಡೆ), ಸಂತೋಷ ಹಜೇರಿ (ಛಾಯಾಗ್ರಾಹಕ), ಅಭಯ ಮನಗೂಳಿ, ಗುರು ಹಿರೇಮಠ, ಹೇಮಾ ಕಡಿವಾಳ (ಮಾಧ್ಯಮ).

# ಶ್ರೀ ವೀರಭದ್ರೇಶ್ವರರ ಅಗ್ನಿ ಪ್ರವೇಶಿಸಿ ಹರಿಕೆ ತೀರಿಸಿಕೊಂಡ ಭಕ್ತಾದಿಗಳು



• **ಮಲ್ಲಮ್ಮ ನುಡಿ ವಾರ್ತೆಹುಮನಾಬಾದ:**

ಪಟ್ಟಣದ ಐತಿಹಾಸಿಕ ಶ್ರೀ ವೀರಭದ್ರೇಶ್ವರ ಜಾತ್ರಾಮಹೋತ್ಸವದ ನಿಮಿತ್ತ ಸೋಮವಾರದಂದು ಅಗ್ನಿ ತುಳಿಯುವ ಕಾರ್ಯಕ್ರಮ ಜರುಗಿತು. ಇಲ್ಲಿಯ ಥೇರು ಮೈದಾನದಿಂದ ಶ್ರೀ ವೀರಭದ್ರೇಶ್ವರ ದೇವಸ್ಥಾನದವರೆಗಿನ ರಸ್ತೆಯುದ್ಧಕ್ಕೂ ಜನಸಾಗರವೇ ನೆರೆದಿತ್ತು. ಸೋಮವಾರ ಬೆಳಿಗ್ಗೆ ನಡೆದ ಅಗ್ನಿ ತುಳಿಯುವ ಕಾರ್ಯಕ್ರಮದಲ್ಲಿ ಭಕ್ತರು ಶ್ರೀ ವೀರಭದ್ರೇಶ್ವರ ದೇವರಿಗೆ ಕಾಯಿ ಕರ್ಪೂರ ಸಲ್ಲಿಸಿ ಭಕ್ತಿಭಾವ ಮೆರೆದರು.

ಭಕ್ತಾಧಿಗಳು ವಿವಿಧ ರೀತಿಯಲ್ಲಿ ವೀರಭದ್ರೇಶ್ವರರ ಜೈಘೋಷದೊಂದಿಗೆ ಹರಕೆ ತೀರಿಸುವ ಮೂಲಕ ಭಕ್ತಿಯ ಪರಾಕಾಷ್ಠೆ ಮೆರೆದರು.

ಉದ್ಯೋಗ, ಸಂತಾನ, ಆಸ್ತಿ, ಸಂಪತ್ತು ಹಾಗೂ ಆರೋಗ್ಯ ಸೇರಿದಂತೆ ಹಲಾವಾರು ಇಷ್ಟಾರ್ಥಗಳನ್ನು ಈಡೇರಿಸುವಂತೆ ಕೆಂಡತುಂಬಿದ ಅಗ್ನಿಕುಂಡದಲ್ಲಿ ಭಕ್ತಿಯಿಂದ ಅಗ್ನಿ ಕುಂಡಕ್ಕೆ ಪ್ರವೇಶಿಸಿ ಭಕ್ತರು ಹರಕೆ ತೀರಿಸಿದರು. ಈ ಜಾತ್ರೆಯಲ್ಲಿ ಲಕ್ಷಾಂತರ ಭಕ್ತಾದಿಗಳು ಭಾಗವಹಿಸಿ ದರ್ಶನ ಪಡೆದು ಪುನಿತರಾದರು.

ವಿವಿಧೆಡೆ ಭಕ್ತರಿಗಾಗಿ ಅನ್ನ ಸಂತರ್ಪಣೆ ಏರ್ಪಡಿಸಲಾಗಿತ್ತು. ಮೂಲೆ ಮೂಲೆಗಳಿಂದ ಬಂದಂತಃ ಸಹಸ್ರಾರು ಭಕ್ತರು

ಅನ್ನದಾಸೋಹದಲ್ಲಿ ಪ್ರಸಾದ ಸ್ವೀಕರಿಸಿ ಪುನಿತರಾದರು. ಈ ಸಂದರ್ಭದಲ್ಲಿ ಪೊಲೀಸ್ ಬೀಗಿ ಬದೋಬಸ್ತ್ ಏರ್ಪಡಿಸಲಾಯಿತು.

# ಪತ್ರಕರ್ತರ ವಿಚಾರ ಸಂಕಿರಣ ರಾಜ್ಯ ಪ್ರಶಸ್ತಿ ಪ್ರದಾನ



• **ಮಲ್ಲಮ್ಮ ನುಡಿ ವಾರ್ತೆಕೊಪ್ಪಳ:**

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ (ರಿ), ಬೆಂಗಳೂರು ಹಾಗೂ ಭಟ್ಕಳ ತಾಲ್ಲೂಕು ಘಟಕ, ಉತ್ತರ ಕನ್ನಡ ಜಿಲ್ಲೆ ಇವರ ಸಹಯೋಗದಲ್ಲಿ ಇದೇ ಜ. 28ರಂದು ಭಟ್ಕಳ ನಗರದ ನಾಗಯಕ್ಷೆಧರ್ಮಾರ್ಥ ಸಭಾಭವನದಲ್ಲಿ ರಾಜ್ಯಮಟ್ಟದ ಪತ್ರಕರ್ತರ ವಿಚಾರ ಸಂಕಿರಣ ಹಾಗೂ ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ ಸಂಘಟನೆಯ ಕೊಪ್ಪಳ ಜಿಲ್ಲಾ ಘಟಕದ ಅಧ್ಯಕ್ಷ ಸುನಿಲ್ ಕುಮಾರ್ ಮಠದ ಅವರು ತಿಳಿಸಿದ್ದಾರೆ.

ಭಾನುವಾರ ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ಅವರು, ಕಾರ್ಯಕ್ರಮಕ್ಕೆ ಪರಮಪೂಜ್ಯ ಮಾರುತಿ ಗುರುಜಿ ಅವರು ದಿವ್ಯ ಸಾನಿಧ್ಯ ವಹಿಸಲಿದ್ದು, ಶ್ರೀ ವಿಶ್ವ ವೀರಾಂಜನೇಯ ಮಹಾಸಂಸ್ಥಾನಂ, ಹೇಮಪುರ ಮಹಾಪೀಠಮ್, ಶ್ರೀ-ಕ್ಷೇತ್ರ ಬಂಗಾರಮಕ್ಕಿ, ಹೊನ್ನಾವರದ ಧರ್ಮಾಧಿಕಾರಿ ಅವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಕಾರ್ಯಕ್ರಮವನ್ನು ಸುಪ್ರೀಂಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗಡೆ ಹಾಗೂ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಹಾಗೂ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವ ಮಂಕಾಳ ಎಸ್. ವೈದ್ಯ ಅವರು ಉದ್ಘಾಟಿಸವರು.

ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಯನ್ನು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಧ್ವನಿ (ರಿ) ಸಂಸ್ಥಾಪಕ ರಾಜ್ಯಾಧ್ಯಕ್ಷ ಬಂಗ್ಲೆ ಮಲ್ಲಿಕಾರ್ಜುನ ಅವರು ಮಾತನಾಡುವರು. ಭಟ್ಕಳ ತಾಲ್ಲೂಕು ಅಧ್ಯಕ್ಷ ಶಂಕರ ನಾಯ್ಕ ಅವರು ಅಧ್ಯಕ್ಷತೆ ವಹಿಸಲಿದ್ದಾರೆ.

ವಿಶೇಷ ಆಹ್ವಾನಿತರಾಗಿ ಗ್ಯಾರಂಟಿ ನ್ಯೂಸ್ ಚಾನಲ್‌ನ ಮುಖ್ಯಸ್ಥೆ ರಾಧಾ ಹಿರೇಗೌಡರ್ ಹಾಗೂ ಟಿ.ಎಸ್.ಆರ್. ಪ್ರಶಸ್ತಿ ಪುರಸ್ಕೃತ ಗಂಗಾಧರ ಮೊದಲಿಯಾರ್ ಅವರು ಭಾಗವಹಿಸಲಿದ್ದಾರೆ.

ಮುಖ್ಯಅತಿಥಿಗಳಾಗಿ ಮಾಜಿ ಸಚಿವ ಶಿವಾನಂದ ನಾಯ್ಕ, ತಂಜಿಂ ಸಂಸ್ಥೆಯ ಅಧ್ಯಕ್ಷ ಇನಾಯತುಲ್ಲಾ ಶಾಬಂದ್ರಿ, ಉಚ್ಚ ನ್ಯಾಯಾಲಯ ವಕೀಲ ನಾಗೇಂದ್ರ ನಾಯ್ಕ, ಸುಪ್ರೀಂ ಕೋರ್ಟ್ ವಕೀಲ ಮಂಜುನಾಥ ಮಾಡ್ಯಾಳ್, ಹಿರಿಯ ಪತ್ರಕರ್ತ ಜಗಲೂರು ಲಕ್ಷ್ಮಣ ರಾವ್,

ಭಟ್ಕಳ ತಹಶೀಲ್ದಾರ ನಾಗೇಂದ್ರ ಕೋಳಶೆಟ್ಟಿ, ಡೆಪ್ಯೂಟಿ ಸೂಪರಿಂಟೆಂಡೆಂಟ್ ಆಫ್ ಪೊಲೀಸ್ ಮಹೇಶ್ ಎಂ.ಕೆ., ಪುರಸಭೆಯ ಮುಖ್ಯಾಧಿಕಾರಿ ವೆಂಕಟೇಶ್ ನಾವುಡ ಸೇರಿದಂತೆ ಹಲವಾರು ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಇದಲ್ಲದೆ ವಿವಿಧ ಜಿಲ್ಲೆಗಳ ಅಧ್ಯಕ್ಷರು, ಹಿರಿಯ ಪತ್ರಕರ್ತರು ಹಾಗೂ ಮಾಧ್ಯಮ ಪ್ರತಿನಿಧಿಗಳು ಸಮಾರಂಭದಲ್ಲಿ ಉಪಸ್ಥಿತರಿರಲಿದ್ದಾರೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕುಕನೂರ ತಾಲ್ಲೂಕು ಘಟಕದ ಅಧ್ಯಕ್ಷ ಚಂದ್ರು ಆರ್. ಭಾನಾಪುರ, ಪ್ರಧಾನ

ಕಾರ್ಯದರ್ಶಿ ಬಸವರಾಜ ಕೊನಾರಿ, ಕೊಪ್ಪಳ ಜಿಲ್ಲಾ ಸಹ ಕಾರ್ಯದರ್ಶಿ ವೀರಯ್ಯ ವಿ ಹಿರೇಮಠ, ಉಪಾಧ್ಯಕ್ಷ ಮುರಾರಿ ಭಜಂತ್ರಿ, ಗೌರವಾಧ್ಯಕ್ಷ ಮಹೇಶ್ ಕಲ್ಮಠ,

ಭೀಮಾಶಂಕರ ಪಾಣೆಗಾಂವ, ಮುತ್ತು ತೊಂಟದಾರ್ಯ ಮಠ, ವೀರಯ್ಯ ಕುರ್ತಕೋಟಿ, ವಿಶ್ವನಾಥ ಪಟ್ಟಣಶೆಟ್ಟಿ, ಮಲ್ಲಯ್ಯ ಗದಗಿನ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ವೃದ್ಧಾಶ್ರಮದಲ್ಲಿ ಧ್ವಜಾರೋಹಣ



• **ಮಲ್ಲಮ್ಮ ನುಡಿ ವಾರ್ತೆ ಲಿಂಗಸಗೂರ:**

ಸ್ಥಳೀಯ ಸ್ವಾಮಿ ವಿವೇಕಾನಂದ ಯೂತ್ ಸೇವಾ ಸಂಘ ಲಿಂಗಸಗೂರ ಸಂಚಾಲಿತ ಮಹಾತ್ಮಗಾಂಧಿ ವೃದ್ಧಾಶ್ರಮದಲ್ಲಿ ಸಂಚಾಲಕ ಹಾಗೂ ಪತ್ರಕರ್ತ ಅಮರೇಶ ಕಲ್ಲೂರ ಧ್ವಜಾರೋಹಣ ನೇರವೇರಿಸಿದರು.

ನಂತರ ಮಾತನಾಡಿದ ಅವರು ಸುಮಾರು ವರ್ಷಗಳಿಂದ ಮಹಾತ್ಮ ಗಾಂಧಿ ವೃದ್ಧಾಶ್ರಮ ಲಿಂಗಸಗೂರ ಪಟ್ಟಣದಲ್ಲಿ ನೆಲೆ ಇಲ್ಲದ ವೃದ್ಧರ ಪಾಲಿಗೆ ವಯಸ್ಕರ ಮನೆಯಾಗಿ ಅವರ ನೆಮ್ಮದಿ ಜೀವನಕ್ಕೆ ಆಸರೆಯ ಊರುಗೋಲಾಗಿ ಸೇವೆ ಮಾಡುತ್ತ ಬಂದಿದ್ದು ತಾಲೂಕಿನ ಅನಾಥ ನೆಲೆ ಇಲ್ಲದೆ ವೃದ್ಧಾಪ್ಯದ ಬದುಕು ಸಾಗಿಸಲು ಸಂಕಷ್ಟಪಡುವ ಯಾವುದೇ ಹಿರಿಯ ಜೀವಗಳು ಯಾವುದೇ ಸಂದರ್ಭದಲ್ಲಿ ನಮ್ಮ ಮಹಾತ್ಮ ಗಾಂಧಿ ವೃದ್ಧಾಶ್ರಮದಲ್ಲಿ ಬಂದು ಆಶ್ರಯ ಪಡೆಯಬಹುದು ಎಂದು ಹೇಳಿದರು.

ನಂತರ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವರಾಜ ಕೆಂಭಾವಿ ಮಾತನಾಡಿ ಕುಟುಂಬದ ಪ್ರೀತಿ ಮತ್ತು ವಾತ್ಸಲ್ಯ ಕಳೆದುಕೊಂಡು ಅನಿವಾರ್ಯ ಪರಿಸ್ಥಿತಿಯಲ್ಲಿ ವೃದ್ಧಾಶ್ರಮದಲ್ಲಿ ಕೊನೆಗಾಲದ ಜೀವನವನ್ನು ಕಳೆಯತ್ತಿರುವ ಹಿರಿಯ ಜೀವಗಳ ನೆಮ್ಮದಿ ಜೀವನಕ್ಕೆ ದಾರಿದೀಪವಾದ ಮಹಾತ್ಮಗಾಂಧಿ ಯೂತ್ ಸೇವಾ ಸಂಸ್ಥೆಯವರು ಇನ್ನೂ ಹೆಚ್ಚಿನ ಉತ್ತಮ ಸೇವೆ ನೀಡಲಿ ಸಂಕಷ್ಟದಲ್ಲಿರುವ ಹಿರಿಯ ಜೀವಗಳು ಯಾರು ಇಲ್ಲ ನಾವು ಅನಾಥರು ಎಂಬ ಜಿಜ್ಞಾಸೆ ಪಡದೆ ಆಸರೆ ಇಲ್ಲದೆ ಇರುವವರು ಲಿಂಗಸಗೂರ ಪಟ್ಟಣದ ರೆಡ್ಡೆರ ಬ್ಯಾಂಕ್ ಎದುರುಗಡೆ ಇರುವ ಮಹಾತ್ಮಗಾಂಧಿ ವೃದ್ಧಾಶ್ರಮದಲ್ಲಿ ಬಂದು ಆಶ್ರಯ ಪಡೆಯುವಂತೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಸಂಚಾಲಕ ಅಮರೇಶ ಕಲ್ಲೂರ, ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವರಾಜ ಕೆಂಭಾವಿ, ಪ್ರಧಾನಕಾರ್ಯದರ್ಶಿ ಗಂಗಾಧರ ಗುಂತಗೋಳ, ಲಕ್ಷ್ಮಣ ಬಾರಿಕೇರ, ಗೊರೇಬಾಳ, ಯಲ್ಲಪ್ಪ, ಪ್ರಮೋದ ಕುಲಕರ್ಣಿ, ರಾಜೇಶ ಮಾಣಿಕ್, ಶ್ರೀಕಾಂತ, ಕಿಶೋರ ಮುತಾಲಿಕ್, ಆನಂದ ಸೇರಿದಂತೆ ಅನೇಕರು ಹಾಜರಿದ್ದರು.

# ಸಂಘಟನೆಗಳು ಸಮಾಜಮುಖಿಯಾಗಿರಲಿ



• **ಮಲ್ಲಮ್ಮ ನುಡಿ ವಾರ್ತೆ ಕಲಘಟಗಿ:**

ಸಂಘಟನೆಗಳು ಸಮಾಜ ಮುಖಿಯಾಗಿ ಕಾರ್ಯ ನಿರ್ವಹಿಸಿದರೆ ಪ್ರತಿಯೊಂದು ಊರು ಗ್ರಾಮ ಸ್ವಚ್ಚತೆ, ಮತ್ತು ನೈರ್ಮಲ್ಯ ಮುಕ್ತವನ್ನಾಗಿಸ ಬಹುದು ಎಂದು ಮಾದರಿ ಕೇಂದ್ರ ಶಾಲೆ ಮುಖ್ಯೋಪಾದ್ಯಯರಾದ ವೈ.ಜಿ ಭಗವತಿ ಮಾತನಾಡಿದರು.

ಅವರು ಕರ್ನಾಟಕ ಸಂಗ್ರಾಮ ಸೇನೆ ತಾಲೂಕಾ ಘಟಕದ ವತಿಯಿಂದ ಶಾಲಾ ಸ್ವಚ್ಚತಾ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮಾತನಾಡಿ ನಿಮ್ಮ ಸಂಘಟನೆಯಂತೆ ಉಳಿದ ಸಂಘಟನೆಗಳು ಇತರಹದ ಕಾರ್ಯಗಳನ್ನು ನಿರ್ವಹಿಸಿದರೆ ಸರ್ಕಾರದ ಮೇಲೆ ಅವಲಂಬನೆಯಾಗದೆ ಸಮಾಜದ ಸುಧಾರಣೆ ಕೂಡ ಆಗುತ್ತದೆ ಎಂದರು.

ಸಂಘಟನೆಯ ಅಧ್ಯಕ್ಷ ಸಾತಪ್ಪ ಕೂಂಕುರ ಮಾತನಾಡಿ ಕೇವಲ ಶಾಲೆಮಾತ್ರ ಸ್ವಚ್ಚತೆಗೊಳಿಸದೇ ನಮ್ಮ ಊರಿನ ಪಾಳು ಬಿದ್ದ ಬಾವಿ, ಕೆರೆ ಐತಿಹಾಸಿಕ ದೇವಸ್ಥಾನದ ಆವರಣಗಳ ಸ್ವಚ್ಚತೆಯನ್ನು ಬರುವ ದಿನಮಾನಗಳಲ್ಲಿ ನಮ್ಮ ಸಂಘಟನೆವತಿಯಿಂದ ಮಾಡುತ್ತೆವೆ ಇ ಸಂಧರ್ಬದಲ್ಲಿ ಎಲ್ಲ ಕನ್ನಡಪರ ಸಂಘಟನೆಗಳ ಒಕ್ಕೂಟದಲ್ಲಿ ಮಾಡಲಾಗುವುದು ಎಂದರು.

ಇ ಸಂಧರ್ಬದಲ್ಲಿ ಸಂಘಟನೆಯ ಉಪಾದ್ಯಕ್ಷ ಮಹಾಂತೇಶ ಹುಲ್ಲಂಬಿ, ಸುಭಾಸ ಕಂಪ್ಲಿಕೊಪ್ಪ, ರಾಮು ಲಮಾಣೀ, ಸಾತಪ್ಪ ಮಾಂಗ್ಲಿ, ಹನಮಂತ ಪಾಚಂಗೆ, ಫಕ್ಕಿರಪ್ಪ ಗಾಮಣ್ಣವರ, ಮಂಜುನಾಥ ದುಗ್ನಿಕೇರಿ, ಮಂಜುನಾಥ ಕಾಸರ, ಪ್ರಭು ರಂಗಾಪೂರ, ಸೋಮಲಿಂಗ ಒಡೆಯರ, ಮಾರುತಿ ಸಾಲಿ, ದತ್ತಾತ್ರೇಯ ಭಟ್, ವಿರಣ್ಣ ಕುಬಸದ, ಬಸವರಾಜ ಬೇಗೂರಶೆಟ್ರ, ಸುರೇಶ ಕ್ಯಾರಕೊಪ್ಪ, ಲಕ್ಷ್ಮಣ ಕ್ಯಾರಕೊಪ್ಪ. ನಾಗಪ್ಪ ಅಂಗಡಿ ಮಂಜುನಾಥ ಮಾಳಗಿ, ಶಿಕ್ಷಕರಾದ ಎಸ್.ಐ ಚಿಕ್ಕನರ್ತ, ಬಸವರಾಜ ಉಳ್ಳಾಗಡ್ಡಿ, ಇದ್ದರು.

# ಜನವರಿ 28ರಂದು ಬಾಡಿ ಬಿಲ್ಡಿಂಗ್ ಸ್ಪರ್ಧೆ

• **ಮಲ್ಲಮ್ಮ ನುಡಿ ವಾರ್ತೆ ರಾಯಚೂರು :**

ಮಿಸ್ಟರ್ ಕಲ್ಯಾಣ ಕರ್ನಾಟಕ 2026 ರಾಜ್ಯಮಟ್ಟದ ಪುರುಷರ ದೇಹದಾರ್ಢ್ಯ ಸ್ಪರ್ಧೆಯು ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಾನಗರ ಪಾಲಿಕೆ ರಾಯಚೂರು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಎಡೆದೊರೆ ನಾಡು ರಾಯಚೂರು ಜಿಲ್ಲಾ ಉತ್ಸವ-2026ರ ಅಂಗವಾಗಿ ಜನವರಿ 28ರ ಸಂಜೆ 4 ಗಂಟೆಗೆ ನಗರದ ಮಹಾತ್ಮಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿದೆ. ಆಸಕ್ತ ದೇಹದಾರ್ಢ್ಯ ಪಟುಗಳು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಅಪರ ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸಂವಿಧಾನಕ್ಕೆ ನಮಸ್ಕರಿಸಿ ದೇಶದ ಪ್ರಗತಿ ಕೈಜೋಡಿಸೋಣ: ಬಾದರ್ಲಿ




ಸಿಂಧನೂರು;

ಭಾರತದ ಸಂವಿಧಾನದ ಮೌಲ್ಯಗಳನ್ನು ಗೌರವಿಸೋಣ, ವೈವಿಧ್ಯತೆಯಲ್ಲಿ ಏಕತೆ, ನಮ್ಮೆಲ್ಲರ ಶಕ್ತಿ, ನಮ್ಮ ಗುರುತು ಎನ್ನುವುದು ನಮ್ಮ ಜಾತಿ, ಧರ್ಮವಲ್ಲ, ನಾವು ಭಾರತೀಯರು ಎನ್ನುವುದೇ ನಮ್ಮ ಗುರುತು, ನಾವು ಭಾರತೀಯರು ಎಂದು ಹೆಮ್ಮೆ ಪಡೋಣ. ನಮ್ಮ ದೇಶದ ಹೆಮ್ಮೆಯ ಸಂವಿಧಾನಕ್ಕೆ ನಮಸ್ಕರಿಸಿ, ದೇಶದ ಪ್ರಗತಿಗೆ ಕೈಜೋಡಿಸೋಣ ಮತ್ತು ದೇಶ ಅಭಿವೃದ್ಧಿ ಹೊಂದಬೇಕಾದರೆ ಕಠಿಣವಾದ ಕಾನೂನುಗಳು ಮೊದಲ ಜಾರಿಗೆಬರಬೇಕು. ದೇಶದ ಕಾನೂನಿಗೆ ಬೆಲೆ ಕೊಡತಕ್ಕಂಥ ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಬೇಕು ಎಂದು ಶಾಸಕ ಹಂಪನಗೌಡ ಬಾದರ್ಲಿ ಹೇಳಿದರು.

ನಗರದ ತಾಲೂಕು ಕ್ರೀಡಾಂಗಣದಲ್ಲಿ ತಾಲೂಕು ಆಡಳಿತ ಸಿಂಧನೂರು ವತಿಯಿಂದ ಆಯೋಜಿಸಿದ್ದ 77 ನೇ ಗಣರಾಜ್ಯೋತ್ಸವ ಕಾರ್ಯಕ್ರಮವನ್ನು ಅಧ್ಯಕ್ಷತೆ ವಹಿಸಿ ಮಾತನಾಡಿದರು

ಬಹಳಷ್ಟು ಯುವ ವಿದ್ಯಾರ್ಥಿ ವಿದ್ಯಾರ್ಥಿನಿಯರು ಇಲ್ಲಿ ಕುಳಿತು

ಕೈಗೊಂಡಿದ್ದೀರಿ. ನಿಮ್ಮ ಭವಿಷ್ಯ ನಿಮ್ಮ ಕೈಯಲ್ಲಿದೆ ಅ ಭವಿಷ್ಯವನ್ನು ನಿಮ್ಮ ಕನಸುಗಳೊಂದಿಗೆ ಇತ್ಯರ್ಥ ಮಾಡಿ ಕೊಳ್ಳಲು ಬೇಕಾದ ಅವಶ್ಯಕತೆ ಇದೆ ಉತ್ತಮ ಗುಣಮಟ್ಟದ ಶಿಕ್ಷಣವನ್ನು ಪಡೆದುಕೊಂಡು ದೇಶದ ಸ್ವಾಭಿಮಾನ ಬೆಳೆಸಿಕೊಂಡು ಸದ್ದು ಪ್ರಜ್ಞೆಯಾಗಿ ನಿಮ್ಮ ಗುರಿಯನ್ನು ಮುಟ್ಟುವಂಥದ್ದಾಗಬೇಕು ಎಂದರು

ತಾಲೂಕಿನ ಮತ್ತು ರಾಜ್ಯದಲ್ಲಿ ನಮ್ಮೆಲ್ಲರ ನೆಚ್ಚಿನ ಮುಖ್ಯಮಂತ್ರಿಗಳು ಸಿದ್ದರಾಮಯ್ಯನವರು ಹಾಗೂ ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಉತ್ತಮ ಆಡಳಿತವನ್ನು ನೀಡುವುದರ ಜೊತೆಗೆ ಹೊಸ ಹೊಸ ಯೋಜನೆಗಳ ಅನುಷ್ಠಾನಕ್ಕೆ ತಂದು ಇವತ್ತು ಕಾರ್ಯ ರೂಪಕ್ಕೆ ತರುವಂತೆ ಕೆಲಸ ರಾಜ್ಯ ಸರ್ಕಾರ ಮಾಡುತ್ತಿದೆ ಎಂದರು.

ನಮ್ಮ ರಾಜ್ಯದಲ್ಲಿ ಆರ್ಥಿಕ ತೊಂದರೆ ಇದೆ ಏಕೆಂದರೆ ಎಲ್ಲ ರಾಜ್ಯದಲ್ಲಿ ಇದು ಒಂದು ರಾಜ್ಯವಾಗಿದೆ. ಎಂದರೆ ಇದಕ್ಕೆ ಕಾರಣ ರಾಜಕಾರಣ. ಮತಯಾಚನೆ ದೇಶದ ಪ್ರಗತಿ ಯಾವ ರೀತಿಯಲ್ಲಿ ಸಾಗಬೇಕಾದಗ ದೇಶದ ಶಾಸಕಾಂಗ. ಕಾರ್ಯಾಂಗ ನ್ಯಾಯಾಂಗದಲ್ಲಿ ಚರ್ಚೆ ಮಾಡಿ ದೇಶವನ್ನು ಅಭಿವೃದ್ಧಿ ಪಥದಲ್ಲಿ ಸಾಗಬೇಕಾಗಿದೆ ಎಂದು ತಿಳಿಸಿದರು.

ಸಿಂಧನೂರು ಮತಕ್ಷೇತ್ರದಲ್ಲಿ ಹಿಂದೆ ನೋಡಿದಾಗ ಇವತ್ತು ನೋಡಿದಾಗ ಕಲಬುರ್ಗಿ ವಿಭಾಗದಲ್ಲಿ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕ ಅತಿ ವೇಗವಾಗಿ ಉತ್ತಮ ಆಡಳಿತದಲ್ಲಿ ಬೆಳೆಯುತ್ತಿದೆ ಎಂದರೆ ತಪ್ಪಾಗಲಾರದು ಮತ್ತು ಈ ವರ್ಷ ಸಹ ವಿದ್ಯಾರ್ಥಿಗಳು ಕ್ರೀಡೆಯಲ್ಲಿ ತಾಲೂಕು -ರಾಜ್ಯ ಮಟ್ಟದಲ್ಲಿ ಪ್ರಶಸ್ತಿ ಪಡೆದುಕೊಂಡಿ-ದ್ದು ಹೆಮ್ಮೆ ಪಡುವ ವಿಚಾರವಾಗಿದೆ ಮತ್ತು ತಾಲೂಕಿನಲ್ಲಿ ಇನ್ನಷ್ಟು ಶಿಕ್ಷಣ ಕ್ಷೇತ್ರದಲ್ಲಿ ಬದಲಾವಣೆ ತರಲು ಪ್ರಯತ್ನ ಮಾಡುತ್ತೇನೆ ಎಂದರು. ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಈ ಸಂಧರ್ಭದಲ್ಲಿ. ಎಂಎಲ್ಸಿ ಬಸನಗೌಡ ಬಾದರ್ಲಿ ಮಾತನಾಡಿದರು. ಟಿ.ಎ.ಎಂ ಸಿ. ಅಧ್ಯಕ್ಷ ಶರಣಪ್ಪ ರೆಡ್ಡಿ. ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ ದೊಡ್ಡ ಬಸವರಾಜ ತಾಲೂಕು ತಹಶೀಲ್ದಾರ್ ಅರುಣ್ ಕುಮಾರ್ ಎಚ್ ದೇಸಾಯಿ. ತಾಲೂಕು ಪಂ.ಇಒ ಚಂದ್ರಶೇಖರ ಡಿವೈಎಸ್ಪಿ ಚಂದ್ರಶೇಖರ ಹಾಗೂ ವಿವಿಧ ಇಲಾಖೆಗಳ ಅಧಿಕಾರಿಗಳು ಸಿಬ್ಬಂದಿ ವರ್ಗ ಮತ್ತು ವಿವಿಧ ಶಾಲಾ ಕಾಲೇಜುಗಳ ಶಿಕ್ಷಕರ ವೃಂದ ಮತ್ತು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

# ವಿವಿಧ ಕಾಮಗಾರಿಗೆ ಪೂಜೆ ನೆರವೇರಿಸಿದ ಬಸನಗೌಡ ಬಾದರ್ಲಿ



• **ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು;**

ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ ಅವರು ತಮ್ಮ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದ ಅಡಿಯಲ್ಲಿ ಸಿಂಧನೂರು ತಾಲೂಕಿನ ಒಳಬಳ್ಳಾರಿ ಗ್ರಾಮದ ನಡೆದಾಡುವ ದೇವರೆಂದೇ ಪ್ರಸಿದ್ಧರಾದ ಶ್ರೀ ಮ.ನಿ.ಪ್ರ ಚನ್ನಬಸವ ತಾತನವರ 43ನೇಯ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಶ್ರೀಮಠದಲ್ಲಿ ನನ್ನ ಅನುದಾನದಲ್ಲಿ "ಸಭಾಭವನ" ಕಟ್ಟಡದ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಹರಗುರುಚರ ಮೂರ್ತಿಗಳಿಂದ ನೆರವೇರಿಸಲಾಯಿತು.

ಸಿಂಧನೂರು ತಾಲೂಕಿನ ರವುಡಕುಂದಾ ಗ್ರಾಮದ ವೇದ ಪಾಠ ಶಾಲಾ, ಸಂಸ್ಥಾನ ಹಿರೇಮಠದ ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪೂಜ್ಯ ಗುರುಗಳೊಂದಿಗೆ ಭೂಮಿ ಪೂಜೆ ನೆರವೇರಿಸಲಾಯಿತು. ಸಿಂಧನೂರು ತಾಲ್ಲೂಕಿನ ರಾಮ ಕ್ಯಾಂಪಿನ ಸಾರ್ವಜನಿಕ ಸಮುದಾಯ ಭವನ ಕಾಮಗಾರಿಯ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಭೂಮಿ ಪೂಜೆ ನೆರವೇರಿಸಿ. ನಂತರ ಮಾತನಾಡಿದ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ ಅವರು ಕಾಮಗಾರಿಗಳು ಕೆಲಸ ಗುಣಮಟ್ಟದಿಂದ ಕೂಡಿರಬೇಕು ಯಾವುದೇ ಕಾರಣಕ್ಕೂ ಕಳಪೆ ಕಾಮಗಾರಿ ಯಾಗದಂತೆ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಎಚ್ಚರ ವಹಿಸಬೇಕು. ಮತ್ತು ಸ್ಥಳೀಯ ಸಾರ್ವಜನಿಕರಿಗೆ ತೆ-ಊಂದರೆಯಾಗದಂತೆ ನೋಡಿಕೊಂಡು ಕಾಮಗಾರಿಗಳು ಕೆಲಸ ಮಾಡಬೇಕು ಯಾವುದೇ ಸಾರ್ವಜನಿಕರಿಂದ ಕಂಪ್ಲೀಟ್ ಬರುಕೂಡದು ಎಂದು ತಿಳಿಸಿದರು. *ಬಾಕ್ಸ್*

ಈ ವೇಳೆ ವೆಂಕಟೇಶ್ ರಾಗಲಪರ್ವಿ, ಯಂಕನಗೌಡ ಗಿಣಿವಾರ, ಶರಣಯ್ಯ ಕೋಟೆ, ಹೊನ್ನನ್ನಗೌಡ ಬೆಳಗುರ್ಕಿ, ಪಂಪಾಪತಿ ಅಲಬನುರು, ಶಿವಬಸನಗೌಡ, ರಂಗನಗೌಡ, ಚಂದ್ರಶೇಖರ್, ಶ್ಯಾಮಿದ ಸಬ್, ಕನಕಪ್ಪ, ಸದ್ದಾಂ, ಅಮರೇಶ್ ಗಿರಿಜಲಿ, ರಾಮಲಿಂಗಾರೆಡ್ಡಿ ಬೆಳಗುರ್ಕಿ, ಚನ್ನಬಸವ ಪನ್ನೂರು ಹಾಗೂ ಇತರರು ಉಪಸ್ಥಿತರಿದರು.





ಬಸವಕಲ್ಯಾಣದಲ್ಲಿ ಮಲ್ಲಮ್ಮ ನುಡಿ ಪ್ರಾದೇಶಿಕ ಪತ್ರಿಕೆ ಓದುತ್ತಿರುವದು ದೃಶ್ಯ ಕಾಣಬಹುದು.

# ವಿವಿಧೆಡೆ 77ನೇ ಗಣರಾಜ್ಯೋತ್ಸವ ಸಂಭ್ರಮಾಚರಣೆ

• ಮಲ್ಲಮ್ಮ ನುಡಿ ವಾರ್ತೆ ಕೆಂಭಾವಿ

ಪಟ್ಟಣ ಸೇರಿದಂತೆ ವಲಯದಲ್ಲಿ ಸೋಮವಾರ 77ನೇ ಗಣರಾಜ್ಯೋತ್ಸವ ಸಡಗರ ಸಂಭ್ರಮದಿಂದ ಆಚರಿಸಲಾಯಿತು.

ಪುರಸಭೆಯಲ್ಲಿ ನಡೆದ ಗಣರಾಜ್ಯೋತ್ಸವ ದ್ವಜಾರೋಹಣವನ್ನು ಅಧ್ಯಕ್ಷೆ ಪ್ರಿಯಾ ರಾಮನಗೌಡ ಪೊ.ಪಾಟೀಲ್ ನೆರವೇರಿಸಿದರು. ಉತ್ಸವದ ನಿಮಿತ್ಯ ಪುರಸಭೆ ಹಾಗೂ ಆವರಣ ಸೇರಿದಂತೆ ತಳಿರು ತೋರಣ ಬಣ್ಣದ ಬಲೂನಗಳಿಂದ ಅಲಂಕರಿಸಲಾಗಿತ್ತು. ದ್ವಜಾರೋಹಣದ ನಂತರ ಪುರಸಭೆ ಆವರಣದಲ್ಲಿ ವಿವಿಧ ಶಾಲಾ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಕ್ಕಳಿಂದ ನಡೆದ ದೇಶಭಕ್ತಿ ಗೀತೆಗಳ ನೃತ್ಯ, ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರ ಅಭಿನಯ, ಛದ್ಮವೇಶ, ಸ್ವಾತಂತ್ರ್ಯ ಸಂಗ್ರಾಮಗಳ ಸನ್ನಿವೇಶಗಳ ರೂಪಕ, ಜನಪದ ನೃತ್ಯ ಹೀಗೆ ಮಕ್ಕಳಿಂದ ಮೂಡಿಬಂದ ಸಾಂಸ್ಕೃತಿಕ ಕಾರ್ಯಕ್ರಮಗಳು ರಾಷ್ಟ್ರ ಭಕ್ತಿ, ನಾಡು ನುಡಿ ಶ್ರೀಮಂತಿಗೆಗೆ ಸಾಕ್ಷಿಯಾಗಿ-ತ್ತು. ಕಾರ್ಯಕ್ರಮದಲ್ಲಿ ಪುರಸಭೆ ಉಪಾಧ್ಯಕ್ಷೆ ಲಕ್ಷ್ಮೀಬಾಯಿ ಕಂಬಾರ, ಮುಖ್ಯಾಧಿಕಾರಿ ಮಹ್ಮದ್ ಯೂಸೂಫ್, ಪುರಸಭೆ ಸದಸ್ಯರು, ಆಶ್ರಯ ಸಮಿತಿ ಸದಸ್ಯರು, ನಾಮನಿರ್ದೇಶನ ಸದಸ್ಯರು, ಪುರಸಭೆ ಸಿಬ್ಬಂದಿ, ಶಾಲಾ ಶಿಕ್ಷರು, ಮಕ್ಕಳು, ಸೇರಿದಂತೆ





ಸಾರ್ವಜನಿಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಶಿಕ್ಷಕ ಬಂದೇನವಾಜ ನಾಲ್ತವಾಡ ನಡೆಸಿಕೊಟ್ಟರು.

ಪಟ್ಟಣದ ಗಂಗೂಬಾಯಿ ಶಾಂತಗೌಡ ಪೊ. ಪಾಟೀಲ್ ಮೆಮೋರಿಯಲ್ ಪದವಿ ಕಾಲೇಜಿನಲ್ಲಿ ನಡೆದ ದ್ವಜಾರೋಣವನ್ನು ಪ್ರಾಂಶುಪಾಲ ನಾಗಪ್ಪ ಚಾವಲ್ಕರ್ ನೆರವೇರಿಸಿದರು. ಉಪನ್ಯಾಸಕ ಸಿಬ್ಬಂದಿ ಇದ್ದರು. ಸರಕಾರಿ ಪ. ಪೂ ಕಾಲೇಜಿನಲ್ಲಿ ಪ್ರಾಚಾರ್ಯ ಅಶೋಕ ಕುಮಾರ ತಳಕೇರಿ ದ್ವಜಾರೋಹಣ ಮಾಡಿದರು. ಸರಕಾರಿ ಪ್ರೌಢ ಶಾಲೆ, ಕನ್ಯಾ ಪ್ರೌಢ ಶಾಲೆ, ಮುರಾರ್ಜಿ ದೇಸಾಯಿ ವಸತಿ ಶಾಲೆ, ಸರಕಾರಿ ಉರ್ದು ಪ್ರೌಢ ಶಾಲೆ ಸೇರಿದಂತೆ ವಲಯ ಎಲ್ಲಾ ಪ್ರಾಥಮಿಕ ಹಾಗೂ ಪ್ರೌಢ ಶಾಲಾ ಕಾಲೇಜುಗಳಲ್ಲಿ ಮುಖ್ಯ ಗುರುಗಳು ಗಣರಾಜ್ಯೋತ್ಸವದ ದ್ವಜಾರೋಹಣ ನೆರವೇರಿಸುದರು.

ಸಮುದಾಯ ಅರೋಗ್ಯ ಕೇಂದ್ರದ ದ್ವಜಾ-ರೋಣ ವೈಧ್ಯಾಧಿಕಾರಿ ಡಾ. ಗಿರೀಶ ಕುಲ್ಕರ್ಣಿ ನೆರವೇರಿಸಿದರು, ಕೆಂಭಾವಿ ಪೊಲಿಸ್ ಠಾಣೆಯಲ್ಲಿ ಪಿ.ಎಸ್.ಐ ಅಮೋಜ್ ಕಾಂಬಳೆ ನೆರವೇರಿಸಿದರು. ಕ್ರೈಮ್ ಪಿಎಸ್ಐ ಹಣಮಂತ ಬಿ ಸಿದ್ದಾಪುರ ಹಾಗೂ ಪೊಲೀಸ್ ಸಿಬ್ಬಂದಿ ಇದ್ದರು. ನಾಡ ಕಛೇರಿಯಲ್ಲಿ ಉಪ ತಹಸೀಲ್ದಾರ ಪ್ರವೀಣಕುಮಾರ ಸಜ್ಜನ ದ್ವಜಾರೋಹಣ ಮಾಡಿದರು, ಆರ್.ಐ ರಾಜೇಸಾಬ್ ಕಂದಗಲ್ ವಲಯದ ಗ್ರಾಮ ಲೆಕ್ಕಿಗರು ಸಿಬ್ಬಂದಿ ಇದ್ದರು. ಉಳಿದಂತೆ ವಲಯದ ಸರಕಾರಿ ಹಾಗೂ ಖಾಸಗಿ ಶಿಕ್ಷಣ ಸಂಸ್ಥೆಗಳು ಸರಕಾರಿ ಕಛೇರಿಗಳಲ್ಲಿ ಗಣರಾಜ್ಯೋತ್ಸವ ಅದ್ದೂರಿಯಾಗಿ ಆಚರಿಸಲಾಯಿತು.

### ಗೌರವದ ಸನ್ಮಾನ

ಪುರಸಭೆಯಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಇತ್ತೀಚಿಗೆ ರಾಜ್ಯಮಟ್ಟದ ಕಬ್ಬಡ್ಡಿಯಲ್ಲಿ ಉತ್ತಮ ಪ್ರದರ್ಶನ ನೀಡಿದ ಪರಸನಹಳ್ಳಿ ಶಾಲೆಯ ವಿದ್ಯಾರ್ಥಿಗಳಿಗೆ ಹಾಗೂ ಜಿಲ್ಲಾ ಪಂಚಾಯತ್ ಯೋಜನೆ ಸಮಿತಿಯ ಸದಸ್ಯರಾಗಿ ಆಯ್ಕೆಯಾದ ಆರಿಫ್ ಹುಸೇನ್ ಖಾಜಿ ಹಾಗೂ ರವಿಶಂಕರ ಸೊನ್ನದ ಅವರನ್ನು ಪುರಸಭೆ ವತಿಯಿಂದ ಗೌರವಿಸಿ ಸನ್ಮಾನಿಸಲಾಯಿತು.



## ಗಣರಾಜ್ಯೋತ್ಸವ: ಉಚಿತ ಆರೋಗ್ಯ ತಪಾಸಣೆ

• ಮಲ್ಲಮ್ಮ ನುಡಿ ವಾರ್ತೆ ಬೆಂಗಳೂರು

ಮಧ್ಯಮವರ್ಗ ಹಾಗೂ ಕಾರ್ಮಿಕ ಶ್ರಮಿಕರ, ಬಡಜನತೆಯ ಪರವಾಗಿ ಇರುವ ಏಕೈಕ ಪಕ್ಷ ಅಂದರೆ ಅದು ಕಾಂಗ್ರೆಸ್ ಪಕ್ಷ ಮಾತ್ರ', ಎಂದು ಜಿಬಿಎ ಆಕಾಂಕ್ಷಿ ಕಾಂಗ್ರೆಸ್ ಮುಖಂಡ ರಮೇಶ್ ಗೌಡ್ರು ಹೇಳಿದರು.

ರಾಜರಾಜೇಶ್ವರಿನಗರ ವಿಧಾನಸಭಾ ಕ್ಷೇತ್ರದ ಲಗ್ಗೆರೆ ವಾರ್ಡ್ ನ ವಿಧಾನಸೌಧ ಲೇಔಟ್ ಸರ್ಕಲ್ ಹಾಗೂ ಸೈನಿಕ್ ಪಬ್ಲಿಕ್ ಶಾಲೆ ಬಳಿ ಪ್ರಜಾ ಸೇವಾ ಮಾರ್ಗ ಟ್ರಸ್ಟ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಾಗೂ ಗಂಧದಗುಡಿ ಕಲಿಯುಗ ಕಟ್ಟಡದ ಅಧ್ಯಕ್ಷ ವಂಶಿ ನೇತೃತ್ವದಲ್ಲಿ ಹಾಗೂ ಅಸಂಘಟಿತ ಕಾರ್ಮಿಕ ಸಂಘದ ಮೊದಲನೇ ವಾರ್ಷಿಕೋತ್ಸವದ ಅಂಗವಾಗಿ ಕಾರ್ಮಿಕ ಸದಸ್ಯತ್ವ ಹೊಂದಿರುವವರಿಗೆ ಕಾರ್ಮಿಕ ಕಿಟ್, ಪತ್ರ, ಮಹಿಳೆಯರಿಗೆ ಸೀರೆ ವಿತಣೆಯನ್ನು ಲಗ್ಗೆರೆ ಜಿಬಿಎ ಆಕಾಂಕ್ಷಿ ಕಾಂಗ್ರೆಸ್ ಮುಖಂಡ ರಮೇಶ್ ಗೌಡ್ರು ವಿತರಿಸಿ ಅವರು ಮಾತನಾಡಿದರು.

ರಾಜಪ್ರಭುತ್ವವು ಅಂತ್ಯವಾಗಿ ಭಾರತದಲ್ಲಿ ಜನವರಿ



26 ದೇಶದ ಸಂವಿಧಾನ ಅಸ್ತಿತ್ವಕ್ಕೆ ಬಂದ ದಿನವಾಗಿದ್ದು ಭಾರತೀಯರಿಗೆ ಹೆಮ್ಮೆಯ ದಿನವಾಗಿದೆ. ಆಗಸ್ಟ್ 15 ಬ್ರಿಟಿಷರಿಂದ ತಾತ್ವಿಕವಾಗಿ ಸ್ವಾತಂತ್ರ್ಯ ಪಡೆದುಕೊಂಡ ದಿನವಾದರೆ, 1950 ಜನವರಿ 26 ರಂದು ಭಾರತ ತನ್ನ ಸಂವಿಧಾನವನ್ನು ಜಾರಿಗೊಳಿಸಲಾಗಿದ್ದು, ರಾಜಪ್ರಭುತ್ವವನ್ನು ತ್ಯಜಿಸಿ ಪ್ರಜಾಪ್ರಭುತ್ವವು ಅಸ್ಥಿತ್ವಕ್ಕೆ ಬಂದ ದಿನವಾಗಿದೆ. ಹೀಗಾಗಿ ಈ ದಿನವು ಸ್ವಾತಂತ್ರ್ಯ ದಿನದಷ್ಟೇ ಸಂಭ್ರಮದಿಂದ ಗಣರಾಜ್ಯೋತ್ಸವವನ್ನು ಆಚರಿಸಲಾಗುತ್ತದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಯೋಗೀಶ್ ಗೌಡ, ಡಾ. ಜಿ ಎ ಮಂಜುನಾಥ್, ಜೀವಿತ್ ಮಂಜುನಾಥಗೌಡ, ಕೃಷ್ಣ ಮೂರ್ತಿ, ನರಸಿಂಹಯ್ಯ, ವಿಮಲ ಮತ್ತಿತರರು ಇದ್ದರು.

## ಕರವೇ ಬಣದಿಂದ ಸಮಾಜಮುಖಿ ಕಾರ್ಯ

• ಮಲ್ಲಮ್ಮ ನುಡಿ ವಾರ್ತೆ ಕುಕನೂರ

ಕರ್ನಾಟಕ ರಕ್ಷಣಾ ವೇದಿಕೆಯ ಸ್ವಾಭಿಮಾನಿ ಬಣ ಕೇವಲ ನಾಮಫಲಕ್ಕೆ ಸೀಮಿತವಾಗಿದೆ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಕೊಂಡಿದೆ ಎಂದು ಸ್ವಾಭಿಮಾನಿ ಬಣದ ಉತ್ತರ ಕರ್ನಾಟಕದ ಉಸ್ತುವಾರಿ ಭರತ ರಾಮೇಗೌಡ ಹೇಳಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಆಯೋಜಿಸಿದ್ದ ಕುಕನೂರು ತಾಲೂಕ ಕಾರ್ಮಿಕ ಘಟಕದ ನೂತನ ಪದಾಧಿಕಾರಿಗಳ ಆಯ್ಕೆ ಕಾರ್ಯಕ್ರಮದಲ್ಲಿ ಭರತ ರಾಮೇಗೌಡ ಮಾತನಾಡುತ್ತಾ ರಾಜ್ಯದಲ್ಲಿ ಎಷ್ಟೋ ಸಂಘಟನೆಗಳು ಕೇವಲ ನಾಮಫಲಕಕ್ಕೆ ಸೀಮಿತವಾಗಿದ್ದು ವಿಪರ್ಯಾಸವಾಗಿದ್ದು ಕರ್ನಾಟಕ ರಕ್ಷಣಾ ವೇದಿಕೆ ಸ್ವಾಭಿಮಾನಿ ಬಣ ನಾಡು ನುಡಿ ಕನ್ನಡ ಸಂಸ್ಕೃತಿ ಉಳಿವಿಗಾಗಿ ಪ್ರಾಮಾಣಿಕ ಹೋರಾಟ ಮಾಡುತ್ತಿದೆ ಈಗಾಗಲೇ ಕೊಪ್ಪಳ ಜಿಲ್ಲೆಯಲ್ಲಿ ಮೂರು ಸಾವಿರ ಸದಸ್ಯರನ್ನು ಹೊಂದಿದ್ದು ಯಲಬುರ್ಗಾ ವಿಧಾನಸಭಾ ಕ್ಷೇತ್ರದಲ್ಲಿ 83 ಗ್ರಾಮಗಳಲ್ಲಿ ಗ್ರಾಮ ಘಟಕವನ್ನು ಆರಂಭಿಸಿದೆ ಹಾಗೂ ಮುಂದಿನ ದಿನಗಳಲ್ಲಿ



ಜಿಲ್ಲೆಯ ಪ್ರತಿ ಹಳ್ಳಿಗಳಲ್ಲಿ ಸ್ವಾಭಿಮಾನಿಗುಣ ಕಾರ್ಯ ನಿರ್ವಹಿಸಲಿದೆ. ಕೇವಲ ಹೇಳಿಕೊಳ್ಳಲು ಮಾತ್ರವಲ್ಲದೆ ಸಮಸ್ಯೆಗೆ ಸ್ಪಂದಿಸುವ ಕಾರ್ಯ ನಮ್ಮ ಬಣದಿಂದ ಆಗುತ್ತಿದ್ದು ಕ್ಷೇತ್ರದಲ್ಲಿ ಇರುವ ಸಮಸ್ಯೆಗಳ ಕುರಿತು ಮುಂದಿನ ದಿನಗಳಲ್ಲಿ ಬೃಹತ್ ಹೋರಾಟ ಮಾಡಲಾಗುವುದು ಎಂದು ಹೇಳಿದರು.

ಸ್ವಾಭಿಮಾನಿ ಬಣದ ಕೊಪ್ಪಳ ಜಿಲ್ಲಾಧ್ಯಕ್ಷ ಬಸವರಾಜ ಹಳ್ಳಿ ಮಾತನಾಡುತ್ತಾ ಇಡೀ ಜಿಲ್ಲೆಯಾದ್ಯಂತ ಭ್ರಷ್ಟಾಚಾರದ ವಿರುದ್ಧ ಹೋರಾಟ ಮಾಡುತ್ತ ಸಮಾಜಮುಖಿ ಕಾರ್ಯ ಮಾಡುವ ಉದ್ದೇಶವನ್ನು ಸಂಘಟನೆ ಹೊಂದಿದ್ದು ಇದ-ಕ್ಕೆ ಗ್ರಾಮೀಣಾಮಗಳ ಸದಸ್ಯರು ಸಂಘಟನೆಯ ಕೈಬಲ ಪಡಿಸಬೇಕು ಎಂದು ಕರೆ ನೀಡಿದರು.

## ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಭೂಮಿ ಪೂಜೆ





• ಮಲ್ಲಮ್ಮ ನುಡಿ ವಾರ್ತೆ ಸಿಂಧನೂರು

ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ ಅವರು ತಮ್ಮ ಸ್ಥಳೀಯ ಪ್ರದೇಶಾಭಿವೃದ್ಧಿ ಅನುದಾನದ ಅಡಿಯಲ್ಲಿ ಸಿಂಧನೂರು ತಾಲೂಕಿನ ಒಳಬಳ್ಳಾರಿ ಗ್ರಾಮದ ನಡೆದಾಡುವ ದೇವರೆಂದೇ ಪ್ರಸಿದ್ಧರಾದ ಶ್ರೀ ಮ.ನಿ.ಪ್ರ.ಚನ್ನಬಸವ ತಾತನವರ 43ನೇಯ ಜಾತ್ರಾ ಮಹೋತ್ಸವ ಸಂದರ್ಭದಲ್ಲಿ ಶ್ರೀಮಠದಲ್ಲಿ ನನ್ನ ಅನುದಾನದಲ್ಲಿ "ಸಭಾಭವನ" ಕಟ್ಟಡದ ಶಂಕುಸ್ಥಾಪನೆ ಕಾರ್ಯಕ್ರಮವನ್ನು ಹರಗುರುಚರ ಮೂರ್ತಿಗಳಿಂದ ನೆರವೇರಿಸಲಾಯಿತು.

ಸಿಂಧನೂರು ತಾಲೂಕಿನ ರವುಡಕುಂದಾ ಗ್ರಾಮದ ವೇದ ಪಾಠ ಶಾಲಾ, ಸಂಸ್ಥಾನ ಹಿರೇಮಠದ ಅಭಿವೃದ್ಧಿ ಕಾಮಗಾರಿಯ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಪೂಜ್ಯ ಗುರುಗಳೊಂದಿಗೆ ಭೂಮಿ ಪೂಜೆ ನೆರವೇರಿಸಲಾಯಿತು.

ಈ ವೇಳೆ ವೆಂಕಟೇಶ್ ರಾಗಲಪರ್ವಿ, ಯಂಕನಗೌಡ ಗಿಣಿವಾರ, ಶರಣಯ್ಯ ಕೋಟೆ, ಹೊನ್ನನ್ನಗೌಡ ಬೆಳಗುರ್ಕಿ, ಪಂಪಾಪತಿ ಅಲಬನುರು, ಶಿವಬಸನಗೌಡ, ರಂಗನಗೌಡ, ಚಂದ್ರಶೇಖರ್, ಶ್ಯಾಮಿದ ಸಬ್, ಕನಕಪ್ಪ, ಸದ್ದಾಂ, ಅಮರೇಶ್ ಗಿರಿಜಲಿ, ರಾಮಲಿಂಗಾರೆಡ್ಡಿ ಬೆಳಗುರ್ಕಿ, ಚನ್ನಬಸವ ಪನ್ನೂರು ಹಾಗೂ ಇತರರು ಉಪಸ್ಥಿತರಿದರು.

**ಸಿಂಧನೂರು ತಾಲ್ಲೂಕಿನ ರಾಮ ಕ್ಯಾಂಪಿನ ಸಾರ್ವಜನಿಕ ಸಮುದಾಯ ಭವನ ಕಾಮಗಾರಿಯ ಭೂಮಿ ಪೂಜೆ ಕಾರ್ಯಕ್ರಮದಲ್ಲಿ ಭಾಗವಹಿಸಿ, ಭೂಮಿ ಪೂಜೆ ನೆರವೇರಿಸಿ.ನಂತರ ಮಾತನಾಡಿದ ಶಾಸಕರು ಹಾಗೂ ವಿಧಾನ ಪರಿಷತ್ ಸದಸ್ಯರಾದ ಬಸನಗೌಡ ಬಾದರ್ಲಿ ಅವರು ಕಾಮಗಾರಿಗಳು ಕೆಲಸ ಗುಣಮಟ್ಟದಿಂದ ಕೂಡಿರಬೇಕು ಯಾವುದೇ ಕಾರಣಕ್ಕೂ ಕಳಪೆ ಕಾಮಗಾರಿ ಯಾಗದಂತೆ ಗುತ್ತಿಗೆದಾರರು ಮತ್ತು ಅಧಿಕಾರಿಗಳು ಎಚ್ಚರ ವಹಿಸಬೇಕು. ಮತ್ತು ಸ್ಥಳೀಯ ಸಾರ್ವಜನಿಕರಿಗೆ ತೊಂದರೆಯಾಗದಂತೆ ನೋಡಿಕೊಂಡು ಕಾಮಗಾರಿಗಳು ಕೆಲಸ ಮಾಡಬೇಕು ಯಾವುದೇ ಸಾರ್ವಜನಿಕರಿಂದ ಕಂಪ್ಲೀಟ್ ಬರುಕೂಡದು ಎಂದು ತಿಳಿಸಿದರು.**

## ಸಾವಿತ್ರಿಬಾಯಿ ಫುಲೆ ಪಾತ್ರದಾರಿಗಳಾಗಿ ಗಮನಸೆಳೆದ ಸಂಪ್ರೀತಿ, ಸಂಪ್ರೀಯಾ




**ಬಾಗಲಕೋಟ:** ನವನಗರದ ಲಿಟಲ್ ವಂಡರ್ಸ್ ಶಾಲೆಯಲ್ಲಿ ಸಾವಿತ್ರಿಬಾಯಿ ಫುಲೆ ಪಾತ್ರದಾರಿಗಳಾಗಿ ಪತ್ರಕರ್ತ ಸಂತೋಷ ಕಾಂಬಳೆ ಅವರ ಪುತ್ರಿಯರು ಎಲ್ಲರ ಗಮನಸೆಳೆದರು.

77ನೆಯ ಗಣರಾಜ್ಯೋತ್ಸವ ಕಾರ್ಯಕ್ರಮದ ಕೇಂದ್ರಬಿಂದುವಾಗಿ ವಿಜೃಂಭಯಿಸಿದ ಕುಮಾರಿ ಸಂಪ್ರೀತಿ ಕಾಂಬಳೆ ಹಾಗೂ ಕುಮಾರಿ ಸಂಪ್ರೀಯಾ ಕಾಂಬಳೆ ಅವರುಗಳ ವೇಷಭೂಷಣ ನಡೆ ನುಡಿ ಸರ್ವರನ್ನು ಮುಗ್ದರನ್ನಾಗಿ ಮೂಡಿಸುವಲ್ಲಿ ಯಶಸ್ವಿಯಾದರು.

ವೇದಿಕೆಯ ಮೇಲೆ ಕುಮಾರಿ ಸಂಪ್ರೀತಿ ಕಾಂಬಳೆ ರಾರಾಜಿಸಿದರೆ, ವೇದಿಕೆ ಕಾರ್ಯಕ್ರಮ ಸೇರಿದಂತೆ ಧ್ವಜಾರೋಹಣದಲ್ಲಿ ಅತಿಥಿಗಳೊಂದಿಗೆ ಕುಮಾರಿ ಸಂಪ್ರೀಯಾ ಕಾಂಬಳೆ ಪಾಲ್ಗೊಳ್ಳುವ ಮೂಲಕ ಎಲ್ಲರಲ್ಲೂ ಉತ್ಸಾಹ ತುಂಬುವಲ್ಲಿ ಯಶಸ್ವಿಯಾದರು.

ವೇದಿಕೆಯ ಮೇಲೆ ಉಪಸ್ಥಿತರಿದ್ದ ಸಂಸ್ಥೆಯ ಚೇರಮನ್ ಡಾ.ಪ್ರಕಾಶ ಗೌಡ, ಕಾರ್ಯದರ್ಶಿ ಶ್ರೀಮತಿ ವರಲಕ್ಷ್ಮೀ, ಪ್ರಾಶಂಪಾಲರಾದ ಶ್ರೀಮತಿ ಗಾಯತ್ರಿ ಅಶ್ರೀತ್ ಅವರುಗಳು ಮಾತನಾಡಿ ಮಕ್ಕಳ ವೇಷಭೂಷಣ ಹಾಗೂ ಅವರ ಶಿಸ್ತು ಬದ್ಧ ಚಟುವಟಿಕೆಗೆ ಮಾರು ಹೋಗಿ ಪ್ರಶಂಸೆ ವ್ಯಕ್ತಪಡಿಸಿದರು. ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ಶಾಲಾ ಸಿಬ್ಬಂದಿ ನಿರ್ವಹಿಸಿದರು.

## ವಿಜೃಂಭಣೆಯ 77ನೇ ಗಣರಾಜ್ಯೋತ್ಸವ



**ಬಳ್ಳಾರಿ:** ಜಿಲ್ಲಾ ಕಾಂಗ್ರೆಸ್ ಸಮಿತಿಯ ವತಿಯಿಂದ, ದೇಶದ 77ನೇ ಗಣರಾಜ್ಯೋತ್ಸವ ದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಜಿಲ್ಲಾ ಕಾಂಗ್ರೆಸ್ ಸಮಿತಿಯ ಪದಾಧಿಕಾರಗಳು ಹಾಗೂ ಕಾರ್ಯಕರ್ತರು ಧ್ವಜಾರೋಹಣ ಕಾರ್ಯಕ್ರಮವನ್ನು ಮಾಡಿ ರಾಷ್ಟ್ರಧ್ವಜದ ಕೀರ್ತಿ ಪತಾಕೆಯನ್ನು ಹಾರಿಸಿದರು. ನಂತರ ಮಹಾತ್ಮ ಗಾಂಧೀಜಿ ಮತ್ತು ಅಂಬೇಡ್ಕರ್‌ರವರ ಭಾವ ಚಿತ್ರಗಳಿಗೆ ಪುಷ್ಪಗಳನ್ನು ಹಾಕುವ ಮೂಲಕ ಗೌರವ ನಮನಗಳನ್ನು ಸಲ್ಲಿಸಲಾಯಿತು. ಪಕ್ಷದ ಮುಖಂಡರುಗಳು ಭಾಷಣಗಳಲ್ಲಿ ಸಂವಿಧಾನ ರಚನೆಗೆ ಶ್ರಮಿಸಿದ ಎಲ್ಲಾ ಮಹಾನೀಯರನ್ನು ಸ್ಮರಿಸಿದರು.

ಈ ಸಮಾರಂಭದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯ ಹಿರಿಯ ಮುಖಂಡರಾದ ಕಲ್ಲುಕಂಭ ಪಂಪಾಪತಿ, ಎಲ್.ಮರೆಣ್ಣ, ಡಿಸಿಸಿ ಕಾರ್ಯಾಧ್ಯಕ್ಷರಾದ ಭೋಯಪಾಟಿ ವಿಷ್ಣು, ಡಿಸಿಸಿ ಪ್ರದಾನ ಕಾರ್ಯದರ್ಶಿಯಾದ ಅಹಮ್ಮದ್, ಡಿಸಿಸಿ ಕಾರ್ಯದರ್ಶಿ ಸೂರ್ಯ ನಾರಾಯಣ, ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ವೆಂಕಟ ಲಕ್ಷ್ಮಿ ನಾರಾಯಣ, ನಗರ ಪ್ರಚಾರ ಸಮಿತಿಯ ಅಧ್ಯಕ್ಷರಾದ ಜಿ.ಎಸ್. ಈರನ್ನ ಗೌಡ, ಮುಂಚೂಣಿ ಘಟಗಳ ಅಧ್ಯಕ್ಷರುಗಳಾದ ಎರಕುಲ ಸ್ವಾಮಿ, ಕನೇಕಲ್ ಮಾಬುಸಾಬ್, ಮುರಾರ್ಜಿ ರೆಡ್ಡಿ, ಶೇಕ್ ಅಫಾಕ್ ಹುಸ್ಸೇನ್, ಅತ್ತವುಲ್ಲಾ, ಮುಖಂಡರುಗಳಾದ ಸಿದ್ದೇಶ್, ವೆಂಕಟಸ್ವಾಮಿ, ಸಂಗಣಕಲ್ ವಿಜಯ್ ಕುಮಾರ್, ನಾಗಭೂಷಣ್ ಗೌಡ, ಬತ್ರಿ ಮಹೇಶ್, ಪೃಥ್ವಿರಾಜ್, ಮಹಿಳಾ ಕಾರ್ಯಕರ್ತರಾದ ಪರ್ವೀನ್ ಭಾನು, ಬಿ.ಎ.ಮಲ್ಲೇಶ್ವರಿ, ವಿಜಯಕುಮಾರಿ, ಗೀತಾ, ನಸೀಮಾ ಭಾನು, ಎಂ.ಪಿ.ಕಮಲ, ಈರಮ್ಮ, ಆಫ್ರಿನ್, ಶ್ರೀಲತಾ ಮತ್ತು ಇತರರು ಉಪಸ್ಥಿತರಿದ್ದರು.

# ಅಂಬೇಡ್ಕರ್–ಗಾಂಧಿ ಫೋಟೋ ಇಲ್ಲದೇ ಗಣರಾಜ್ಯೋತ್ಸವ: ದಲಿತ ಸಮುದಾಯ ಆಕ್ರೋಶ

• ಮಲ್ಲಮ್ಮ ನುಡಿ ವಾರ್ತೆ ಬಳ್ಳಾರಿ

ಸಂವಿಧಾನದ ಶಿಲ್ಪಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಫೋಟೋಗಳಿಲ್ಲದೇ ಬಳ್ಳಾರಿ ಬಿಜೆಪಿ ಕಚೇರಿ ಆವರಣದಲ್ಲಿ 77ನೇ ಗಣರಾಜ್ಯೋತ್ಸವ ಆಚರಿಸಿರುವ ಘಟನೆ ಜಿಲ್ಲೆಯಾದ್ಯಂತ ಭಾರೀ ವಿವಾದಕ್ಕೆ ಕಾರಣವಾಗಿದೆ. ಈ ಕೃತ್ಯವನ್ನು ದಲಿತ ಸಮುದಾಯ ಹಾಗೂ ಪ್ರಗತಿಪರ ವಲಯಗಳು "ಸಂವಿಧಾನ ಮತ್ತು ಅದರ ರಚಯಿತನಿಗೆ ಮಾಡಿದ ಅಪಮಾನ" ಎಂದು ತೀವ್ರವಾಗಿ ಖಂಡಿಸಿವೆ.

ಬಿಜೆಪಿ ಕಚೇರಿಯಲ್ಲಿ ನಡೆದ ಗಣರಾಜ್ಯೋತ್ಸವದ ಫೋಟೋಗಳನ್ನು ಸ್ವತಃ ಬಿಜೆಪಿ ಮುಖಂಡರೇ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿದ್ದು, ಅದನ್ನು ಗಮನಿಸಿದ ಸರ್ವಜನಿಕರು ಹಾಗೂ ದಲಿತ ಮುಖಂಡರು ಬೆಚ್ಚಿಬಿದ್ದಿದ್ದಾರೆ. ಸಂವಿಧಾನ ದಿನಾಚರಣೆಯ ಸಮಾನ ಮಹತ್ವ ಹೊಂದಿರುವ ಗಣರಾಜ್ಯೋತ್ಸವದ ಸಂರ್ಭದಲ್ಲಿ ಡಾ. ಅಂಬೇಡ್ಕರ್ ಮತ್ತು ಮಹಾತ್ಮ ಗಾಂಧಿಯ ಚಿತ್ರಗಳಿಲ್ಲದೇ ಕರ್ಯಕ್ರಮ ನಡೆಸಿರುವುದು ಬಿಜೆಪಿ ಪಕ್ಷದ ಮಲತಾಯಿ ಧೋರಣೆಯ ಜೀವಂತ ಉದಾಹರಣೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಈ ವಿಚಾರಕ್ಕೆ ಸಂಬಂಧಿಸಿದಂತೆ ದಲಿತ ಸಂರ್ಷ ಸಮಿತಿ, ಭೀಮ್ ರ್ಮಿ ಸೇರಿದಂತೆ ಹಲವು ದಲಿತ ಮುಖಂಡರು ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು, "ಇದು ಕೇವಲ ನರ್ಲಕ್ಷ್ಯವಲ್ಲ, ಪರ್ವನಿಯೋಜಿತ ಅವಮಾನ" ಎಂದು ಆರೋಪಿಸಿದ್ದಾರೆ. ಸಂವಿಧಾನವೇ ಜೀವಾಳವಾಗಿರುವ ದೇಶದಲ್ಲಿ ಅದರ ಶಿಲ್ಪಿಯ ಫೋಟೋ ಇಲ್ಲದೇ ಗಣರಾಜ್ಯೋತ್ಸವ ಆಚರಿಸುವುದು ಸಂವಿಧಾನಾತ್ಮಕ ಮೌಲ್ಯಗಳಿಗೆ ಮಾಡಿದ ದ್ರೋಹ ಎಂದು ಅವರು ಕಟುವಾಗಿ ಟೀಕಿಸಿದ್ದಾರೆ.

ಘಟನೆಗೆ ಸಂಬಂಧಿಸಿದಂತೆ ಸರ್ವಜನಿಕರು ಬಳ್ಳಾರಿ ಮಾಜಿ ಶಾಸಕ ಸೋಮಶೇಖರ ರೆಡ್ಡಿ ಅವರಿಗೆ ದೂರವಾಣಿ ಮೂಲಕ ಪ್ರಶ್ನೆ ಮಾಡಿದ್ದು, "ಈ ಅವಮಾನಕ್ಕೆ ನಿಮ್ಮ ಬೆನ್ನೆಲೆ ಏನು?" ಎಂದು ಕಠಿಣವಾಗಿ ಕೇಳಿದ್ದಾರೆ. ಇದಕ್ಕೆ ಉತ್ತರಿಸಿದ ಸೋಮಶೇಖರ ರೆಡ್ಡಿ, "ನಾವು ಮೊದಲ ಮಹಡಿಯಲ್ಲಿ ಇರುವ ಕಚೇರಿಯಲ್ಲಿ ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಮಹಾತ್ಮ ಗಾಂಧಿ ಅವರ ಫೋಟೋಗಳಿಗೆ ಪೂಜೆ ಸಲ್ಲಿಸಿದ್ದೇವೆ. ನಂತರ ಕೆಳಗಡೆ ಧ್ವಜಾರೋಹಣ ಮಾಡಲಾಗಿದೆ. ಈ ಕುರಿತು ಜಿಲ್ಲಾ ಬಿಜೆಪಿ ಅಧ್ಯಕ್ಷ ಅನಿಲ್ ಕುಮಾರ್ ಮೋಕಾ ಅವರನ್ನು ಕೇಳಿ" ಎಂದು ಜವಾಬ್ದಾರಿ ತಪ್ಪಿಸುವ ಧೋರಣೆ ತೋರಿದ್ದಾರೆ.

ಆದರೆ ಈ ಉತ್ತರ ದಲಿತ ಮುಖಂಡರನ್ನು ಇನ್ನಷ್ಟು ಬೇಸರಗೊಳಿಸಿದ್ದು, "ಪೂಜೆ ಮಾಡಿದರೆ ಸಾಕಾ? ಸರ್ವಜನಿಕವಾಗಿ ನಡೆಯುವ ಗಣರಾಜ್ಯೋತ್ಸವ ಕರ್ಯಕ್ರಮದಲ್ಲಿ ಸಂವಿಧಾನದ ಶಿಲ್ಪಿಯ ಚಿತ್ರವೇ ಇರಬಾರದೇ?" ಎಂದು ಪ್ರಶ್ನಿಸಿದ್ದಾರೆ. ಇದು ಕೇವಲ ಆಡಳಿತಾತ್ಮಕ ತಪ್ಪಲ್ಲ, ದಲಿತ ಸಮುದಾಯದ ಭಾವನೆಗಳಿಗೆ ಮಾಡಿದ ಘೋರ ಅವಮಾನ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇನ್ನೊಂದೆಡೆ, ಸರ್ವಜನಿಕ ವಲಯದಲ್ಲಿ ಮಾಜಿ ಶಾಸಕ ಸೋಮಶೇಖರ ರೆಡ್ಡಿ ಹಾಗೂ ಬಿಜೆಪಿ ಜಿಲ್ಲಾ ಅಧ್ಯಕ್ಷ ಅನಿಲ್ ಕುಮಾರ್ ನಾಯ್ಡು (ಮೋಕಾ) ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕೆಂದು ಆಗ್ರಹ ಜೋರಾಗಿದೆ. "ಸಂವಿಧಾನವನ್ನು ನೆನಪಿಸುವ ದಿನವೇ ಅಂಬೇಡ್ಕರ್ ಅವರನ್ನು ಮರೆತ ಪಕ್ಷಕ್ಕೆ ನೈತಿಕತೆ ಇದೆಯೇ?" ಎಂಬ ಪ್ರಶ್ನೆ ಸರ್ವಜನಿಕರ ಮನಸ್ಸಿನಲ್ಲಿ ಮೂಡಿದೆ.

ಒಟ್ಟಾರೆ, ಬಳ್ಳಾರಿ ಬಿಜೆಪಿ ಕಚೇರಿಯಲ್ಲಿ ನಡೆದ ಈ ಘಟನೆ, ಬಿಜೆಪಿ ಪಕ್ಷದ ಒಳಗಿರುವ ಸಂವಿಧಾನ ವಿರೋಧಿ ಮನಸ್ಥಿತಿಯನ್ನು ಬಯಲಿಗೆ ತಂದಿದೆ ಎಂಬ ಆರೋಪಗಳು ಕೇಳಿಬರುತ್ತಿದ್ದು, ಮುಂದಿನ ದಿನಗಳಲ್ಲಿ ಈ ವಿಷಯ ರಾಜಕೀಯ ಹಾಗೂ ಸಾಮಾಜಿಕ ಹೋರಾಟದ ರೂಪ ಪಡೆಯುವ ಎಲ್ಲಾ ಲಕ್ಷಣಗಳು ಕಂಡುಬರುತ್ತಿವೆ.

Printed, Published and Owned by: Ramesh Reddy and Printed at Metropolitan Media Company Ltd., Plot No.224, in Sy.No.41/2, 41/B & 42, Kapnoor 2nd stage, Industrial Area, Kalburagi-585104. Published at Sy.No. 466, TMC No. 22-405, First Floor, Gada Complex, Opp. Inspection Bungalow, Humnabad-585330.Editor: Ramesh Reddy, Office Ph. No: +91 9449732000.

PRGI NO. 120927
(RNINO:KARKAN/2011/48371)